ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಸಂಪುಟ 3 ಸಂಚಿಕೆ 33

ರೂ. 5/-

ಆಗಸ್ಟ್ 16, 2009

ಕನ್ನಡ ವಾರಪತ್ರಿಕೆ





ಪ್ರತಿಮೆಗಳು ಮತ್ತು ರಾಜಕೀಯ




ಗ್ರಾಮ ಪಂಚಾಯತ್‌ಗಳ ಸಬಲತೆ ನೌಕರರ ಜೀವನ ಭದ್ರತೆ



ಹಣಕೋಣ ವಿದ್ಯುತ್ ಸ್ಥಾವರ : ಮಹಿಳೆಯರ ಮೇಲೆ ಪೊಲೀಸರ ಅಮಾನುಷ ದೌರ್ಜನ್ಯ

ದಕ್ಷಿಣ ಕನ್ನಡ : ರೈಲ್ವೆ ಸೌಲಭ್ಯ ಉಳಿಸಿಕೊಳ್ಳಲು ಹೋರಾಟ

ಸುರ್ಜಿತ್ ನೆನಪು



ಒಂದು ವರ್ಷದ ಹಿಂದೆ ಆಗಸ್ಟ್ 1 ರಂದು ನಿಧನರಾದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ಅಂತರಾಷ್ಟ್ರೀಯ ಖ್ಯಾತಿಯ ಕಮ್ಯೂನಿಸ್ಟ್ ಮುಖಂಡ ಹಾಗೂ ಸಿಪಿಐ(ಎಂ)ನ ಹಿಂದಿನ ಪ್ರಧಾನ ಕಾರ್ಯದರ್ಶಿ ಕಾಂ.ಹರ್ಕಿಶನ್ ಸಿಂಗ್ ಸುರ್ಜಿತ್‌ರವರನ್ನು ಅವರ ನಿಧನದ ಮೊದಲ ವಾರ್ಷಿಕದಂದು ನೆನಪಿಸಿಕೊಳ್ಳಲಾಯಿತು.

ಅವರ ಹುಟ್ಟೂರು ಪಂಜಾಬಿನ ಬಂದಾಲದಲ್ಲಿ ಒಂದು ಸಾರ್ವಜನಿಕ ಸಭೆಯನ್ನು ಈ ಸಂದರ್ಭದಲ್ಲಿ ಏರ್ಪಡಿಸಲಾಗಿತ್ತು. ರಾಜ್ಯದ ಎಲ್ಲೆಡೆಯಿಂದ ಬಂದ ಜನಗಳು ಇದರಲ್ಲಿ ಭಾಗವಹಿಸಿದರು. ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಪ್ರಕಾಶ ಕಾರತ್, ಕೇಂದ್ರ ಕಾರ್ಯದರ್ಶಿ ಮಂಡಳಿ ಸದಸ್ಯ ನಿಲೋತ್ಪಲ್ ಬಸು, ಸಿಪಿಐ(ಎಂ) ಪಂಜಾಬ್ ರಾಜ್ಯ ಕಾರ್ಯದರ್ಶಿ ಚರಣ್‌ಸಿಂಗ್ ವಿರ್ದಿ ಮತ್ತಿತರ ಸಿಪಿಐ(ಎಂ) ರಾಜ್ಯ ಮುಖಂಡರು ಹಾಗೂ ಲೋಕ್ ಭಲಾಯಿ ಪಾರ್ಟಿಯ ಅಧ್ಯಕ್ಷ ಎಸ್.ಬಲವಂತಸಿಂಗ್ ರಾಮುವಾಲಿಯಾ ಹಾಗೂ ಶಿರೋಮಣಿ ಅಕಾಲಿದಳದ ಮುಖಂಡ ಪರಮಜಿತ್ ಸಿಂಗ್ ಸಿದ್ವಾನ್ ಸಭೆಯನ್ನುದ್ದೇಶಿಸಿ ಮಾತನಾಡಿದರು.

ತಮ್ಮ ಸಮಸ್ತ ಬದುಕನ್ನು ದುಡಿಯುವ ವರ್ಗದ ಏಳಿಗೆಗಾಗಿ ದುಡಿಯಲು ಸಮರ್ಪಿಸಿಕೊಂಡ ಕಾಂ.ಸುರ್ಜಿತ್‌ರವರ ಬದುಕಿನಿಂದ ನಾವು ಕಲಿಯಬೇಕು ಎಂದು ಪ್ರಕಾಶ ಕಾರತ್ ಹೇಳಿದರು. ದೇಶದಲ್ಲಿ ಕಮ್ಯೂನಿಸ್ಟ್ ಆಂದೋಲನವನ್ನು ಕಟ್ಟಿ ಬೆಳೆಸುವಲ್ಲಿ, ಸ್ವಾತಂತ್ರ್ಯ ಸಮರವನ್ನು ಸಂಘಟಿಸುವಲ್ಲಿ ಅವರ ಕೊಡುಗೆಗಳನ್ನು ನೆನಪಿಸಿಕೊಳ್ಳಬೇಕು. ಈಗ ಇಡೀ ವಿಶ್ವದ ಕಾರ್ಮಿಕ ವರ್ಗದ ಮೇಲೆ ಸಾಮ್ರಾಜ್ಯಶಾಹಿ ಶಕ್ತಿಗಳು ಉದಾರೀಕರಣ, ಖಾಸಗೀಕರಣ ಮತ್ತು ಸಾಮ್ರಾಜ್ಯಶಾಹಿಪರ ಜಾಗತೀಕರಣದ ನೀತಿಗಳನ್ನು ಹೇರಿ ದಾಳಿ ನಡೆಸುತ್ತಿರುವಾಗ ಅವರು ನಮ್ಮೊಂದಿಗೆ ಇಲ್ಲ. ಅಮೇರಿಕನ್ ಸಾಮ್ರಾಜ್ಯಶಾಹಿ ನಮ್ಮ ಸ್ವತಂತ್ರ ವಿದೇಶಾಂಗ ನೀತಿಯ ಮೇಲೂ ಗಂಭೀರ ದಾಳಿ ನಡೆಸಿದೆ. ಹಿಂದಿನ ಎನ್‌ಡಿಎ ಸರಕಾರವೂ ಈ ನೀತಿಗಳ ದುಷ್ಪರಿಣಾಮಗಳಿಗೆ ಕಾರಣ. ಇವು ಕಾರ್ಮಿಕ ವರ್ಗದ ಹಿತಾಸಕ್ತಿಗಳಿಗೆ ಅಪಾಯಕಾರಿ. ಈ ಸವಾಲುಗಳನ್ನು ಎದುರಿಸಲು ಭಾರತದಲ್ಲಿ ಒಂದು ಬಲಿಷ್ಟ ಕಾರ್ಮಿಕ ಆಂದೋಲನವನ್ನು ಕಟ್ಟುವ ಪ್ರತಿಜ್ಞೆ ಕೈಗೊಳ್ಳುವುದೇ ಕಾಮ್ರೇಡ್ ಸುರ್ಜಿತ್‌ರವರಿಗೆ ನಾವು ಸಲ್ಲಿಸುವ ನಿಜವಾದ ಶ್ರದ್ಧಾಂಜಲಿ ಎಂದು ಪ್ರಕಾಶ್ ಕಾರತ್ ಹೇಳಿದರು. ○

ಸುಭಾಷ್ ಚಕ್ರವರ್ತಿ ಅಗಲಿಕೆ

ಪಶ್ಚಿಮ ಬಂಗಾಳದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು, ಕ್ರೀಡಾ ಮತ್ತು ಯುವಜನ ಸಚಿವರೂ ಆಗಿದ್ದ ಕಾಂ: ಸುಭಾಷ್ ಚಕ್ರವರ್ತಿ ತಮ್ಮ 68ನೇ ವಯಸ್ಸಿನಲ್ಲಿ ನಮ್ಮನ್ನು ಅಗಲಿದ್ದಾರೆ.



ಸುಭಾಷ್ ಚಕ್ರವರ್ತಿಯವರು 1958ರಲ್ಲಿ ಅವಿಭಜಿತ ಕಮ್ಯುನಿಸ್ಟ್ ಪಕ್ಷವನ್ನು ಸೇರಿದ್ದರು. ವಿದ್ಯಾರ್ಥಿ ಚಳುವಳಿಯ ಮೂಲಕ ಎಡ ರಾಜಕೀಯ ಚಳುವಳಿಯಲ್ಲಿ ಪ್ರವೇಶಿಸಿದ ಸುಭಾಷ್ 1972-77ರ ನಡುವೆ ಸಿಪಿಐ(ಎಂ) ಪಕ್ಷದ ಮೇಲೆ ಕಾಂಗ್ರೆಸ್ ಹರಿಯಬಿಟ್ಟ ಭೀಕರ ಅರೆ ಫ್ಯಾಸಿಸ್ಟ್ ಧಾಳಿಗಳನ್ನು ಬಹಳ ಧೀಮಂತಿಕೆ ಎದುರಿಸಿ, ಸಾಮೂಹಿಕ ಚಳುವಳಿ ರೂಪಿಸಿದ ಜನಪ್ರಿಯ ನಾಯಕರಾಗಿದ್ದರು. 1967ರಲ್ಲಿ ಕೊಲ್ಕತ್ತಾದ ಅಂದಿನ ದಕ್ಷಿಣ ಡಂ ಡಂ ಮುನಿಸಿಪಾಲಿಟಿಯ ಸದಸ್ಯರಾಗಿ ಚುನಾಯಿತರಾದ ಸುಭಾಷ್ 1977ರಲ್ಲಿ ಬೆಲ್ಗಚಿಯಾ ವಿಧಾನಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾದರು. 1982ರಲ್ಲಿ ಎಡರಂಗ ಸರ್ಕಾರದ ಸಚಿವರಾದ ಸುಭಾಷ್, ಬಕ್ರೇಶ್ವರ ಥರ್ಮಲ್ ವಿದ್ಯುತ್ ಘಟಕ ಸ್ಥಾಪನೆ, ಹಲ್ದಿಯಾ ಪೆಟ್ರೋ ರಾಸಾಯನಿಕ ಕೈಗಾರಿಕಾ ಸಂಕೀರ್ಣದ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

60 ರ ದಶಕದಲ್ಲಿ ಪಶ್ಚಿಮ ಬಂಗಾಳದಲ್ಲಿ ಆಹಾರ ಚಳುವಳಿ ಬೆಲೆ ಏರಿಕೆ ವಿರೋಧಿ ಚಳುವಳಿ, ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಮರ್ಥ ನಾಯಕತ್ವ ನೀಡಿದ ಸುಭಾಷ್ ಚಕ್ರವರ್ತಿಯವರು ಇತ್ತೀಚೆಗೆ ಶ್ವಾಸಕೋಶದ ಸೋಂಕಿಗೆ ತುತ್ತಾಗಿ ಆಸ್ಪತ್ರೆ ಸೇರಿದ್ದರು. ಅಗಲಿದ ಸಂಗಾತಿಗೆ ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸಂತಾಪ ಸಲ್ಲಿಸಿದೆ. ಸುಭಾಷ್ ಚಕ್ರವರ್ತಿಯವರು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ನ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಯಾಗಿಯೂ ದುಡಿದಿದ್ದರು.

ಎಲ್ಲೈಸಿ ತಿದ್ದುಪಡಿ ಮಸೂದೆ-ಖಾಸಗೀಕರಣದತ್ತ ಒಂದು ದೊಡ್ಡ ಹೆಜ್ಜೆ

ನೌಕರರ ದೇಶವ್ಯಾಪಿ ಮುಷ್ಕರ

ಯುಪಿಎ ಸರಕಾರ ಜುಲೈ 31ರಂದು ಲೋಕಸಭೆಯಲ್ಲಿ ಎಲ್‌ಐಸಿ(ತಿದ್ದುಪಡಿ) ಮಸೂದೆ, 2009ನ್ನು ಮಂಡಿಸಿದೆ. ಇದು ಜನ-ವಿರೋಧಿ, ದೇಶ-ವಿರೋಧಿ ಕ್ರಮ ಎಂದು ಪ್ರತಿಭಟಿಸಿ ದೇಶಾದ್ಯಂತ ಎಲ್‌ಐಸಿ ನೌಕರರು ಅಗಸ್ಟ 4 ರಂದು ತಮ್ಮ ಕಚೇರಿಗಳಿಂದ ಹೊರ ನಡೆದು ಎರಡು ಗಂಟೆಗಳ ಮುಷ್ಕರ ನಡೆಸಿದ್ದಾರೆ. ಅಖಿಲ ಭಾರತ ವಿಮಾನೌಕರರ ಸಂಘ ಈ ಮುಷ್ಕರಕ್ಕೆ ಕರೆ ನೀಡಿತ್ತು.

ಈ ಮಸೂದೆಯಲ್ಲಿ ಮೂರು ಅಂಶಗಳಿವೆ. ಒಂದು, ಎಲ್‌ಐಸಿಯಲ್ಲಿ ಈಗ ಸರಕಾರದ ಹೂಡಿಕೆ 5ಕೋಟಿರೂಪಾಯಿ. ಅದನ್ನು 100 ಕೋಟಿ ರೂಪಾಯಿಗಳಿಗೆ ಹೆಚ್ಚಿಸುವುದು; ಎರಡು, ಈಗ ಲಾಭದಲ್ಲಿ 95ಶೇಕಡಾವನ್ನು ಪಾಲಿಸಿದಾರರಿಗೆ ಅವರ ವಿಮಾ ಪಾಲಿಸಿಗಳ ಮೇಲೆ ಬೋನಸ್ ಆಗಿ ಹಂಚಲಾಗುತ್ತಿದೆ. ಉಳಿದ 5 ಶೇಕಡಾವನ್ನು ಸರಕಾರದ ಹೂಡಿಕೆಗೆ ಲಾಭಾಂಶವಾಗಿ ಕೊಡಲಾಗುತ್ತಿದೆ. ಈ ತಿದ್ದುಪಡಿ ಸರಕಾರದ ಪಾಲನ್ನು ದ್ವಿಗುಣಗೊಳಿಸುತ್ತದೆ. ಅಂದರೆ ಪಾಲಿಸಿದಾರರ ಪಾಲಿನಲ್ಲಿ 5 ಶೇಕಡಾ ಕಡಿತ ತರುತ್ತದೆ; ಮೂರು, ಈಗ ಎಲ್‌ಐಸಿಯ ಪಾಲಿಸಿಗಳಿಗೆ ಇರುವ ಸರಕಾರದ ಭದ್ರತೆಯನ್ನು ಕ್ರಮೇಣ ಹಿಂತೆಗೆದುಕೊಳ್ಳಲು ಸರಕಾರಕ್ಕೆ ಅಧಿಕಾರ ಕೊಡುವುದು.

95 ಕೋಟಿ ರೂ. ಹೆಚ್ಚಿನ ಬಂಡವಾಳ ಹೂಡಿ ತಾನು ಎಲ್‌ಐಸಿಯನ್ನು ಸದೃಢಗೊಳಿಸುತ್ತಿರುವುದಾಗಿ ನಂಬಿಸಲು ಸರಕಾರ ಪ್ರಯತ್ನಿಸುತ್ತಿದೆ. ಆದರೆ ಎಲ್‌ಐಸಿಯ ಆರ್ಥಿಕ ಬಲಾಢ್ಯತೆಯನ್ನು ಕಂಡರೆ ಇದರಲ್ಲಿ ಹುರುಳಿಲ್ಲ ಎಂಬುದು ಸ್ಪಷ್ಟವಾಗುತ್ತದೆ ಎಂದು ನೌಕರರು ಹೇಳುತ್ತಾರೆ. ಎಲ್‌ಐಸಿಯ ಒಟ್ಟು ಆಸ್ತಿಯ ಮೊತ್ತ 9ಲಕ್ಷ ಕೋಟಿ ರೂಪಾಯಿಗಳು. ಇದು ಪಾಲಿಸಿದಾರರಿಗೆ ತೆರಬೇಕಾದುದಕ್ಕಿಂತ 1.25 ಲಕ್ಷ ಕೋಟಿಗೂ ಹೆಚ್ಚು. ಇಂತಹ ಸಂಸ್ಥೆಗೆ ಸರಕಾರದ 95 ಕೋಟಿ ರೂ.ಗಳ ಅಗತ್ಯವೇನಿಲ್ಲ. ಇದರ ಹಿಂದಿರುವ ಉದ್ದೇಶ ನಿಜವಾಗಿಯೂ ಬೇರೇನೇ. 13 ವರ್ಷಗಳ ಕೆಳಗೆ ವಿಮಾವಲಯವನ್ನು ಖಾಸಗಿಯವರಿಗೆ ತೆರೆಯುವ ಪ್ರಕ್ರಿಯೆ ಆರಂಭವಾಗುವ ಮೊದಲು ನೇಮಿಸಿದ ಮಲ್ಹೋತ್ರ ಆಯೋಗ ಎಲ್‌ಐಸಿಯ ಶೇರು ಬಂಡವಾಳವನ್ನು 100ಕೋಟಿ ರೂ.ಗಳಿಗೆ ಏರಿಸಬೇಕು ಹಾಗೂ ಅದರಲ್ಲಿ 50 ಶೇಕಡಾ ಶೇರು ವಿಕ್ರಯ ನಡೆಸಬೇಕು ಎಂದು ಶಿಫಾರಸು ಮಾಡಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅಂದರೆ ಎಲ್‌ಐಸಿಯನ್ನು ಖಾಸಗಿಯವರಿಗೆ ಒಪ್ಪಿಸುವ ಹುನ್ನಾರ ಇದರ ಹಿಂದಿದೆ ಎಂದು ವಿಮಾ ನೌಕರರು ಎಚ್ಚರಿಸಿದ್ದಾರೆ.

ಎಲ್‌ಐಸಿ ಸುಮಾರು 26 ಕೋಟಿ ಪಾಲಿಸಿದಾರರನ್ನು ಹೊಂದಿದೆ. ಸರಕಾರ ಈ ತಿದ್ದುಪಡಿಯ ಮೂಲಕ ಇವರ ಲಾಭಾಂಶವನ್ನು ಕಡಿತಗೊಳಿಸಿ ತನ್ನ ಲಾಭಾಂಶವನ್ನು ದ್ವಿಗುಣಗೊಳಿಸಿಕೊಳ್ಳಲು ಹೊರಟಿದೆ.

ಎಲ್‌ಐಸಿಯ ಒಡೆತನ ಸರಕಾರದ್ದು. ಆದ್ದರಿಂದ ಅದರ ಪಾಲಿಸಿಗಳಿಗೆ ಸರಕಾರ ಭದ್ರತೆ ನೀಡಬೇಕಾದ್ದು ಸಹಜ. ಆದರೆ ಇದರಿಂದ ತಮಗೆ ತೊಂದರೆಯಾಗುತ್ತದೆ ಎಂಬ ಖಾಸಗಿಯವರ ಕೂಗಿಗೆ ತಲೆಬಾಗಿ ಎಲ್‌ಐಸಿ ಪಾಲಿಸಿಗಳ ಮೇಲಿನ ತನ್ನ ಭದ್ರತೆಯ ಹಿಂತೆಗೆದುಕೊಳ್ಳಲು ಸರಕಾರ ಹೊರಟಿದೆ ಎಂ ನೌಕರರು ಹೇಳುತ್ತಾರೆ.

ಯುಪಿಎ-2 ಸರಕಾರ ಈಗ ಸಾರ್ವಜ ವಲಯದ ಉದ್ದಿಮೆಗಳ ಶೇರು ಮಾರಾಟದ ಮೂ ವಾಸ್ತವವಾಗಿ ಈ ಉದ್ದಿಮೆಗಳಲ್ಲಿ ಜನರು ಪಾ ಪಡೆಯುವಂತೆ ಮಾಡುತ್ತಿದ್ದೇವೆ ಎಂ ಹೇಳಲಾರಂಭಿಸಿದೆ. ವಾಸ್ತವವಾಗಿ ಎಲ್‌ಐಸಿ ದೇ ಸೊತ್ತು. ಶೇರು ವಿಕ್ರಯದ ಮೂಲಕ ಅದನ್ನು ಶೇ ಮಾರುಕಟ್ಟೆ ವ್ಯವಹಾರದಲ್ಲಿ ಭಾಗವಹಿಸ ಹಿಡಿಯಷ್ಟು ಮಂದಿಯ ಕೈಗಳಿಗೆ ಸರಕಾ ವರ್ಗಾಯಿಸ ಬೇಕೆಂದಿದೆ ಎಂದಿರುವ ಅಖಿಲ ಭಾ ವಿಮಾ ನೌಕರರ ಸಂಘ ಮುಂಬರುವ ದಿನಗ ಈ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸುವುದು ಹೇಳಿದೆ.

ನಾಳಿನ ಕಾರ್ಯಕ್ರಮಗಳು

- AIAWU ಅಖಿಲ ಭಾರತ ಜನರಲ್ ಕೌನ್ಸಿಲ್ ಸಭೆಯ ಬಹಿರಂಗ ಸಭೆ **ಆಗಸ್ಟ್ 9, 2009** ಮಧ್ಯಾಹ್ನ 12.00 ಕ್ಕೆ ಸರ್ಕಾರಿ ಬಾಲಕಿಯರ ಪ್ರೌಢ ಶಾಲೆ ಆವರಣ, ಮಳವಳ್ಳಿ
- ಅಸಂಘಟಿತ ಕಾರ್ಮಿಕರ 'ಸೆಪ್ಟೆಂಬರ್ ಹೋರಾಟ' ಕುರಿತು 'ಕಾರ್ಮಿಕರ ಸಮಾವೇಶ' ಸಂಜೆ 4 ಕ್ಕೆ **ಆಗಸ್ಟ್ 7, 2009.** ವೆಂಕಟೇಶ್ವರ ಕಲ್ಯಾಣ ಮಂಟಪ, ಯಶವಂತಪುರ, ಬೆಂಗಳೂರು.
- ಬೆಲೆ ಏರಿಕೆ ವಿರೋಧಿ ರಾಜಭವನ ಚಲೋ ಜೆಎಂಎಸ್ ನಿಂದ. **ಆಗಸ್ಟ್ 10 2009.** ಎಂ.ಜಿ.ರಸ್ತೆಯಿಂದ (ಬೆಂಗಳೂರು).
- ಬಿಎಸ್‌ಎನ್‌ಎಲ್ ಗುತ್ತಿಗೆ ಕಾರ್ಮಿಕರ ಯೂನಿಯನ್‌ನಿಂದ ಕನಿಷ್ಟ ವೇತನಕ್ಕೆ ಎಂ.ಡಿ. ಗೆ ಮನವಿ. ತಾಲ್ಲೂಕು/ ಜಿಲ್ಲಾ ಕೇಂದ್ರಗಳಲ್ಲಿ **13 ಆಗಸ್ಟ್ 2009**
- ದಲಿತ ಪ್ರಶ್ನೆಗಳ ಕುರಿತ ರಾಜ್ಯಮಟ್ಟದ ಅಧ್ಯಯನ ಶಿಬಿರ, ಸಿಪಿಐ(ಎಂ) ನಿಂದ **ಆಗಸ್ಟ್ 14-15, 2009** ಗಂಗಾವತಿ, ಕೊಪ್ಪಳ ಜಿಲ್ಲೆ
- ಸ್ವಾತಂತ್ರ್ಯ ಸಂರಕ್ಷಣಾ ದಿನದ ಭಾಗವಾಗಿ ಸ್ವಾತಂತ್ರ್ಯ ಸಂರಕ್ಷಣಾ ಜ್ಯೋತಿ **ಆಗಸ್ಟ್ 15, 2009** ಹಂಪಿಯಿಂದ ಹೊಸಪೇಟೆಗೆ, ಬೆಳಿಗ್ಗೆ 7 ರಿಂದ 11.30. ಡಿವೈಎಫ್‌ಐ - ಎಆರ್‌ಡಿಯು - ಸಿಡಬ್ಲ್ಯೂಎಫ್‌ಐ - ನಿಂದ
- ಸಿಐಟಿಯು ಮಡಿವಾಳ ವಲಯ (ಬೆಂಗಳೂರು) ಸಮಾವೇಶ **16 ಆಗಸ್ಟ್ 2009**
- ಡಿವೈಎಫ್‌ಐ ತಾಲ್ಲೂಕು ಮಟ್ಟದ ಶಿಬಿರ **23 ಆಗಸ್ಟ್ 2009** ರೈತಭವನ, ಹೊಸಪೇಟೆ
- ನಾಗರಿಕ ವೇದಿಕೆ ಸಮಾವೇಶ- ಬೆಂಗಳೂರು ಅಭಿವೃದ್ಧಿ ಕುರಿತು **25 ಆಗಸ್ಟ್ 2009,** ಎನ್‌ಜಿಓ ಹಾಲ್, ಬೆಂಗಳೂರು

ತಿರುವಳ್ಳುವರ್ ಕವಿ ಹಾಗೂ ಅವರ ಪ್ರತಿಮೆಯ ವಿವಾದ

ಜಿ.ಎನ್.ನಾಗರಾಜ್

ತಿರುವಳ್ಳುವರ್ ತಮಿಳಿನಲ್ಲಿ ತಿರುಕ್ಕುರುಳ್ ಎಂಬ ಪ್ರಸಿದ್ಧ ಲೋಕನೀತಿಯ ಸಾಹಿತ್ಯ ಕೃತಿಯೊಂದನ್ನು ರಚಿಸಿದ ಕವಿ. ತಮಿಳುನಾಡಿನಲ್ಲಿ ಅತ್ಯಂತ ಜನಪ್ರಿಯವಾದ ಪ್ರಾಚೀನ ಕವಿ. ತಮಿಳುನಾಡಿನ ಅನೇಕ ಹಳ್ಳಿಗಳಲ್ಲಿ ನಗರಗಳ ಅನೇಕ ಪ್ರದೇಶ ವಿಸ್ತರಣಗಳಲ್ಲಿ ಅವನ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ತಮಿಳುನಾಡಿನ ಇತ್ತೀಚಿನ ಅತ್ಯಂತ ಜನಪ್ರಿಯ ರಾಜಕೀಯ ನಾಯಕರಾದ ಅಣ್ಣಾದೊರೈ, ಎಂ.ಜಿ.ರಾಮಚಂದ್ರನ್‌ರವರ ಪ್ರತಿಮೆಗಳಿಗಿಂತಲೂ ಸಂಖ್ಯೆಯಲ್ಲಿ ಸ್ವಲ್ಪ ಹೆಚ್ಚೇನೊ ಎಂಬಂತೆ ತಿರುವಳ್ಳುವರ್ ರವರ ಪ್ರತಿಮೆಗಳು ವಿರಾಜಿಸಿವೆ.

ಅವರ ಕೃತಿ ತಿರುಕ್ಕುರಳ್ ಕೂಡ ಅತ್ಯಂತ ಜನಪ್ರಿಯವಾದ ಗ್ರಂಥ.' ಸುಲಭಶೈಯಲ್ಲಿ 'ವೇಣ್ಬಾ' ಎಂಬ ಎರಡೇ ಸಾಲಿನ ಛಂದಸ್ಸಿನಲ್ಲಿ ಬರೆದ ಈ ಪದ್ಯಗಳು ಗಾದೆ ಮಾತುಗಳಂತೆ ಸಾಮಾನ್ಯ ಜನರ ಸಂಭಾಷಣೆಯಿಂದ ಹಿಡಿದು ಸಾಹಿತ್ಯ, ಸಂಸ್ಕೃತಿಯ ವಿಚಾರ ಸಂಕಿರಣ, ರಾಜಕೀಯ ವೇದಿಕೆಗಳಲ್ಲೂ ಪದೇ ಪದೇ ಉಲ್ಲೇಖಗೊಳ್ಳುತ್ತವೆ.

ತಿರು ಎಂದರೆ ತಮಿಳಿನಲ್ಲಿ ಶ್ರೀ ಎಂದರ್ಥ. ಹೀಗೆ ವಳ್ಳುವರ್ ಎಂಬ ಕವಿ ಬರೆದ ಕುರುಳ್ ಗ್ರಂಥ ಕ್ರಿ.ಶ 2 ರಿಂದ 4ನೇ ಶತಮಾನಗಳ ಅವಧಿಯಲ್ಲಿ ಬರೆಯಲ್ಪಟ್ಟಿರಬಹುದು ಎಂದು ವಿದ್ವಾಂಸರ ಅಭಿಪ್ರಾಯ. ಕೆಳಜಾತಿಯಲ್ಲಿ ಅಂತರ್ಜಾತಿ ಸಂಬಂಧದಲ್ಲಿ ಹುಟ್ಟಿ ಮೂರನೆಯ ಜಾತಿಯವರೊಬ್ಬರ ಮನೆಯಲ್ಲಿ ಬೆಳೆದ ಕವಿ ಎಂದು ಪ್ರತೀತಿ. ಇದು ಕೂಡ ಅಪಾರ ಜನಪ್ರಿಯತೆಗೆ ಕಾರಣವಾಗಿದೆ.

ತಮಿಳುನಾಡಿನಲ್ಲಿ ಪ್ರವಾಸ ಮಾಡುತ್ತಾ ತಿರುವಳ್ಳುವರ್‌ರವರ ಪ್ರತಿಮೆ ಮತ್ತು ಅವರ ಮಾತುಗಳನ್ನು ಕೇಳುತ್ತಾ ಇರುವಾಗ ಕನ್ನಡ ನಾಡಿನಲ್ಲಿ ಇಂತಹ ಗೌರವ ಜನಪ್ರಿಯತೆಯನ್ನು ಪಡೆದ, ಇಷ್ಟೊಂದು ಮೂರ್ತಿ ಪ್ರತಿಷ್ಠಾಪನೆಯಾಗಿರುವ ಒಬ್ಬ ಕವಿಯಿದ್ದಾರೆಯೇ? ಪ್ರಶ್ನೆ ಎದುರಾಗುತ್ತದೆ. ಇಲ್ಲಿ ಅಂತಹ ಅವಕಾಶ ಕನ್ನಡ ನಾಡಿನ ಒಬ್ಬ ಪ್ರಾಚೀನ, ಆಧುನಿಕ ಕವಿಗೂ ಸಿಕ್ಕಿಲ್ಲ. ನವೋದಯ ಕಾಲದ ಪ್ರಮುಖ ಕವಿ 'ರಾಷ್ಟ್ರ ಕವಿ ಕುವೆಂಪು' ರವರು ಮಾತ್ರ ಕೆಲವೆಡೆ ಮೂರ್ತಿಗೊಂಡು ಗೌರವಿಸಲ್ಪಟ್ಟಿದ್ದಾರೆ.

1991 ರಲ್ಲಿ ಪ್ರತಿಮೆ ಸ್ಥಾಪನೆಯ ಪ್ರಯತ್ನ

ಇಂತಹ ಜನಪ್ರಿಯ ಕವಿಯೊಬ್ಬನ ಪ್ರತಿಮೆಯನ್ನು ಬೆಂಗಳೂರಿನ ತಮಿಳುಸಂಘ ಅಲಸೂರಿನ ಕೆರೆಯ ಬಳಿ ಸ್ಥಾಪಿಸಲು ಪ್ರಯತ್ನ ಆರಂಭಿಸಿತು. ಪ್ರತಿಮೆಗಾಗಿ ಹಣ ಸಂಗ್ರಹಿಸಿ ಮೂರ್ತಿಯ ನಿರ್ಮಾಣ ಮಾಡಿಸಿತು. ಬೆಂಗಳೂರು ನಗರಪಾಲಿಕೆಯ ಬಳಿ ಜಾಗಕ್ಕಾಗಿ ಅರ್ಜಿ ಸಲ್ಲಿಸಿತು.

ಒಬ್ಬ ಕವಿಯ ಬಗ್ಗೆ ನಾಗರಿಕರು ಸ್ವಯಂ ಪ್ರಯತ್ನದಿಂದ ಹಣ ಸಂಗ್ರಹಿಸಿ ರೂಪಿಸಿದ ಪ್ರತಿಮೆಯ ಬಗ್ಗೆ ಮೆಚ್ಚುಗೆ ಶ್ಲಾಘನೆ, ಪ್ರೋತ್ಸಾಹ ಇದು ಸ್ವಾಭಾವಿಕವಾಗಿ ಲಭಿಸಬೇಕಾಗಿತ್ತು. ಆದರೆ ಕಾರ್ಪೊರೇಷನ್ ಸಭೆಯಲ್ಲಿ ಬೆಂಗಳೂರಿನಲ್ಲಿ ತಲೆಯೆತ್ತಿರುವ ಭಾಷಾಂಧತೆ ಪ್ರತಿಫಲಿಸಿತು. ವಾದ, ವಿವಾದಗಳು ಆರಂಭವಾದವು. ಹೈಕೋರ್ಟ್ ಮೆಟ್ಟಿಲು ಹತ್ತಿ ತಡೆಯಾಜ್ಞೆಯೂ ಸಿಕ್ಕಿತು. ಆಗ ಕನ್ನಡ ಶಕ್ತಿ ಕೇಂದ್ರ ಎಂಬ ಕನ್ನಡ ಭಾಷಾಂಧ ಸಂಘಟನೆಯ ಪ್ರಮುಖರಾಗಿದ್ದ ಚಿದಾನಂದಮೂರ್ತಿಯವರೂ ಕೂಡ ತಲೆಹಾಕಿದರು. ಮದ್ರಾಸಿನಲ್ಲಿ ಸರ್ವಜ್ಞನ ಮೂರ್ತಿ ಸ್ಥಾಪಿಸಲಿ ಎಂಬ ಬೇಡಿಕೆ ಎತ್ತಿದರು.

ಹೀಗೆ 1991 ರ ಸೆಪ್ಟೆಂಬರ್ 1 ರಂದು ಅಂದಿನ ಮುಖ್ಯಮಂತ್ರಿ ಬಂಗಾರಪ್ಪನವರು ಅನಾವರಣಗೊಳಿಸಬೇಕಾಗಿದ್ದ ಪ್ರತಿಮೆ ಅಲ್ಲಿಂದ ಇಲ್ಲಿಯವರೆಗೆ ಬೆಳಕು ಕಾಣದೆ ಮುಚ್ಚಿಡಲ್ಪಟ್ಟಿದೆ.

"ಸರ್ವಜ್ಞನೆಂಬುವನು ಗರ್ವದಿಂದಾವನೆ"

ತಿರುವಳ್ಳುವರ್‌ರವರ ಪ್ರತಿಮೆಯ ಸ್ಥಾಪನೆಗೆ ಹೊಯ್‌ಕೈಯ್ಯಾಗಿ ಸರ್ವಜ್ಞನ ಪ್ರತಿಮೆ ಚೆನ್ನೈನ ಅಯ್ಯನಾವರಂನಲ್ಲಿ 'ಜೀವಾ' ಉದ್ಯಾನವನದಲ್ಲಿ ಅಯ್ಯನಾವರಂ ಕನ್ನಡ ಸಂಘ ನಡೆಸುವ ಕನ್ನಡ ಶಾಲೆಯ ಎದುರು ಸ್ಥಾಪಿಸಲ್ಪಡುತ್ತಿದೆ.

ಆದರೆ ಕನ್ನಡ ಜನ ತಮ್ಮಲ್ಲಿ ತಾವೇ ಒಂದು ಪ್ರಮುಖ ಪ್ರಶ್ನೆಯನ್ನು ಹಾಕಿಕೊಳ್ಳಬೇಕಾಗಿದೆ. ಸರ್ವಜ್ಞನ ಪ್ರತಿಮೆ ಕನ್ನಡ ನಾಡಿನ ರಾಜಧಾನಿಯಲ್ಲಿ ಎಲ್ಲಿಯಾದರೂ ಉಂಟೆ? ಅಥವಾ ಕನ್ನಡ ನಾಡಿನಲ್ಲಿ ಎಲ್ಲಿರಬಹುದು? ಎಂದು

ಸರ್ವಜ್ಞನೂ ಕೂಡ ತಿರುವಳ್ಳುವರಂತೆಯೇ ಕೆಳಜಾತಿಯಲ್ಲಿ ಅಂತರ್ಜಾತಿಯ ಸಂಬಂಧದಲ್ಲಿ ಹುಟ್ಟಿ ಕೆಳಜಾತಿಗಳ ಮನೆಯಲ್ಲಿ ದುಡಿಯುವ ಜನರೊಡನಾಡಿ ಬೆಳೆದು "ಸರ್ವಜ್ಞ ವಚನ"ಗಳಿಂದ ಜನಪ್ರಿಯತೆಯನ್ನು ಪಡೆದ ಕವಿ. ಈ ಕವಿ ಈಗಿನ ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಮಾಸೂರು ಎಂಬಲ್ಲಿ ಜನಿಸಿದವನು. ನಿಶ್ಚಿತವಿಲ್ಲದಿದ್ದರೂ ಕೂಡ ಸುಮಾರು 16ನೇ ಶತಮಾನದವನು ಎಂಬುದು ವಿದ್ವಾಂಸರು ಬಹಳ ಚರ್ಚೆಯ ನಂತರ ಸ್ವೀಕರಿಸಿದ ಅಭಿಮತ. ಸರ್ವಜ್ಞ ಲೋಕಾನುಭವದಿಂದ ಸಮೃದ್ಧವಾದ ಕಾವ್ಯವನ್ನು ಮೂರು ಸಾಲಿನ ತ್ರಿಪದಿಗಳಲ್ಲಿ ರಚಿಸಿದ್ದಾನೆ. ಆದ್ದರಿಂದಲೇ ಕನ್ನಡ ನಾಡಿನ ಜನಸಾಮಾನ್ಯರ ಬಾಯಲ್ಲಿ ಮೆರೆಯುವ ಕವಿಯಾಗಿದ್ದಾನೆ. ವೇದಪ್ರಣೀತ ತತ್ವಗಳನ್ನು, ಜಾತಿಪದ್ಧತಿಯನ್ನು ಧಿಕ್ಕರಿಸಿದವನಾಗಿ ಸಾಮಾನ್ಯ ಜನರಿಗೆ ಮೆಚ್ಚಾಗಿದ್ದಾನೆ.

ಸರ್ವಜ್ಞನೆಂಬುವನು ಗರ್ವದಿಂದಾದನೆ
ಸರ್ವರಿಂದೊಂದು ನುಡಿಗಲಿತು ವಿದ್ಯದ
ಪರ್ವತವೇ ಆದ ಸರ್ವಜ್ಞ.

ಹೆತ್ತವಳು ಮಾಳಿಯೆನ್ನನೊತ್ತಿ ತೆಗೆದಳು ಕೇಶಿ
ಪಿಂತೆ ಬೆನ್ನ ಪಿಡಿದವಳು ಕಾಳಿ ಮೊರದೊಳೆನ್ನ
ಬೆತ್ತಲಿರಿಸಿದವಳು ಸರ್ವಜ್ಞ

ಎಂದು ತನ್ನ ಹುಟ್ಟಿನಗುಟ್ಟನ್ನು ಹೆಮ್ಮೆಯಿಂದಲೇ ಸಾರುತ್ತಾನೆ. ಮಾಳಿ, ಕೇಶಿ, ಕಾಳಿ ತನ್ನನ್ನು ಸಲಹಿದರು ಎಂದು ಸಾರುತ್ತಾನೆ.

ಎಲುವಿನ ಕಾಯಕೆ ಸಲೆ ಚರ್ಮವನ್ನು ಹೊದಿಸಿ



ಮಲಮೂತ್ರ ಕ್ರಿಮಿಯು ಒಳಗಿಪ್ಪ ದೇಹಕ್ಕೆ
ಕುಲವಾವುದಯ್ಯ ಸರ್ವಜ್ಞ
ಜಾತಿಹೀನನ ಮನೆಯ ಜ್ಯೋತಿತಾ ಹೀನವೇ
ಜಾತಿ ವಿಜಾತಿಯೆನಬೇಡ

ಕುಡಿವುದೊಂದೇ ನೀರು, ಸುಡುವುದೊಂದೇ ಅಗ್ನಿ
ಇರುತಿರಲು ಜಾತಿ ಎತ್ತಣದು ಸರ್ವಜ್ಞ

ಇದು ಜಾತಿಯ ಪದ್ಧತಿಯ ಬಗ್ಗೆ ಸರ್ವಜ್ಞನ ನುಡಿಗಳು. ಇನ್ನು ದೇವರ ಬಗ್ಗೆ ಸರ್ವಜ್ಞ ಹೇಳುತ್ತಾನೆ.


ಮಾನೀಸನಿಲ್ಲದೆ ನೀನೀಶನೆಂತಾದೆ ಲೋಕಕ್ಕೆ
ಮಾನೀಸನೀಶ ಸರ್ವಜ್ಞ

ಮನುಷ್ಯನಿಲ್ಲದೆ ದೇವರು ಹೇಗೆ ಉಂಟಾದ. ಈ ಲೋಕಕ್ಕೆ ಮನುಷ್ಯನ ಒಡೆಯ ಎನ್ನುತ್ತಾನೆ ಸರ್ವಜ್ಞ.

ಸರ್ವಜ್ಞನ ಪ್ರತಿಮೆಯನ್ನು ದೂರದ ಚೆನ್ನೈನಲ್ಲಿ ಸ್ಥಾಪಿಸುವ ಸಂದರ್ಭದಲ್ಲಾದರೂ ಅವನ ವಿಚಾರಗಳು ನಮ್ಮ ಮನಸ್ಸಿನಲ್ಲಿ ಸ್ಥಾಪನೆಗೊಳ್ಳಲಿ.

ತಮಿಳರ ಓಟುಗಳೂ, ತಿರುವಳ್ಳರ್ ಪ್ರತಿಮೆಯೂ

ಬಿಜೆಪಿ ಪಕ್ಷ ಮುಂದೆ ಬರುವ ಬೆಂಗಳೂರು ಬೃಹತ್ ಮಹಾನಗರಪಾಲಿಕೆಯ ಚುನಾವಣೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ತಮಿಳು ಕವಿ ತಿರುವಳ್ಳುವರ್‌ರವರ ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡುವ ಕೆಲಸಕ್ಕೆ ಸರ್ಕಾರದ ಮೂಲಕ ಕೈಹಾಕಿದೆ. ಕಾರ್ಯರೂಪಕ್ಕೆ ತಂದಿದೆ. ಆದರೆ ಇದು ಕರ್ನಾಟಕದ ಜನರೆಲ್ಲರಿಗೂ, ಪ್ರಗತಿಪರ, ಜಾತ್ಯಾತೀತ ಮನೋಭಾವದ ಎಲ್ಲ ವ್ಯಕ್ತಿಸಂಘಟನೆಗಳಿಗೂ ಆರೆಸ್ಸೆಸ್ ಕೆಲಸ ಮಾಡುವ ರೀತಿಯ ಒಂದು ಕಿರುಮಾದರಿಯ ಪ್ರದರ್ಶನ.



ಸಂಘ ಪರಿವಾರದ ಸಾಹಿತಿಗಳು-ಬುದ್ಧಿಜೀವಿಗಳು - ಕವಿ, ಸಾಹಿತಿ, ಸಂತರ ವಿಷಯದಲ್ಲಿ ಬೇಧ ಮಾಡಬಾರದು. ಇದರಿಂದ ಎರಡು ರಾಜ್ಯಗಳ ನಡುವೆ ಸೌಹಾರ್ದಯುತ ಸಂಬಂಧ ಮೂಡಲು ಸಹಾಯಕವಾಗುತ್ತದೆ ಎಂದು ಲೇಖನ ಬರೆದು ಹೇಳಿಕೆಗಳನ್ನು ನೀಡುತ್ತಿದ್ದಾರೆ. ಪತ್ರಿಕಾ ರಂಗದಲ್ಲಿರುವ ಸಂಘ ಪರಿವಾರದ ಭಂಟರು ಈ ವಿಷಯದಲ್ಲಿ ಜನಾಭಿಪ್ರಾಯವನ್ನು ಮೂಡಿಸುವ ಪ್ರಕರಣಗಳಲ್ಲಿ ತೀವ್ರವಾಗಿ ತೊಡಗಿಕೊಂಡಿದ್ದಾರೆ.

ಇಪ್ಪತ್ತು ವರ್ಷಕ್ಕೂ ಹೆಚ್ಚು ಕಾಲ ನೆನೆಗುದಿಗೆ ಬಿದ್ದ ಈ ಪ್ರತಿಮೆಯ ವಿಷಯದ ಬಗ್ಗೆ ಅಂದು ಬಾಯಿತೆಗೆದಿದ್ದ, ತೆಗೆಯದ ಸಾಹಿತಿ, ಬುದ್ಧಿಜೀವಿಗಳನ್ನು ಪ್ರತಿಮೆ ಸ್ಥಾಪನೆಯ ಪರವಾಗಿ ಹೇಳಿಕೆ ನೀಡಲು ಹಚ್ಚಿದ್ದಾರೆ.

ತಮಿಳು ಓಟುಗಳನ್ನು ಪಡೆದುಕೊಳ್ಳಬೇಕು. ಆದರೆ ಕನ್ನಡಿಗರ ಮತಗಳನ್ನೂ ಪಡೆಯಬೇಕು ಎಂಬ ರಾಜಕೀಯ ಯೋಜನೆಯನ್ನು ಬಿಜೆಪಿ ಹೊಗೇನಕಲ್ ಮುಂತಾದ ವಿಷಯಗಳನ್ನು ಕೈಗೆತ್ತಿಕೊಂಡು ಕರುಣಾನಿಧಿಯನ್ನು ತೆಗಳುತ್ತಾ ಭಾರಿ ದೊಡ್ಡ ಕನ್ನಡ ಹೋರಾಟಗಾರರ ವೇಷ ಕೊಡುವವರೂ ಇವರೇ. ಅದೇ ಸಮಯದಲ್ಲಿ ಅದನ್ನೇ ಉಪಯೋಗಿಸಿಕೊಂಡು ತಿಳುವಳ್ಳುವರ್ ಪ್ರತಿಮೆಯ ಉದ್ಘಾಟನೆಗೆ ಕರುಣಾನಿಧಿಯವರನ್ನು ಕರೆತರಲು ಆತುರಪಡುವವರೂ ಅವರೇ. ಇಂತಹ ಎರಡು ನಾಲಗೆಯ ನೀತಿಯಲ್ಲಿ ಆರೆಸ್ಸೆಸ್‌ನವರು ಬಹಳ ಪ್ರವೀಣರು ಎಂಬುದು ಹೊಸ ಮಾತೇನಲ್ಲ.

ಹೋಳೂರು ಶಂಕರ್ ಚಿಕಿತ್ಸೆಗೆ ನೆರವು ನೀಡಿ

ರೈತ ಚಳುವಳಿಯ ನಾಯಕರು, ಸಿಪಿಐ(ಎಂ) ಪಕ್ಷದ ಕೋಲಾರ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರೂ ಆದ ಹೋಳೂರು ಶಂಕರ್‌ರವರು ಆರೋಗ್ಯಕ್ಕೆ ಸಂಬಂಧಿಸಿದ ಗಂಭೀರ ಸಮಸ್ಯೆಯಿಂದ ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಚಿಕಿತ್ಸೆಗೆ ದೊಡ್ಡ ಮೊತ್ತದ ಹಣ ಅಗತ್ಯವಾಗಿದ್ದು, ಸಂಗಾತಿಗಳು ಉದಾರವಾಗಿ ನೆರವು ನೀಡಬೇಕೆಂದು ಈ ಮೂಲಕ ಕೋರಲಾಗಿದೆ.

ವಿಜೆಕೆ ನಾಯರ್
ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ

'ಭಾಷಾ ಅಧ್ಯಯನ ನಡೆಯಲಿ, ಜ್ಯೋತಿಷ್ಯ- ವೇದವಲ್ಲ'

ದುಂಡುಮೇಜಿನ ಸಭೆ ಅಭಿಮತ



ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಸಚಿವಾಲಯ ತನ್ನ 10 ದಿನಗಳ ಯೋಜನೆಯಲ್ಲಿ ಪ್ರಕಟಿಸಿರುವ ಹೊಸ ಶಿಕ್ಷಣ ನೀತಿಗಳ ಹಾಗೂ ರಾಜ್ಯ ಸರ್ಕಾರವು ತರಲು ಹೊರಟಿರುವ ವೇದ ಸಂಸ್ಕೃತ ವಿಶ್ವವಿದ್ಯಾಲಯ ಸೇರಿದಂತೆ ಇತರ ಶೈಕ್ಷಣಿಕ ಬೆಳವಣಿಗೆ ಸಂಬಂಧ ಚರ್ಚಿಸಲು 'ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ)' ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಹೊಟೆಲ್‌ದಾಸ್ ಪ್ರಕಾಶ್‌ನಲ್ಲಿ 21.07.2009 ರಂದು ದುಂಡುಮೇಜಿನ ಸಭೆಯನ್ನು ಏರ್ಪಡಿಸಿತ್ತು.

ಈ ಸಭೆಯಲ್ಲಿ ಭಾಷಾ ತಜ್ಞರಾದ ಲಿಂಗದೇವರು ಹಳೆಮನೆ, ಶಿವರಾಮ ಕಾಡನಕುಪ್ಪೆ, ಬಸವಲಿಂಗಯ್ಯ, ಎನ್.ಎಸ್.ರಘುನಾಥ್, ಮ.ನ. ಜವರಯ್ಯ, ಎನ್.ಎಸ್.ಗೋಪಿನಾಥ್, ಮುದ್ದುಕೃಷ್ಣ, ತಾಜ್ ಮೊಹಮದ್ ಖಾನ್ ಸತೀಶ್ ಮತ್ತಿತರರು ಭಾಗವಹಿಸಿದ್ದರು.

ಭಾಷಾ ಅಧ್ಯಯನ ಬೇಕು

ಭಾಷಾ ತಜ್ಞರಾದ ಲಿಂಗದೇವರು ಹಳೆಮನೆಯವರು ಮಾತನಾಡುತ್ತಾ ರಾಜ್ಯಸರ್ಕಾರ ಸಂಸ್ಕೃತ, ವೇದ ವಿ.ವಿ. ಮಾಡಬೇಕೆನ್ನುತ್ತಿದೆ. ಆದರೆ ಕರ್ನಾಟಕದ ಒಳಗೆ ಇರುವ ವಿ.ವಿ.ಗಳಲ್ಲಿ ಸಂಸ್ಕೃತ ವಿಭಾಗಗಳಿವೆ. ಮಠಗಳಲ್ಲಿ ಈಗಲೂ ಸಹ ಸಂಸ್ಕೃತವನ್ನು ಬೋಧಿಸುತ್ತಿದ್ದಾರೆ. ಸಂಸ್ಕೃತ ಅಧ್ಯಯನಕ್ಕೆ ಪ್ರತ್ಯೇಕ ಕೇಂದ್ರಗಳಿವೆ. ಹೀಗಿರುವಾಗ ಪ್ರತ್ಯೇಕ ವಿ.ವಿ.ಯ ಅಗತ್ಯವಿಲ್ಲ. ಇದರಲ್ಲಿ ದೊಡ್ಡ ಕುತಂತ್ರವನ್ನು ಕಾಣಬಹುದು. ಅದರ ಬದಲು ಪ್ರಾಚ್ಯ ಭಾಷೆಗಳ ಕುರಿತಾದ ಅಧ್ಯಯನ ನಡೆಸಬೇಕು. ದೇಶದಲ್ಲಿ ಏಕರೂಪ ಶಿಕ್ಷಣ ತರುವ ಮೂಲಕ ರಾಜ್ಯದ ಹಕ್ಕನ್ನು ಕಸಿಯುವ ಪ್ರಯತ್ನ ನಡೆಯುತ್ತಿದೆ ಹಾಗೂ ವಿದೇಶಿ ವಿ.ವಿ.ಗಳನ್ನು ಆಹ್ವಾನಿಸುವ ಮೂಲಕ ದೇಶದ ಉನ್ನತ ಶಿಕ್ಷಣವನ್ನು ಗಂಡಾಂತರದತ್ತ ಕೊಂಡೊಯ್ಯುತ್ತಿದ್ದಾರೆ ಎಂದರು. ರಂಗಕರ್ಮಿ ಬಸವಲಿಂಗಯ್ಯ ಮಾತನಾಡುತ್ತಾ ಶಿಕ್ಷಣ ಸಂಸ್ಕೃತಿ ಜ್ಞಾನಾರ್ಜನೆಗಾಗಿ ನೀಡಬೇಕೆ ಹೊರತು ಅದು ಕೇವಲ ಅಂಕಗಳಿಗೆ ಮಾತ್ರ ಸೀಮಿತವಾಗಬಾರದು. ಡೊನೇಷನ್, ಟ್ಯೂಷನ್‌ಗಳ ಹಾವಳಿ ಹೆಚ್ಚಾಗಿವೆ, ಜಾಗತೀಕರಣದ ಪ್ರಭಾವದಿಂದ ದೇಶ ತನ್ನದೇ ಆದ ಶಿಕ್ಷಣ ನೀತಿಗಳನ್ನು ಅನುಸರಿಸಲಾಗುತ್ತಿಲ್ಲ ಎಂದರು. ಪ್ರೊ. ಶಿವರಾಮು ಕಾಡನಕುಪ್ಪೆ ಮಾತನಾಡುತ್ತಾ ಪೋಷಕರು ಇಂದು ಸಾಮಾನ್ಯ ಶಿಕ್ಷಣ ನೀಡಲು ಹೆಚ್ಚಾಗಿ ಬಯಸುತ್ತಿಲ್ಲ. ಇಂದು ದಲಿತರು ಮಾತ್ರ ಹೆಚ್ಚಾಗಿ ಬಿ.ಎ, ಬಿ.ಎಸ್.ಸಿ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಇದು ಉಳ್ಳವರಿಗೆ ಮಾತ್ರ ಶಿಕ್ಷಣ ಎನ್ನುವುದು ಸ್ಪಷ್ಟವಾಗಿದೆ. ಹೆಚ್.ಆರ್.ಡಿ.ಯಿಂದ ಸವಲತ್ತು ಸಿಗುತ್ತಿದೆ. ರಾಜ್ಯ ಸರ್ಕಾರ ಪ್ರತ್ಯೇಕ ವಿ.ವಿ. ಸ್ಥಾಪಿಸುವ ಮೂಲಕ ಶಿಕ್ಷಣ ಕೇಸರೀಕರಣಗೊಳಿಸಲು ಹೊರಟಿದೆ ಎಂದರು.

ಮಾತೃಭಾಷೆಯಲ್ಲಿ

ಪ.ಮಲ್ಲೇಶ ಮಾತನಾಡಿ ಸರ್ಕಾರಗಳು 60 ವರ್ಷಗಳಿಂದ ಮೂಲ ಶಿಕ್ಷಣದ ಬಗ್ಗೆ ಉದಾಸೀನವಾಗಿ ಕೆಲಸ ಮಾಡಿವೆ. ಸಂವಿಧಾನದಲ್ಲಿದ್ದರೂ ಸಹ ಮಕ್ಕಳ ಬಗ್ಗೆ ಕಾಳಜಿ ವಹಿಸುತ್ತಿಲ್ಲ. ನಾವು ಸಹ 6, 16 ವರ್ಷಗಳವರೆಗೆ ಉಚಿತ ಶಿಕ್ಷಣ ಸಿಗಬೇಕೆಂದು ಒತ್ತಾಯಿಸಿದರೂ ಯಾವುದೇ ಸ್ಪಂದನೆಯಿಲ್ಲ. ಯಾವುದೇ ಭಾಷೆ ಕಲಿಸಲು ಅಭ್ಯಂತರವಿಲ್ಲ. ಆದರೆ ಮಾತೃ ಭಾಷೆಯಲ್ಲಿಯೇ ಶಿಕ್ಷಣ ನೀಡಬೇಕೆಂದರು. ಮಾ.ನ. ಜವರಯ್ಯ ಮಾತನಾಡಿ ಸಂಸ್ಕೃತ ಭಾಷೆಯ ಅಧ್ಯಯನಕ್ಕಾಗಿ ವಿ.ವಿ. ತೆರೆಯುವುದು ಸರ್ಕಾರದ ಪುರೋಹಿತಶಾಹಿ ನೀತಿಗೆ ಪೂರಕವಾಗಿದೆ ಎಂದರು. ಎನ್.ಎಸ್.ರಘುನಾಥ್ ಮಾತನಾಡಿ ಕಪಿಲ್ ಸಿಬಲ್ ಅಧಿಕಾರ ವಹಿಸಿಕೊಂಡ ನಂತರ ಶಿಕ್ಷಣಕ್ಕೆ ಕೈಹಾಕಿದ್ದಾರೆ. 100 ದಿನಗಳಲ್ಲಿ ನಡೆಯುವ ಕಾರ್ಯಕ್ರಮ ಇದಲ್ಲ. ಶೇ.25ರಷ್ಟು ಮಕ್ಕಳು ಬೀದಿಗೆ ಬಿದ್ದಿದ್ದಾರೆ. ಶಾಲೆಗಳಿಗೆ ಸಂಪೂರ್ಣ ಶಿಕ್ಷಕರಿಲ್ಲ. ಸರ್ಕಾರ ಇತ್ತ ಗಮನಹರಿಸಬೇಕಿದೆ ಎಂದು ಸತೀಶ್ ಮಾತನಾಡಿ ಕೇಂದ್ರ ಸರ್ಕಾರದ ಪ್ರಸ್ತಾವನೆಯಲ್ಲಿ ನೀತಿಯ ಕೊರತೆ ಇದೆ. 1986 ರ ಶಿಕ್ಷಣ ಪುನರ್ ಪ್ರತಿಸ್ಥಾಪನೆಯಾಗಿಲ್ಲ. ಇದು ಮೇಲ್ಪದರದ ಬದಲಾವಣೆಯಾಗಿದೆ. ರಾಜ್ಯದಲ್ಲಿ ಆರ್.ಎಸ್.ಎಸ್. ನಿರ್ದೇಶನದಂತೆ ಪಠ್ಯಕ್ರಮ ಬದಲಾವಣೆ ನಡೆಯುತ್ತಿದೆ ಎಂದರು. ತಾಜ್ ಮೊಹಮದ್ ಖಾನ್ ಮಾತನಾಡಿ ವಿದೇಶಿ ವಿ.ವಿ.ಗಳು ಭಾರತೀಯ ಸಂಸ್ಕೃತಿಯನ್ನು ಅಭ್ಯಸಿಸುವುದಿಲ್ಲ ಬದಲಾಗಿ ನುಂಗಿಹಾಕುತ್ತವೆ ಎಂದರು.

ಈ ಸಭೆಯ ಅಧ್ಯಕ್ಷತೆ ವಹಿಸಿದ್ದ ಎಸ್‌ಎಫ್‌ಐ ರಾಜ್ಯಾಧ್ಯಕ್ಷರಾದ ಕಾಂ.ಹೆಚ್.ಆರ್ ನವೀನ್‌ಕುಮಾರ್‌ರವರು ಮಾತನಾಡುತ್ತಾ 1 ದಿನಗಳ ಕಾರ್ಯಕ್ರಮವು ಶಿಕ್ಷಣವನ್ನು ಸಾರ್ವಜ ಖಾಸಗೀ ಸಹಭಾಗಿತ್ವಕ್ಕೆ (ಪಿಪಿ ಒಳಪಡಿಸುವುದಾಗಿದೆ. ಹಾಗೂ ಖಾಸಗಿ ವಿ. ಸ್ಥಾಪನೆಗೆ ಮತ್ತು ಶಿಕ್ಷಣದಲ್ಲಿ ವಿದೇಶಿ ನೇರ ಬಂಡವ ಹೂಡಿಕೆಗೆ ಅನುಕೂಲ ಮಾಡಿಕೊಡುವ ಮೂ ಇಡೀ ಶಿಕ್ಷಣ ಕ್ಷೇತ್ರವನ್ನು ವ್ಯಾಪಾರೀಕರಣ ಮಾಡ ಹೊರಟಿದೆ. ರಾಜ್ಯ ಸರ್ಕಾರ ವೇದ ಸಂಸ್ಕೃತ ವಿ ಸ್ಥಾಪಿಸುವ ಮೂಲಕ, ಜ್ಯೋತಿಷ್ಯ ಶಾಸ್ತ್ರವ ಬೋಧಿಸುವ ಮೂಲಕ ವಿದ್ಯಾರ್ಥಿಗ ಬಲವಂತವಾಗಿ ಕೋಮುವಾದಿ ವಿಚಾರವ ಹೇರಲು ಹೊರಟಿದೆ ಎಂದರು. ನಂತರ ಸಭೆ ಕೆಳಕಂಡ ನಿರ್ಣಯವನ್ನು ಕೈಗೊಂಡಿತ್ತು.

ಇದನ್ನು ರಾಷ್ಟ್ರ ಪತಿ ರಾಜ್ಯಪಾಲರ ಮುಖ್ಯಮಂತ್ರಿ, ಪ್ರಧಾನಮಂತ್ರಿಗಳಿಗೆ, ಶಿಕ್ಷ ಮಂತ್ರಿಗಳಿಗೆ ಕಳಿಹಿಸುವ ಮೂಲಕ ವ್ಯಾಪ ಚಳುವಳಿ ಸಂಘಟಿಸಲು ತೀರ್ಮಾನಿಸಲಾಯಿ ಪ್ರಾಸ್ತಾವಿಕ ಮಾತುಗಳನ್ನು ಎಸ್‌ಎಫ್‌ಐ ರಾ ಜಂಟಿ ಕಾರ್ಯದರ್ಶಿಗಳಾದ ಎಲ್.ಜಗದೀ ಮಾಡಿದರು. ಎಸ್‌ಎಫ್‌ಐ ಜಿಲ್ಲಾ ಸ ಸಂಚಾಲಕ ವಿ.ದುರ್ಗೇಶ್ ಸ್ವಾಗತಿಸಿದರು.

ವರದಿ : **ಎಲ್.ಜಗದೀ**

ನಿರ್ಣಯಗಳು

1. ಶಿಕ್ಷಣ ಹಕ್ಕು ಮಸೂದೆ ಕೂಡಲ ಜಾರಿಗೊಳಿಸಬೇಕು. 2) 100 ದಿನಗ ಯೋಜನೆಯ ಪ್ರಸ್ತಾಪವನ್ನು ಕೈಬಿಟ್ಟು ರಾಷ್ಟ್ರ ವ್ಯಾ ಚರ್ಚೆಗೆ ಅವಕಾಶ ಕಲ್ಪಿಸುವುದು. ಸಾರ್ವಜನಿಕ, ಖಾಸಗಿ ಸಹಭಾಗಿತ್ವವ ವಿರೋಧಿಸುವುದು, 4) ಶಿಕ್ಷಣದಲ್ಲಿ ವಿದೇಶಿ ನೇ ಬಂಡವಾಳ ಹೂಡಿಕೆ, ವಿದೇಶಿ ವಿ.ವಿ.ಯ ವಿರೋಧಿಸುವುದು, 5) ವೇದ ಸಂಸ್ಕೃತ ವಿ.ವಿ ಸ್ಥಾಪನೆ ವಿರೋಧಿಸುವುದು ಹಾಗೂ ಜ್ಯೋತಿ ಶಾಸ್ತ್ರವನ್ನು ವಿರೋಧಿಸುವುದು. 6) ರಾ ಸರ್ಕಾರದ ಪಠ್ಯ ಪುಸ್ತಕದ ಕೇಸರೀಕರ ವಿರೋಧಿಸುವುದು.

ಎಸ್‌ಎಫ್‌ಐ ನೇತೃತ್ವದಲ್ಲಿ ಹುಬ್ಬಳ್ಳಿಯಲ್ಲಿ ನಡೆದ ದುಂಡು ಮೇಜಿನ ಸಭೆಯಲ್ಲಿ ಖ್ಯಾತ ಸಾಹಿತಿ ಚನ್ನವೀರ ಕಣವಿ ಮತ್ತಿತರ ಪ್ರಮುಖರು ಭಾಗವಹಿಸಿದ್ದರು.





ಬೆಲೆ ಏರಿಕೆ ನಿಯಂತ್ರಣಕ್ಕೆ ಆಗ್ರಹಿಸಿ ಗುಲ್ಬರ್ಗಾದಲ್ಲಿ ಜನವಾದಿ ಮಹಿಳಾ ಸಂಘಟನೆಯು ಗಂಜಿ ಸೇವನೆ ಮೂಲಕ ಪ್ರತಿಭಟನೆ ನಡೆಸಿತು.

ರಾಜ್ಯದಲ್ಲಿ ವಿದ್ಯುತ್ ಕೊರತೆ ಇದೆ. ವಿದ್ಯುತ್ ಯೋಜನೆ ಬೇಕೆಂಬುದೇನೋ ಸರಿಯೇ. ಆದರೆ ಅದನ್ನು ಜಾರಿ ಮಾಡಲು ಯತ್ನಿಸುವ ವಿಧಾನ ಮಾತ್ರ ಖಂಡಿತಾ ಇದಲ್ಲ.

ಹಣಕೋಣದ ಹಿನ್ನೆಲೆ

ವಿದ್ಯುತ್ ಉತ್ಪಾದನೆ ಮತ್ತು ವಿರೋಧಿ ಚಳುವಳಿಗಳು

ಟಿ.ಎನ್.ನಾಗರಾಜ್

ಕರ್ನಾಟಕ ರಾಜ್ಯದಲ್ಲಿ ತೀವ್ರ ವಿದ್ಯುತ್ ಕೊರತೆ ಇದೆ ಎಂಬುದನ್ನು ಯಾರೂ ಅಲ್ಲಗಳೆಯುವುದಿಲ್ಲ. ವಿದ್ಯುತ್ ಕೊರತೆಯ ಕಾರಣದಿಂದಾಗಿ ಖಾಸಗಿ ಕಂಪನಿಗಳಿಂದ ದುಬಾರಿ ವಿದ್ಯುತ್ ಕೊಳ್ಳುತ್ತಿರುವ ಸಮಯದಲ್ಲಿ ವಿದ್ಯುತ್ ತಯಾರಿಕೆಗಾಗಿ ವಿದ್ಯುತ್ ಸ್ಥಾವರಗಳು ಹೆಚ್ಚು ಹೆಚ್ಚು ನಿರ್ಮಾಣವಾಗಬೇಕಾಗಿದೆ. ಹಣಕೋಣದಲ್ಲಿ 4000 ಮೆಗಾವ್ಯಾಟ್ ಸಾಮರ್ಥ್ಯದ ಒಂದು ಬೃಹತ್ ವಿದ್ಯುತ್ ಸ್ಥಾವರವನ್ನು ಕಟ್ಟುವ ಯೋಜನೆ 4 ವರ್ಷ ಹಳೆಯದು. ಮೊದಲು ಮೈಸೂರಿನ ಬಳಿಯ ಗ್ರಾಮೀಣ ಪ್ರದೇಶದಲ್ಲಿ ನಂತರ ಉ.ಕ. ಜಿಲ್ಲೆಯ ತದಡಿ ಎಂಬ ಪ್ರದೇಶದಲ್ಲಿ ನಿರ್ಮಾಣ ಮಾಡಲು ಯೋಜಿಸಿ ಸ್ಥಳೀಯ ಜನತೆಯ ವಿರೋಧದಿಂದ ಅದನ್ನು ಕೈಬಿಟ್ಟು ಈಗ ಹಣಕೋಣದಲ್ಲಿ ಅದನ್ನು ಸ್ಥಾಪಿಸಲು ಪ್ರಯತ್ನ ನಡೆದಿದೆ.

ಹಣಕೋಣದಲ್ಲಿಯೂ ವಿದ್ಯುತ್ ಸ್ಥಾವರ ಸ್ಥಾಪನೆಗೆ ತೀವ್ರ ವಿರೋಧ ಆರಂಭವಾಗಿದೆ. ಇತ್ತೀಚೆಗೆ ನಡೆದ ಘಟನೆಯ ಸಂದರ್ಭದಲ್ಲಿ ಬಸ್ ಸುಡುವುದು ಮೊದಲಾದ ಹಿಂಸಾಚಾರ ಮತ್ತು ಪೋಲೀಸರ ವ್ಯಾಪಕ ದೌರ್ಜನ್ಯ ನಡೆದಿದೆ. (ವಿವರಗಳಿಗೆ ಪ್ರತ್ಯೇಕ ವರದಿ ನೋಡಿ) ಹೀಗಾಗಿ ಹಣಕೋಣದಲ್ಲಿಯೂ ವಿದ್ಯುತ್ ಸ್ಥಾವರ ಕೈ ಬಿಡಬೇಕೆ? ಮತ್ತೆ ಇನ್ನೆಲ್ಲಿಯಾದರೂ ವಿದ್ಯುತ್ ಸ್ಥಾವರ ಸ್ಥಾಪನೆಗೆ ಪ್ರಯತ್ನಿಸಿದರೆ ಅಲ್ಲಿಯೂ ಜನ ವಿರೋಧ ಮಾಡುವುದಿಲ್ಲವೆಂಬ ಭರವಸೆ ಇದೆಯೇ? ಈಗಾಗಲೇ ನಾಲ್ಕು ವರ್ಷ ತಡವಾಗಿರುವ ಈ ಯೋಜನೆಯನ್ನು ಮತ್ತೆ ಮತ್ತೆ ಮುಂದೂಡುತ್ತಾ ಹೋಗಿ ವಿದ್ಯುತ್ ಉತ್ಪಾದನೆ ಕಡಿಮೆಯಾಗುತ್ತಾ ಹೋದರೆ ಕೈಗಾರಿಕೆ, ಕೃಷಿ, ಗೃಹ ಬಳಕೆಯಗಳ ಗತಿ ಏನು? ಈ ಪ್ರಶ್ನೆಗಳು ಸ್ಪರ್ಧಿಸುವುದು ಹುಟ್ಟಿಕೊಳ್ಳುತ್ತವೆ. ರಾಜ್ಯದಲ್ಲಿ ಎಲ್ಲಿ ಯಾವ ವಿದ್ಯುತ್ ಯೋಜನೆ ಅದು ಗುಂಡ್ಯಾ, ಬರಪೊಳೆ ಮೊದಲಾದ ಕಿರಿ-ಕಿರಿ ಜಲ ವಿದ್ಯುತ್ ಯೋಜನೆಗಳಾಗಲಿ, ಹಣಕೋಣ, ನಂದಿಕೂರು, ರಾಯಚೂರು ಮೊದಲಾದ ಉಪ ವಿದ್ಯುತ್ ಸ್ಥಾವರಗಳಾಗಲಿ, ಕೈಗಾದಂತಹ ಅಣು ವಿದ್ಯುತ್ ಸ್ಥಾವರವಾಗಲಿ, ನಿರಂತರ ವಿರೋಧಗಳನ್ನು ಎದುರಿಸಬೇಕಾಗಿದೆ.

ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಯನ್ನು ಕೈಬಿಡುವುದು ಅಥವಾ ಪ್ರತಿಭಟನೆ ಮಾಡುತ್ತಿರುವ, ಯೋಜನೆಯ ಪರಿಣಾಮಗಳಿಂದ ಆತಂಕಗೊಂಡಿರುವ ಜನತೆಯ ಮೇಲೆ ದೌರ್ಜನ್ಯ, ದಬ್ಬಾಳಿಕೆ ನಡೆಸಿ ಯೋಜನೆ ನಿರ್ಮಾಣ ಮಾಡುವುದು ಬಿಟ್ಟು ಬೇರೆ ಪರ್ಯಾಯವೇ ಇಲ್ಲವೇ? ಯಾವುದೇ ವಿದ್ಯುತ್ ಯೋಜನೆಯನ್ನು ಅಥವಾ ಯಾವುದೇ ಯೋಜನೆಯನ್ನು ಎಲ್ಲಿ ಸ್ಥಾಪಿಸಬೇಕಾದರೂ ಅನುಸರಿಸಬೇಕಾದರೂ ಅದಕ್ಕೆ ಸಂಬಂಧಿಸಿದ ಜನರನ್ನು ಒಲಿಸಿಕೊಳ್ಳಬೇಕಾದದ್ದು ಅದನ್ನು ಕೈಗೊಳ್ಳುತ್ತಿರುವ ಸರ್ಕಾರದ ಕರ್ತವ್ಯ.

ಯೋಜನೆಗೆ ಸಂಬಂಧಿಸಿದ ಅಗತ್ಯ ಮಾಹಿತಿ ಸಾಧಕ-ಬಾಧಕಗಳನ್ನು ಜನತೆಯ ಮುಂದಿಡಬೇಕು. ಸಂಬಂಧಿಸಿದ ಜನತೆಗೆ ವ್ಯಾಪಕವಾಗಿ ಸಿಗುವಂತೆ ಮಾಡಬೇಕು. ಆ ಪ್ರದೇಶದಲ್ಲಿ ಹಾಗೂ ರಾಜ್ಯ ಮಟ್ಟದಲ್ಲಿ ವಿವಿಧ ರಾಜಕೀಯ ಪಕ್ಷಗಳು, ಜನಸಂಘಟನೆಗಳ ಜೊತೆ ಸಮಾಲೋಚನೆ ನಡೆಸಿ, ಸರ್ವ ಸಮ್ಮತಿಯನ್ನು ರೂಪಿಸಲು ನಿಷ್ಠೆಯಿಂದ ಪ್ರಾಮಾಣಿಕತೆಯಿಂದ ಪ್ರಯತ್ನಿಸಬೇಕು. ಜನರ ಆತಂಕಗಳನ್ನು ದೂರ ಮಾಡಲು, ಯೋಜನೆಯಿಂದ ಬಾಧಿತರಾಗುವವರಿಗೆ ಅವರ ಜೀವನ ಮಟ್ಟ ಕುಸಿಯದಂತೆ, ಉತ್ತಮಗೊಳ್ಳುವಂತೆ ಮಾಡಲು ಕ್ರಮಗಳನ್ನು ಯೋಜನೆಯ ಭಾಗವಾಗಿಯೇ ರೂಪಿಸಬೇಕು. ಯೋಜನೆಯಿಂದಾಗಿ 'ನಿರ್ವಸಿತರು' ಉದ್ಭವ ವಾಗದಂತೆ ನೋಡಿಕೊಳ್ಳುವುದು ಸರ್ಕಾರಗಳ ಜವಾಬುದಾರಿ. ಆಗ ಸರ್ವ ಸಮ್ಮತಿ ರೂಪುಗೊಳ್ಳಲು ಅನುಕೂಲವಾಗುವುದು.



ಉತ್ತರ ಕನ್ನಡ ಜಿಲ್ಲೆಯ ನಿರ್ವಸಿತರು

ಆದರೆ ಇದಕ್ಕೆ ವಿರುದ್ಧವಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ವಿವಿಧ ಯೋಜನೆಗಳಿಂದ ಬಾಧಿತರಾದ 'ನಿರ್ವಸಿತರು' 30-40 ವರ್ಷಗಳಿಂದಲೇ ಬಾಧಿತರಾಗಿದ್ದಾರೆ. ಅದು ಇತ್ತೀಚಿನ ಸೀಬರ್ಡ್ ಯೋಜನೆಯಾಗಲಿ ಅಥವಾ ಹಿಂದಿನ ಯೋಜನೆಗಳಾಗಲಿ ಇಂದಿಗೂ ಅವರ ಬದುಕು ಹೀನಾಯವಾಗಿದೆ. ಇಂತಹ 'ನಿರ್ವಸಿತರನ್ನು' ನೋಡುವಾಗಲೇ ಜನಸಾಮಾನ್ಯರಲ್ಲಿ ಆತಂಕಗಳು ಹೆಚ್ಚಾಗುತ್ತವೆ. ಅಭಿವೃದ್ಧಿಯೋಜನೆಗಳ ವಿರುದ್ಧ ಅಪಪ್ರಚಾರ ನಡೆಸುವವರಿಗೆ ಅವರು ಸುಲಭ ತುತ್ತಾಗುತ್ತಾರೆ. ಆದ್ದರಿಂದ ಹಣಕೋಣ ಯೋಜನೆಯಿಂದ ಬಾಧಿತರಾಗುವವರಿಗೆ ಅವರ ಜೀವನಮಟ್ಟವನ್ನು ಉತ್ತಮಪಡಿಸುವ ಸಮರ್ಪಕ ಯೋಜನೆಗಳನ್ನು ಅವರ ಜೊತೆ ಚರ್ಚಿಸಿ ರೂಪಿಸುವುದರಿಂದ ಮಾತ್ರ ಅವರ ಆತಂಕಗಳನ್ನು ನಿವಾರಿಸಬಹುದು.

ರಾಜಕೀಯ ಪಕ್ಷಗಳ ಪಾತ್ರ:

ವಿವಿಧ ಅಭಿವೃದ್ಧಿ ಯೋಜನೆಗಳ ವಿಷಯದಲ್ಲಿ ರಾಜಕೀಯ ಪಕ್ಷಗಳ-ಆಳುತ್ತಿರುವ ಹಾಗೂ ವಿರೋಧಪಕ್ಷಗಳ ಪಾತ್ರ ಮಹತ್ವದ್ದು. ಹಣಕೋಣದ ಯೋಜನೆಗೆ ಸಂಬಂಧಿಸಿದಂತೆಯೇ, ಕಾಂಗ್ರೆಸ್ ಆಡಳಿತ ಪಕ್ಷದಲ್ಲಿರುವಾಗ ಬಿಜೆಪಿ ಯೋಜನೆ ವಿರೋಧಿ ಹೋರಾಟಕ್ಕೆ ಪೂರ್ಣ ಬೆಂಬಲ ನೀಡಿತ್ತು. ಈಗ ಬಿಜೆಪಿ ಆಡಳಿತ ಪಕ್ಷವಾಗಿರುವಾಗ ಕಾಂಗ್ರೆಸ್ ಈ ವಿರೋಧಿ ಹೋರಾಟಕ್ಕೆ ಬೆಂಬಲ ನೀಡುತ್ತಿದೆ. ಬಿಜೆಪಿಯಲ್ಲಿಯೇ ಇರುವ ಎರಡು ಗುಂಪುಗಳಲ್ಲಿ ಒಂದು ಗುಂಪಿನವರು ಯೋಜನೆಗೆ ತೀವ್ರ ವಿರೋಧ

ಪುಟ 6ಕ್ಕೆ

ಪ್ರತಿಭಟನಾಕಾರರಿಗೆ ಬೆತ್ತ - ಬೂಟಿನೇಟು : ರಾಕ್ಷಸೀ ಪೊಲೀಸ್ ದೌರ್ಜನ್ಯ

ಯಮುನಾ ಗಾಂವ್ಕರ್

ಕಾರವಾರ ತಾಲೂಕಿನಲ್ಲಿ ಕಾಳಿನದಿ ಸಮುದ್ರ ಸೇರುವ ಪೂರ್ವ 12 ಕಿ.ಮೀ. ದೂರದಲ್ಲಿರುವ ಹಣಕೋಣ ಎಂಬಲ್ಲಿ ಕಳೆದ ಎರಡು ವರ್ಷದಿಂದ ಉಷ್ಣವಿದ್ಯುತ್‌ಸ್ಥಾವರ ನಿರ್ಮಾಣ ಕುರಿತು ಚರ್ಚೆ ಪ್ರಾರಂಭವಾಗಿತ್ತು. ಸರ್ಕಾರ ಸ್ಥಾವರ ನಿರ್ಮಾಣಕುರಿತು ಜಮೀನು ನೀಡಬೇಕಾದ ರೈತರನ್ನಾಗಲಿ, ಬಡಜನರನ್ನಾಗಲಿ, ಜನಪ್ರತಿನಿಧಿಗಳನ್ನಾಗಲಿ, ಜನಪರ ಸಂಘಟನೆಗಳು, ಪಕ್ಷಗಳನ್ನಾಗಲಿ ಕರೆದು ವಸ್ತುಸ್ಥಿತಿ ವಿವರಿಸುವ ಗೋಜಿಗೆ ಹೋಗಿಲ್ಲ. ಎಲ್ಲವೂ ಅಂತೆ-ಕಂತೆ ಆಧಾರ ಮತ್ತು ವಿವಿಧ ರಾಜಕೀಯ ಪಕ್ಷಗಳು ಚುನಾವಣೆ ಹತ್ತಿರವಿದ್ದಾಗ ಹೇಳಿದ ಹೇಳಿಕೆಗಳೇ ಹೊರತು ಹೆಚ್ಚು ಮಾಹಿತಿ ಜನರಿಗೆ ಬಿಟ್ಟುಕೊಡಲಿಲ್ಲ.



ತೀವ್ರ ಗಾಯಗೊಂಡ ಮಹಿಳೆಯರು

ಸ್ಥಾವರ ನಿರ್ಮಿಸಲು ಬಂದ ಇಂದ್ ಭಾರತ ಕಂಪನಿಯ ಮಾಹಿತಿ ಮತ್ತು ಪತ್ರಿಕೆಗಳ ಸುದ್ದಿ ಪ್ರಕಾರವೇ ಹಲವು ಜನರು ಹೋರಾಟಕ್ಕಿಳಿದಿದ್ದರು. ಕಾಂಗ್ರೆಸ್, ಬಿಜೆಪಿಯ ಜಿಲ್ಲಾಮಟ್ಟದ ಮುಖಂಡರೆಲ್ಲರೂ ಕೂಡಿ ಮತ್ತು ಪ್ರತ್ಯೇಕವಾಗಿ ಕೆಲವೊಮ್ಮೆ ಪ್ರತಿಭಟಿಸಿದ್ದರು.

ಖಾಸಗಿ ಒಡೆತನದ ಇಂದ್‌ಭಾರತ ಕಂಪನಿಯವರು ಹಣಕೋಣದಲ್ಲಿ ಅನಧಿಕೃತವಾಗಿ ನಿಮಿಸಿದ ಕಟ್ಟಡ ಮತ್ತು ಸ್ಥಾವರಕ್ಕೆ ಬೇಕಾದ ಸಾಮಗ್ರಿಗಳನ್ನು ಖುಲ್ಲಾಪಡಿಸಲು ಗ್ರಾ.ಪಂ. ಹಣಕೋಣ ಇವರು ನೋಟಿಸ್ ನೀಡಿದ್ದರು. ಅಂದು ಉಷ್ಣವಿದ್ಯುತ್ ಸ್ಥಾವರ ವಿರೋಧಿ ಹೋರಾಟಗಾರರು ಸಾವಿರಾರು ಸಂಖ್ಯೆಯಲ್ಲಿ ಜಮಾಯಿಸಿ ಪ್ರತಿಭಟಿಸುತ್ತಿದ್ದರು. ಇದನ್ನು ಹತ್ತಿಕ್ಕಲೆಂದೇ ಓರ್ವ ಡಿ.ವೈ.ಎಸ್.ಪಿ., 2 ಸಿ.ಪಿಐ., 5 ಪಿ.ಎಸ್.ಐ. 75 ಸಿವಿಲ್ ಪೋಲಿಸ್ ಹಾಗೂ 3 ಡಿ.ಎ.ಆರ್. ತುಕಡಿಗಳನ್ನು ಸ್ಥಳಕ್ಕೆ ನಿಯೋಜಿಸಿದ್ದರು. ಜನರು ಉದ್ರಿಕ್ತರಾಗಿ 5 ದ್ವಿಚಕ್ರ ವಾಹನ, 1 ಬಸ್‌ಗೆ ಬೆಂಕಿಹಚ್ಚಿ ಉಳಿದ ಆಸ್ತಿಪಾಸ್ತಿಗಳನ್ನು ನಷ್ಟಮಾಡಿದ್ದರೆಂದು ಆರೋಪಿಸಿ



ಬಂಧಿತರಿಗೆ ಜಾಮೀನು ನೀಡುವ ಸಲುವಾಗಿ ಹೋಗಿ ತಾವೇ ಬಂಧನಕ್ಕೊಳಗಾಗಿ ಪೊಲೀಸರಿಂದ ತೀವ್ರ ಪೆಟ್ಟುತಿಂದವರು

ಅಶ್ರುವಾಯು ಸಿಪಡಿಸಿದರು, ಲಾಠಿ ಪ್ರಹಾರ ನಡೆಸಿದರು ; ಮಹಿಳೆಯರು, ಮುದುಕರೆಂದು ನೋಡದೇ ಮನಸೋಇಚ್ಛೆ ಅಂಗಾಂಗಗಳಿಗೆ ಥಳಿಸಿದರು, ರಾಕ್ಷಸೀಕೃತ್ಯನಡೆಸಿ ಸರ್ಕಾರ ಹೋರಾಟಗಾರರನ್ನು ಬಂಧಿಸಿತು. ಕಾರವಾರದಲ್ಲೇ ವಿಚಾರಿಸುವ ಬದಲು ಬಳ್ಳಾರಿ ಮತ್ತು ಹಿಂಡಲಗಾ ಜೈಲಿಗೆ ಎಳೆದೊಯ್ದರು. ದಾರಿಯುದ್ದಕ್ಕೂ ಮಹಿಳೆಯರನ್ನು ಅವಮಾನಿಸಿ, ಥಳಿಸಿದರು. ಸೆಕ್ಷನ್ 143, 147, 307, 353, 435, 232, 427, 506(2), 504, 114, 120(ಬಿ); ಕೆ.ಪಿ.ಎಫ್.ಡಿ

ಪುಟ 6ಕ್ಕೆ

ವಿದ್ಯುತ್ ಉತ್ಪಾದನೆ ಮತ್ತು ವಿರೋಧಿ ಚಳುವಳಿಗಳು

ಪುಟ 5 ರಿಂದ

ವ್ಯಕ್ತಪಡಿಸುತ್ತಿದ್ದಾರೆ. ಪೋಲೀಸರ ದೌರ್ಜನ್ಯಕ್ಕೂ ತುತ್ತಾಗಿದ್ದಾರೆ.

ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳ ಈ ವರ್ತನೆ ಪೂರ್ಣವಾಗಿ ಬೇಜವಾಬ್ದಾರಿತನದ್ದು. ರಾಜಕೀಯ ಸಂದರ್ಭ ಸಾಧಕತನದ ವರ್ತನೆ-ಕೇವಲ ಒಂದು ಕ್ಷೇತ್ರದ ಗೆಲುವಿಗಾಗಿ ರಾಜ್ಯದ ಹಿತವನ್ನೇ ಬಲಿಕೊಡುವ ವರ್ತನೆ ಅಕ್ಷಮ್ಯ. ಆದ್ದರಿಂದ ರಾಜಕೀಯ ಪಕ್ಷಗಳು ರಾಜ್ಯದಲ್ಲಿನ ವಿವಿಧ ಯೋಜನೆಗಳ ಬಗ್ಗೆ ಸರ್ವಸಮ್ಮತಿ ರೂಪುಗೊಳಿಸಬೇಕು. ಅದಕ್ಕೆ ಸಂಬಂಧಿಸಿದ ತಮ್ಮ ಪಕ್ಷಗಳ ಕಾರ್ಯಕರ್ತರು, ಬೆಂಬಲಿಗರಿಗೆ ವಿವರಿಸಬೇಕು. ಅವರ ಮೂಲಕ ಜನತೆಯನ್ನು ಒಲಿಸಿಕೊಳ್ಳಬೇಕು. ಇದು ಆಳುವ ಪಕ್ಷ- ವಿರೋಧಪಕ್ಷಗಳೆರಡರ ಮೇಲೆಯೂ ಇರುವ ಜವಾಬ್ದಾರಿ. ಆದರೆ ಇಡೀ ರಾಜ್ಯದ ಜನತೆಗೆ, ಅವರ ಜೀವನಮಟ್ಟವನ್ನು ಉತ್ತಮಗೊಳಿಸುವುದಕ್ಕೆ, ಯೋಜನೆಗಳಿಂದ ಬಾಧಿತರಾಗಿರುವವರ ಜೀವನಮಟ್ಟವನ್ನು ರಕ್ಷಿಸಿ ಉತ್ತಮಗೊಳಿಸುವುದಕ್ಕೆ ಬದ್ಧರಾಗಬೇಕು.

ಪರಿಸರವಾದಿಗಳು ಮತ್ತು ಬುದ್ಧಿಜೀವಿಗಳ ಪಾತ್ರ

ರಾಜ್ಯದಲ್ಲಿ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಸಂರಕ್ಷಿಸಲು ಬುದ್ಧಿಜೀವಿಗಳು ಗಣನೀಯ ಪಾತ್ರ ವಹಿಸುತ್ತಿದ್ದಾರೆ. ಆದರೆ ಅದೇ ಸಮಯದಲ್ಲಿ ರಾಜ್ಯದ ಸಮಗ್ರ ಅಭಿವೃದ್ಧಿಯ-ಜನತೆಯ ಒಟ್ಟು ಹಿತದೃಷ್ಟಿಯಿಂದ ಯೋಚಿಸದೆ ಒಂದು ನಿರ್ದಿಷ್ಟ ಯೋಜನೆ, ನಿರ್ದಿಷ್ಟ ಪ್ರದೇಶವನ್ನೂ ಮಾತ್ರ ಬೇರೆ, ಬೇರೆಯಾಗಿ ನೋಡುತ್ತಾ, ಇಂತಹ ಚಳುವಳಿಗಳಿಗೆ ಬೆಂಬಲ ನೀಡುವ, ನಾಯಕತ್ವ, ನೀಡುವ ಪ್ರಕ್ರಿಯೆ ರಾಜ್ಯದಲ್ಲಿದೆ. ಸಾಮಾನ್ಯ ಬುದ್ಧಿ ಜೀವಿಗಳನ್ನು ಈ ಚಳುವಳಿಗಳಲ್ಲಿ ತೊಡಗಿಸುವವರು ಪರಿಸರವಾದಿಗಳು. ಪರಿಸರವಾದಿಗಳಲ್ಲಿ ಅನೇಕರು ಪ್ರಾಮಾಣಿಕವಾಗಿಯೇ ಪರಿಸರದ ಬಗ್ಗೆ ಆತಂಕದಿಂದ ಈ ಪ್ರಶ್ನೆಗಳಲ್ಲಿ ಭಾಗವಹಿಸಿದರೂ ಕೇವಲ ಒಮ್ಮುಖದಿಂದ ಇಂತಹ ಪ್ರಶ್ನೆಗಳನ್ನು ನೋಡುವುದು ಜನತೆಯು ಮುಂದಿಡುವುದು ಜನತೆಯನ್ನು ತಪ್ಪುದಾರಿಗೆಳೆಯುತ್ತದೆ.

ಕೆಲವು ಪರಿಸರವಾದಿಗಳು ಯೋಜನೆಗಳ ನಿಜ ಆತಂಕಗಳ ಜೊತೆಗೆ ಅನೇಕ ಉತ್ಪ್ರೇಕ್ಷಿತ ಆತಂಕಗಳನ್ನು ಸುಳ್ಳು ಆತಂಕಗಳನ್ನು ಮೂಡಿಸುವುದು ಅನೇಕ ಬಾರಿ ಗಮನಕ್ಕೆ ಬಂದಿದೆ. ಕೈಗಾ ಅಣು ವಿದ್ಯುತ್ ಯೋಜನೆಗೆ ಸಂಬಂಧಿಸಿ ಶಿವರಾಮಕಾರಂತರಂತಹ ದೊಡ್ಡ ಹಿರಿಯ ಸಾಹಿತಿಗಳೇ ನಾಯಕತ್ವ ವಹಿಸಿದ್ದಾಗ ಕೆಲವು ಪರಿಸರವಾದಿಗಳು ಉತ್ಪ್ರೇಕ್ಷಿತ ಭಯಗಳನ್ನು ಅಪ್ಪಟ ಸುಳ್ಳುಗಳನ್ನು ಹೇಳುತ್ತಾ ಜನತೆಯನ್ನು ದಾರಿತಪ್ಪಿಸಲು ಯತ್ನಿಸಿದ್ದನ್ನು ಸಿಪಿಐ(ಎಂ) ಪಕ್ಷ ಸ್ವಂತವಾಗಿ ಎದುರಿಸಿದೆ. ಕೈಗಾ ಯೋಜನೆಯನ್ನು ಜಾರಿಗೊಳಿಸಬೇಕೆಂದು ರಾಜ್ಯಾದ್ಯಂತ ಪ್ರಚಾರ ಹಾಗೂ ಚಳುವಳಿಗಳನ್ನು ನಡೆಸಿದೆ.

ಹೀಗೆ ಪರಿಸರದ ಬಗ್ಗೆ ಪ್ರಾಮಾಣಿಕ ಆತಂಕವುಳ್ಳವರು ಮತ್ತು ಸುಳ್ಳು ಹಾಗೂ ಉತ್ಪ್ರೇಕ್ಷಿತ ಭಯವನ್ನು ಸೃಷ್ಟಿಸುವವರ ನಡುವಿನ ವ್ಯತ್ಯಾಸ ಬಹಳ ಮುಖ್ಯವಾದದ್ದು. ಆದರೆ ಸಾಮಾನ್ಯವಾಗಿ ಇದನ್ನು ಗುರುತಿಸುವುದು ಸುಲಭವಲ್ಲ. ಹೀಗಾಗಿ ಬುದ್ಧಿಜೀವಿಗಳು ಹಾಗೂ ಸಾಮಾನ್ಯ ಜನತೆ ತಪ್ಪುದಾರಿಗೆಳೆಯಲ್ಪಡುತ್ತಾರೆ. ಈ ಸಂದರ್ಭದಲ್ಲಿ ಜನತೆಗೆ ಸರಿಯಾದ ನಿಜವಾದ ಮಾಹಿತಿಯನ್ನು ಒದಗಿಸಬೇಕಾದದ್ದು ಸರ್ಕಾರಗಳ ಕರ್ತವ್ಯ. ರಾಜ್ಯ ಸರ್ಕಾರ, ಕೇಂದ್ರ ಸರ್ಕಾರಗಳು ಸಂಬಂಧಿಸಿದ ಸರ್ಕಾರಿ ಸಂಸ್ಥೆಗಳು ಮಾಹಿತಿಯನ್ನು ಜನರ ಮುಂದಿಡದಿರುವುದು ರಾಜಕೀಯ ಪಕ್ಷಗಳು ಸಂದರ್ಭಸಾಧಕತನದಿಂದ ವರ್ತಿಸುವುದು ಜನತೆ ತಪ್ಪುದಾರಿಗೆಳೆಯಲ್ಪಡಲು ಪ್ರಮುಖ ಕಾರಣ.

ಈ ಸಂದರ್ಭದಲ್ಲಿ ಮತ್ತೊಂದು ವಿಷಯವನ್ನು ನಾವು ಗಮನಕ್ಕೆ ತೆಗೆದುಕೊಳ್ಳಬೇಕು. ಭಾರತದಂತಹ ಅಭಿವೃದ್ಧಿ ಶೀಲ ದೇಶಗಳಲ್ಲಿ ವಿದ್ಯುತ್ ಉತ್ಪಾದನೆ ಕುಂಠಿತವಾಗಬೇಕು.ಸರ್ಕಾರ ಹಾಗೂ ರಾಜಕೀಯ ಪಕ್ಷಗಳು, ಅಧಿಕಾರಿಗಳ ಮಟ್ಟದಲ್ಲಿ ತೀರ್ಮಾನಗಳನ್ನು ತಡೆಹಿಡಿಯುವುದು ಇತ್ಯಾದಿಗಳ ಜೊತೆ ಬಹುರಾಷ್ಟ್ರೀಯ ಸಂಸ್ಥೆಗಳ ಕೈಗೆ ಸಿಗಬೇಕು ಎಂಬ ಒಳಸಂಚನ್ನು ಬಹಳ ಕಾಲದಿಂದ ಅಮೇರಿಕಾದಂತಹ ಸಾಮ್ರಾಜ್ಯಶಾಹಿಗಳು ನಡೆಸಿದ್ದಾರೆ. ವಿದ್ಯುತ್ ಉತ್ಪಾದನೆಯನ್ನು ಕುಂಠಿತ ಗೊಳಿಸುವುದು ಕೈಗಾರಿಕಾ ಹಾಗೂ ಕೃಷಿ ಉತ್ಪಾದನೆಯನ್ನು ಕುಂಠಿತಗೊಳಿಸಿದಂತೆ ಆ ಮೂಲಕ ಅಮೇರಿಕಾದಂತಹ ಸಾಮ್ರಾಜ್ಯಶಾಹಿ ದೇಶಗಳ ಕೃಷಿ ಹಾಗೂ ಕೈಗಾರಿಕಾ ಉತ್ಪನ್ನಗಳನ್ನು ಭಾರತದಂತಹ ದೇಶಗಳಲ್ಲಿ ಮಾರಲು ದೊಡ್ಡ ಅವಕಾಶ ಲಭ್ಯವಾಗುತ್ತದೆ. ಇದು ಅಭಿವೃದ್ಧಿಶೀಲ ದೇಶಗಳು ನಿರಂತರವಾಗಿ ಸಾಮ್ರಾಜ್ಯಶಾಹಿ ದೇಶಗಳ ಮೇಲೆ ಅವಲಂಬಿಸುವಂತೆ ಮಾಡುವ ತಂತ್ರವೂ ಆಗಿದೆ.

ಇದಕ್ಕಾಗಿ ಅವರು ಅನೇಕ ತಂತ್ರ, ಕುತಂತ್ರಗಳನ್ನು ದಿನನಿತ್ಯವೂ ನಡೆಸಿದ್ದಾರೆ. ಅದರಲ್ಲಿ ಸರ್ಕಾರೇತರ ಸಂಸ್ಥೆಗಳು ಅಥವಾ ಸ್ವಯಂ ಸೇವಾ ಸಂಸ್ಥೆಗಳಿಗೆ ದೊಡ್ಡ ಪ್ರಮಾಣದ ಹಣ ನೀಡಿ ಅಪಪ್ರಚಾರ ನಡೆಸಲು ಸಾಹಿತ್ಯ ಇತ್ಯಾದಿ ಒದಗಿಸುವುದು ಒಂದು ಮಾರ್ಗ. ಪರಿಸರ ಸಂಘಟನೆಗಳಲ್ಲಿ ಕೆಲವು ಇಂತಹ ಜಾಲಕ್ಕೆ ಸಿಲುಕಿದ್ದಾರೆ ಎಂಬುದನ್ನು ಗಮನಿಸಬೇಕು.

ಹಣಕೋಣಕ್ಕೆ ಸಂಬಂಧಿಸಿ ತಕ್ಷಣ ಜ[illegible] ಮನವೊಲಿಸಿಕೊಳ್ಳಲು ಮೇಲೆ ಸೂಚಿಸಿದ ಕ್ರಮಗಳನ್ನು ಸರ್ಕಾರ ಕೈಗೊಳ್ಳಬೇಕು. ಬಾಧಿತರಾಗುವ ಜನರಿಗೆ ಉತ್ತಮ ಪರಿಹಾರವನ್ನೊದಗಿಸುವ ಕೆಲಸವನ್ನು ಯೋಜನೆಯ ಕೆಲಸದ ಜಾರಿ ಜೊತೆಗೆ ಅಥವಾ ಮೊದಲೇ ಆರಂಭಿಸಬೇಕು.

ಕಾಂಗ್ರೆಸ್ ಮೊದಲಾದ ಪಕ್ಷಗಳು ಹೊಣಗಾರಿಕೆಯಿಂದ ವರ್ತಿಸಬೇಕು. ○

ಪ್ರತಿಭಟನಾಕಾರರಿಗೆ ಬೆತ್ತ - ಬೂಟಿನೇಟು : ರಾಕ್ಷಸೀ ಪೊಲೀಸ್ ದೌರ್ಜನ್ಯ

ಪುಟ 5 ರಿಂದ

ಮತ್ತು ಆಸ್ತಿಪಾಸ್ತಿ ನಷ್ಟಪಡಿಸಿದ ಕಾನೂನಿನ ಪ್ರಕರಣಗಳನ್ನು ಹಾಕಿದರು. ಸುಮಾರು 127 ಜನರನ್ನು ಪ್ರಕರಣದಲ್ಲಿ ಸೇರಿಸಿದರು. ದಾರಿಯಲ್ಲಿ ಹೋಗುವವರು, ಜಾಮೀನು ನೀಡಲು ಬಂದವರು, ಈ ಹಿಂದೆ ಹೋರಾಟದಲ್ಲಿದ್ದವರು, ಕೋರ್ಟಿನಲ್ಲಿ ವಾದಿಸುತ್ತಿದ್ದವರು, ಹೀಗೆ ಎಗ್ಗಿಲ್ಲದೇ ಪೋಲಿಸ್ ದಾಂಧಲೆ ನಡೆಯಿತು. ಊರಿಗೆಊರೇ ಜೀವ ಕಾಪಾಡಿಕೊಳ್ಳಲು ಬೇರೆಡೆ ಆಶ್ರಯ ಪಡೆಯಿತು.ಅಷ್ಟು ಭೀತಿಯ ವಾತಾವರಣ ನಿರ್ಮಾಣವಾಗಿತ್ತು.

ಕಾಂಗ್ರೆಸ್-ಬಿಜೆಪಿ ಹಾಗೂ ಎರಡೂ ಪಕ್ಷದಲ್ಲಿ ಇಲ್ಲದ ಆದರೆ ಸ್ಥಳೀಯ ಮಂತ್ರಿಗಳಿಗೆ ಆಗದ ಎಲ್ಲರ ಮೇಲೂ ಕೇಸ್ ದಾಖಲು. ಇದೊಂದು ವ್ಯವಸ್ಥಿತ ಪಿತೂರಿ. ಹೋರಾಟಗಾರರಲ್ಲಿ ಕೆಲವರು ಹೇಳುವಂತೆ 'ಇಡೀ ಹೋರಾಟದ ಚಿತ್ರೀಕರಣ ನಡೆಸಿದ ಪೋಲಿಸರು, ಗಾಡಿಗೆ ಬೆಂಕಿ ಹಚ್ಚಿದವರನ್ನೇಕೆ ತೋರಿಸಿಲ್ಲ? ಅಂದರೆ ಇದು ಸರ್ಕಾರ ಪ್ರಾಯೋಜಿತ ಗೂಂಡಾಗಳ ಕೃತ್ಯ ಹೊರತು ಹೋರಾಟಗಾರರದ್ದಲ್ಲ ಎಂದೇ ಹಲವರ ವಾದ.

ಮಹಿಳೆಯರ ಮೇಲಿನ ದೌರ್ಜನ್ಯದ ಪರಮಾವಧಿಯನ್ನು ಬಳ್ಳಾರಿ ಜೈಲಿನಿಂದ ಬಂದ ಮೇಲೆ ಹೋರಾಟಗಾರರು ತೋರಿಸಿದರು. ಅಂತೂ ಕಾರವಾರದಲ್ಲಿ ಬಿಜೆಪಿ ಶಾಸಕ- ಮಂತ್ರಿ ಇದ್ದೂ ಕೂಡ ಬಿಜೆಪಿ ಮುಖಂಡರ ಮೇಲೆ ಅಮಾನುಷ ಪೋಲಿಸ್ ದಾಳಿ ನಡೆದಿದೆ. ಯಡಿಯೂರಪ್ಪ ಸರ್ಕಾರ ಯಾವ ಕಡೆ ಸಾಗುತ್ತಿದೆ ಎಂಬುದರ ಮುನ್ಸೂಚನೆ ಜನರಿಗೆ ದೊರೆಯಿತು..

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಸಮಿತಿ ಪತ್ರಿಕಾಗೋಷ್ಠಿ ಕರೆದು ಈ ಘಟನೆಯನ್ನು ಖಂಡಿಸಿತು. ಪ್ರಜಾಸತ್ತಾತ್ಮಕ ಹೋರಾಟ ಹತ್ತಿಕ್ಕಲು ಬಿಜೆಪಿ ಸರ್ಕಾರ ಮಾಡಿದ ಷಡ್ಯಂತ್ರ ಬಯಲುಗೊಳಿಸಿ, ಎಲ್ಲಾ ಹೋರಾಟಗಾರರನ್ನು ತಕ್ಷಣ ಬೇಷರತ್ ಬಿಡುಗಡೆಮಾಡಿ, ಪ್ರಕರಣ ಹಿಂಪಡೆಯಬೇಕೆಂದು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಶಾಂತಾರಾಮ ನಾಯಕ, ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಯಮುನಾ ಗಾಂವ್ಕರ್, ಡಿವೈಎಫ್ಐನ ಡಿ. ಸ್ಯಾಮ್ಸನ್, ವಕೀಲರಾದ ಜೋಸ್ ಥಾಮಸ್ ಆಗ್ರಹಿಸಿದರು. ದಾಂಡೇಲಿಯಲ್ಲಿ ಜನವಾದಿ ಮಹಿಳಾ ಸಂಘಟನೆ, ಡಿವೈಎಫ್ಐ, ಎಸ್ಎಫ್ಐಗಳಿಂದ ಪ್ರತಿಭಟನಾ ಸಭೆ ನಡೆಸಿ ಮುಖ್ಯಮಂತ್ರಿಗೆ ಮನವಿ ಅರ್ಪಿಸಲಾಯಿತು. ಅಂಕೋಲಾದಲ್ಲಿ ಪ್ರಾಂತ ರೈತ ಸಂಘ ಮತ್ತು ವಿವಿಧ ಜನಪರ ಸಂಘಟನೆಗಳು ಸೇರಿ ಪ್ರತಿಭಟಿಸಿವೆ. ಕಾಂಗ್ರೆಸ್ ಪಕ್ಷವು ಆಗಸ್ಟ್ 3 ರಂದು ಜಿಲ್ಲೆಯಾದ್ಯಂತ ಪ್ರತಿಭಟನೆ ಮಾಡಿದೆ.

ಇಷ್ಟೆಲ್ಲ ನಡೆದರೂ ಜಿಲ್ಲೆಯ ಅಭಿವೃದ್ಧಿಯ ಬಗ್ಗೆ ಮತ್ತು ಜನರ ದಿನನಿತ್ಯದ ಸಮಸ್ಯೆಗೆ ಸ್ಪಂದಿಸಬೇಕಾದ ಜಿಲ್ಲಾ ಉಸ್ತುವಾರಿ ಸಚಿವರಾದ ಕಾಗೇರಿಯವರಾಗಲೀ, ವಿಜ್ಞಾನ ಮಂತ್ರಿ ಆನಂದ ಅಸ್ನೋಟಿಕರರಾಗಲೀ ಸ್ಥಳಕ್ಕೆ ಆಗಮಿಸಿಲ್ಲ. ಸಾಂತ್ವನದ ಮಾತುಗಳನ್ನಾಡುವ ಕನಿಷ್ಠ ಜವಾಬ್ದಾರಿ, ಕಾಳಜಿ, ಕಳಕಳಿ ತೋರಲಿಲ್ಲ.

ಬಿಜೆಪಿ ಬ್ರಹ್ಮಾಸ್ತ್ರ ಯಾರ ಮೇಲೆ?

ಗ್ರಾಮ ಪಂಚಾಯ್ತಿ ಕಾರ್ಯದರ್ಶಿ ಶೇಖ್ ಎನ್ನುವವರು ಅನಾರೋಗ್ಯದ ನಿಮಿತ್ತ ಆಸ್ಪತ್ರೆಗೆ ದಾಖಲಾಗಿದ್ದುದು ಕಾಕತಾಳೀಯವಾಗಿರಬಹುದು. ಆದರೆ ಅಂದು ಅವರಿದ್ದರೆ ಈ ಅನಾಹುತ ಆಗುತ್ತಿರಲಿಲ್ಲ ಎನ್ನುವ ಜಿಲ್ಲಾಡಳಿತ ತನ್ನ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಕಾರ್ಯದರ್ಶಿಯನ್ನೇ ಅಮಾನತ್ ಮಾಡಿದೆ. ಯಾರು ಯಾವುದಕ್ಕೆ ಬಲಿ? ಕೇಂದ್ರ ಮತ್ತು ರಾಜ್ಯ ಸರ್ಕಾರದ ಉನ್ನತ ಅಧಿಕಾರಿಗಳು ಉತ್ತರಿಸಬೇಕಾದ ಸ್ಥಾನದಲ್ಲಿ ಗ್ರಾಮ ಪಂಚಾಯ್ತಿ ಕಾರ್ಯದರ್ಶಿ ಇದ್ದಾರೆಯೇ?

ಅಂದು ಹೋರಾಟಗಾರರು ; ಇಂದು ಪಾಲುದಾರರು!

ಇತ್ತೀಚಿನ ಮಾಹಿತಿ ಪ್ರಕಾರ ಉಷ್ಣವಿದ್ಯುತ್ ಸ್ಥಾವರ ನಿರ್ಮಾಣದ ಕಾರ್ಯ ಕೈಗೊಳ್ಳುವ ಇಂದ್ ಭಾರತ್ ಕಂಪನಿಯ ಪಾಲುದಾರರಾಗಿ ಬಿಜೆಪಿಯ ವೆಂಕಯ್ಯನಾಯ್ಡುರವರ ಅಳಿಯ ಸಂಬಂಧಿಯೋರ್ವರಿದ್ದಾರಂತೆ. ಹಾಗಾಗಿ ಈ ಗಲಭೆ ಕುರಿತು ಗೃಹಮಂತ್ರಿ ವಿ.ಎಸ್.ಆಚಾರ್ಯರಿಗೆ ಮಾಹಿತಿ ಇಲ್ಲವಂತೆ! ಅವರ ಅಡಿಯಾಳು ಪೋಲಿಸರು ಹೋರಾಟಗಾರರ ಮೇಲೆ ಯಾವುದೇ ದೌರ್ಜನ್ಯ ನಡೆಸಿದರೂ ಫುಲ್ ಪರ್ಮಿಷನ್! ಮತ್ತೆ ಈ ಭಾಗದಿಂದ ಒಂದು ಬಾರಿಗೆ ಶಾಸಕನಾಗಲು 2 ಬಾರಿ ಗೆದ್ದ ಚಿಕ್ಕದಣಿ ಸಚಿವ ಆನಂದರಿಗೆ ಉಷ್ಣ ವಿದ್ಯುತ್‌ಗೆ ಬೇಕಾದ ಪ್ರಧಾನ ಸಾಮಗ್ರಿ ಸರಬರಾಜು ಮಾಡುವ ಗುತ್ತಿಗೆ ಸಿಕ್ಕಿದೆಯಂತೆ! ಸ್ಥಾವರಕ್ಕೆ ಕೇಂದ್ರದ ಯುಪಿಎ ಅಂದರೆ ಕಾಂಗ್ರೆಸ್ ಅನುಮತಿ ನೀಡಿದ[illegible] ರಾಜ್ಯದ ಬಿಜೆಪಿ ಸರ್ಕಾರ ಸಮ್ಮತಿ ಸೂಚಿಸಿದೆ. ಸದ್ಯಕ್ಕೆ ಜನರ ಸ್ಥಿತಿ ಅತಂತ್ರ. ಅಡಕತ್ತರಿಯಲ್ಲಿ ಸಿಲುಕಿದ್ದಾರೆ.

ದೋಷ ಪರಿಹಾರ್ಯಾರ್ಥೇ ಯಜ್ಞಂ ಕರಿಷ್ಯಾಮಿ!

ಸರ್ವ ಸಂಘ ಪರಿತ್ಯಾಗಿ ಪೇಜಾವರ ಸ್ವಾಮಿಗೆ ಸ್ಥಾವರ ಸ್ಥಾಪನೆಯಾಸೆ. ಉತ್ತರ ಕನ್ನಡದ ಯಾವುದೇ ಪರಿಸರ ಹೋರಾಟಕ್ಕೂ ಸ್ವಾಮಿಗಳು ಉಟ್ಟ ಧೋತರದಲ್ಲಿ ಬಿಟ್ಟ ಮೈಯಲ್ಲಿ ಹಾಜರ್! ಎಲ್ಲಾ ತ್ಯಾಗದ ಭಾಷಣ! ಪರಿಸರಕ್ಕೆ ಹಾನಿಯಾಗುವ ಉಷ್ಣವಿದ್ಯುತ್ತಿನ ಹಾರುಬೂದಿ ಬಗ್ಗೆ ಇಲ್ಲಸಲ್ಲದ ಭೊಗಳೆ ಮಾತಾಡಿ, ಧಾರ್ಮಿಕ ಭಾವನೆ ಕೆರಳಿಸಿ, ಭೂಮಾತೆ ರಕ್ಷಿಸುವ ಪಣತೊಡಿಸಿ ಹೋದ ಪೇಜಾವರ ಸ್ವಾಮಿ ಈಗ ದಾಟಿ ಬದಲಿಸಿದ್ದಾರೆ. ಏಕೆಂದರೆ ಬಿಜೆಪಿ ಸರ್ಕಾರದ ಮಾನ ಮರ್ಯಾದೆ ರಕ್ಷಕರು ಮಠದ ಸ್ವಾಮಿಗಳೇ ಅಲ್ಲವೇ? ಸ್ಥಾವರದ ನಿರ್ಮಾಣದಿಂದ ದೋಷವೇನಾದರೂ ಇದ್ದರೆ ಪರಿಹಾರಾರ್ಥವಾಗಿ ಸರ್ಕಾರದ ಜೊತೆಗೆ ಚರ್ಚಿಸುತ್ತೇನೆ, ಜನರನ್ನು ಒಲಿಸಿ ಉಷ್ಣ ವಿದ್ಯುತ್ ಸ್ಥಾವರ ನಿರ್ಮಿಸಲು ಸಹಕರಿಸುತ್ತೇನೆ ಎಂದ[illegible] ಈಟಿವಿಯಲ್ಲಿ ಪೇಜಾವರರು ಹೇಳಿದ್ರು. ○

ಭಾರತ-ಅಮೆರಿಕಾ ಸಾಮರಿಕ ಮೈತ್ರಿ ನಮ್ಮ ವಿದೇಶಾಂಗ ನೀತಿಯ ಮೇಲಷ್ಟೇ ಅಲ್ಲ, ನಮ್ಮ ಆಂತರಿಕ ನೀತಿ ನಿರ್ಧಾರಣೆಗಳ ಇತರ ವಲಯಗಳಲ್ಲೂ ಪ್ರಭಾವ ಬೀರುತ್ತಿದೆ. ಹಿಲರಿ ಕ್ಲಿಂಟನ್ ಭೇಟಿಯ ಜಂಟಿ ಹೇಳಿಕೆಯಲ್ಲಿ ಇದು ಕಾಣುತ್ತಿದೆ. ಲೋಕಸಭಾ ಚುನಾವಣಾ ತೀರ್ಪು ರಾಷ್ಟ್ರೀಯ ಸಾರ್ವಭೌಮತೆಯನ್ನು ಒತ್ತೆಯಿಡಲು, ಭಾರತವನ್ನು ಅಮೆರಿಕಾದ ಸಹಚರನಾಗಿ ಪರಿವರ್ತಿಸಲು ತಮಗೆ ಕೊಟ್ಟಿರುವ ಪರವಾನಿಗೆ ಎಂದು ಪ್ರಧಾನ ಮಂತ್ರಿಗಳು ಮತ್ತು ಯುಪಿಎ ಸರಕಾರ ಭಾವಿಸಿದಂತಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ಇತ್ತೀಚಿನ ಬೆಳವಣಿಗೆಗಳನ್ನು ಕುರಿತ ಈ ವಿಶ್ಲೇಷಣೆಯಲ್ಲಿ ಹೇಳುತ್ತಾರೆ.

ಅಮೆರಿಕಾದ ಸಹಚರನಾಗುವತ್ತ ಇನ್ನಷ್ಟು ಹೆಜ್ಜೆಗಳು

ಯುಪಿಎ ಸರಕಾರದ ಎರಡನೇ ಆವೃತ್ತಿಯ ಎರಡು ತಿಂಗಳಲ್ಲಿ ಹೊಮ್ಮಿರುವ ಸಂಕೇತಗಳು ಸ್ಪಷ್ಟವಾಗಿವೆ. ಅಮೆರಿಕಾದೊಂದಿಗೆ ಸಾಮರಿಕ ಸಂಬಂಧಗಳನ್ನು ವ್ಯಾಪಕಗೊಳಿಸಲಾಗುವುದು, ಆಳಗೊಳಿಸಲಾಗುವುದು ಎಂಬುದೇ ಆ ಸಂಕೇತ. ಭಾರತಕ್ಕೆ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ವಿದೇಶಾಂಗ ಕಾರ್ಯದರ್ಶಿ ಹಿಲರಿ ಕ್ಲಿಂಟನ್ ಭೇಟಿಯ ಫಲಶ್ರುತಿಯಿಂದ ಇದೀಗ ದೃಢಪಟ್ಟಿದೆ.

ಮಿಲಿಟರಿ ಶಾಮೀಲು ಈ ಸಾಮರಿಕ ಸಂಬಂಧದ ತಿರುಳು. ಅಮೆರಿಕಾದೊಂದಿಗೆ 10 ವರ್ಷಗಳ ರಕ್ಷಣಾ ಸಹಕಾರ ಒಪ್ಪಂದವಾಗಿ ನಾಲ್ಕು ವರ್ಷಗಳು ಕಳೆದಿವೆ. ಜೂನ್ 2005ರಲ್ಲಿ ಯುಪಿಎ ಸರಕಾರ ಅಮೆರಿಕಾ ಸಂಯುಕ್ತ ಸಂಸ್ಥಾನಗಳು ಮತ್ತು ಭಾರತ ರಕ್ಷಣಾ ಸಂಬಂಧದ ಹೊಸ ಚೌಕಟ್ಟು ಎಂಬ ಹೆಸರಿನ ಈ ಒಪ್ಪಂದವನ್ನು ಮಾಡಿಕೊಂಡಿತ್ತು. ಅಮೆರಿಕಾ ರಕ್ಷಣಾ ಸಹಕಾರಕ್ಕೆ ಆದ್ಯತೆ ಕೊಡುತ್ತದೆ. ಅದು ಭಾರತವನ್ನು ತನ್ನ ಸಾಮರಿಕ ಸಹಚರನಾಗಿ ಮಾಡಿಕೊಳ್ಳುವಲ್ಲಿ ಇದೇ ಅದಕ್ಕೆ ಕೀಲಿಕೈ.

ಮಿಲಿಟರಿ ಶಾಮೀಲು

ಭಾರತ-ಅಮೆರಿಕಾ ಪರಮಾಣು ವ್ಯವಹಾರ ಈ ರಕ್ಷಣಾ ಒಪ್ಪಂದಕ್ಕೆ ಹಾಕಿದ್ದ ಶರತ್ತು. ಕ್ಲಿಂಟನ್ ಭೇಟಿಯ ಮುನ್ನಾದಿನ ಅಮೆರಿಕಾದ ಸಹಾಯಕ ವಿದೇಶಾಂಗ ಕಾರ್ಯದರ್ಶಿ ಫಿಲಿಪ್ ಜೆ ಕ್ರಾಲೆ ಇದನ್ನು ಸ್ಪಷ್ಟಪಡಿಸಿದರು. "ಅಂತಿಮ ಬಳಕೆಯ ಉಸ್ತುವಾರಿ(ಇಯುಎಂ) ಭಾರತ-ಅಮೆರಿಕಾ ಪರಮಾಣು ಸಹಕಾರ ಕ್ಷೇತ್ರದಲ್ಲಿ ಸಹಿ ಹಾಕಿದ ಒಂದು ಮಹತ್ವಪೂರ್ಣ ಮೊದಲ ಹೆಜ್ಜೆಯನ್ನು ಈಡೇರಿಸುವುದರ ಭಾಗ" ಎಂದು ಆತ ಹೇಳಿದರು.

ಕಾಂಗ್ರೆಸ್ ನೇತೃತ್ವದ ಸರಕಾರ ಆ ಚೌಕಟ್ಟು ಒಪ್ಪಂದದ ಪರಿಣಾಮಗಳೇನು ಎಂದು ವಿವರಿಸಲು ಸದಾ ನಾಚಿಕೊಳ್ಳುತ್ತಿತ್ತು. ಆಗ ರಕ್ಷಣಾ ಮಂತ್ರಿಯಾಗಿದ್ದ ಪ್ರಣಬ್ ಮುಖರ್ಜಿ ಸಂಸತ್ತಿನಲ್ಲಿ "ಈ ಚೌಕಟ್ಟಿನಲ್ಲಿ ಅನುವು ಮಾಡಿಕೊಡುವ ಅಂಶಗಳಷ್ಟೇ. ಯಾವುದೇ ಬದ್ಧತೆ, ಬಾಧ್ಯತೆಗಳು ಅದರಲ್ಲಿ ಇಲ್ಲ" ಎಂದು ಹೇಳಿಕೆ ಕೊಟ್ಟಿದ್ದರು. ಈ ಚೌಕಟ್ಟು ಒಪ್ಪಂದದಿಂದ ಒಪ್ಪಂದಗಳ ಒಂದು ಸರಣಿಯೇ ಹರಿದು ಬರಲಿದೆ ಎಂದು ಮಾತ್ರ ಅವರು ಹೇಳಿರಲಿಲ್ಲ. ಪೆಂಟಗನ್(ಅಮೆರಿಕಾದ ಮಿಲಿಟರಿ ವ್ಯವಸ್ಥೆ) ಈ ಮಿಲಿಟರಿ ಶಾಮೀಲಿನ ವ್ಯಾಪ್ತಿಯ ಬಗ್ಗೆ ಹೆಚ್ಚು ನೇರ ಮಾತುಗಳನ್ನಾಡಿತ್ತು. ಮಾರ್ಚ್ 2006ರಲ್ಲಿ ಬುಶ್ ರವರ ಭಾರತ ಬೇಟಿ ಕಾಲದಲ್ಲಿ ಈ ಹೊಸ ಸಂಬಂಧದ ಪ್ರಯೋಜನಗಳನ್ನು ವಿವರಿಸುತ್ತಾ ಒಂದು ಹೇಳಿಕೆಯನ್ನು ಕೊಟ್ಟಿತ್ತು. ಅದು ಹೀಗಿತ್ತು: "ನಮ್ಮ ರಕ್ಷಣಾ ವ್ಯವಸ್ಥೆಗಳು ಮತ್ತು ಉದ್ದಿಮೆಗಳ ನಡುವೆ ಸಂಬಂಧಗಳನ್ನು ಕಟ್ಟಲು ಮತ್ತು ನಮ್ಮ ಸಶಸ್ತ್ರ ಪಡೆಗಳು ಪರಸ್ಪರರ ಉಪಕರಣಗಳನ್ನು ಪರಸ್ಪರ ನಿರ್ವಹಿಸಲು ನೆರವಾಗಿ ನಮ್ಮ ಸಾಮರಿಕ ಪಾಲುದಾರಿಕೆಯ ಪ್ರಮುಖ ಉದ್ದೇಶಗಳನ್ನು ಪೂರೈಸುತ್ತದೆ. ರಕ್ಷಣಾ ತಂತ್ರಜ್ಞಾನ ಸಹಕಾರ ಮಿಲಿಟರಿ ಸಾಮರ್ಥ್ಯಗಳನ್ನು ಬಲಪಡಿಸಲು ನೆರವಾಗುತ್ತದೆ ಮತ್ತು ವ್ಯಾಪಾರವನ್ನು ವಿಸ್ತರಿಸಿ ಆ ಮೂಲಕ ಆರ್ಥಿಕ ಪ್ರಯೋಜನಗಳನ್ನು ತರುತ್ತದೆ."

2006ರಲ್ಲಿ ಎರಡೂ ದೇಶಗಳ ನೌಕಾ ಪಡೆಗಳ ನಡುವೆ ಜಂಟಿ ಕಾರ್ಯಾಚರಣೆಗಳನ್ನು ನಡೆಸಲು ಸಾಗರ ಭದ್ರತಾ ಸಹಕಾರ ಒಪ್ಪಂದ ಮಾಡಿಕೊಳ್ಳಲಾಯಿತು. ನಂತರ ನಡೆದದ್ದು ಸೈನಿಕ ಸಾಗಣೆ ಬೆಂಬಲ ಒಪ್ಪಂದ. ಇದು ಅಮೆರಿಕಾದ ಸಶಸ್ತ್ರ ಪಡೆಗಳಿಗೆ ಭಾರತದ ಬಂದರುಗಳನ್ನು, ವೈಮಾನಿಕ ನೆಲೆಗಳನ್ನು ಇಂಧನ ತುಂಬಿಸಿಕೊಳ್ಳಲು, ನಿರ್ವಹಣೆಗೆ, ಸರ್ವಿಸಿಂಗ್ ಮತ್ತು ಸಂಪರ್ಕ ಇತ್ಯಾದಿಗಳಿಗೆ ಬಳಸಿಕೊಳ್ಳಲು ಅನುಕೂಲ ಕಲ್ಪಿಸುತ್ತಿತ್ತು. ಆದರೆ ಇದು ಮುಂದುವರೆಯಲಿಲ್ಲ. ಆಗ ಸರಕಾರವನ್ನು ಬೆಂಬಲಿಸುತ್ತಿದ್ದ ಎಡ ಪಕ್ಷಗಳ ಬಲವಾದ ವಿರೋಧ ಇದಕ್ಕೆ ಕಾರಣ.

ಈ ಮೊದಲು ಬಿಜೆಪಿ ನೇತೃತ್ವದ ಸರಕಾರದ ಅಧಿಕಾರಾವಧಿಯಲ್ಲಿ ಒಂದು "ಸಾರ್ವತ್ರಿಕ ಭದ್ರತಾ ಮತ್ತು ಮಿಲಿಟರಿ ಮಾಹಿತಿ ಒಪ್ಪಂದ"ಕ್ಕೆ ಎರಡೂ ದೇಶಗಳು ಸಹಿ ಹಾಕಿದವು. ಇದು ನಿಕಟ ಮಿಲಿಟರಿ ಸಂಬಂಧಗಳಿಗೆ, ಮಿಲಿಟರಿ ತಂತ್ರಜ್ಞಾನ ಮತ್ತು ಸಲಕರಣೆಗಳ ವರ್ಗಾವಣೆಗೆ ಒಂದು ಪೂರ್ವ ಶರತ್ತಾಗಿತ್ತು. ಈ ಒಪ್ಪಂದ ಅಮೆರಿಕಾ ಪೂರೈಸುವ ಸಾಧನ-ಸಲಕರಣೆಗಳ ಮಾಹಿತಿಯನ್ನು ಗುಪ್ತವಾಗಿಡಲು ಅನುವು ಮಾಡಿಕೊಟ್ಟಿತ್ತು. ನರಸಿಂಹ ರಾವ್ ಸರಕಾರದ ಕಾಲದಿಂದಲೇ ಅಮೆರಿಕಾ ಇಂತಹ ಒಂದು ಒಪ್ಪಂದ ಬೇಕೆಂದು ಒತ್ತಾಯ ಮಾಡುತ್ತಿತ್ತು.

ಇಯುಎಂಎ ಕುಣಿಕೆ

ಅಮೆರಿಕಾ ಉನ್ನತ ಮಟ್ಟದ ಮಿಲಿಟರಿ ಉಪಕರಣಗಳನ್ನು ಪೂರೈಕೆ ಮಾಡಿದಾಗ ಅವನ್ನು ಕೊನೆಯದಾಗಿ ಹೇಗೆ ಬಳಸಿಕೊಳ್ಳಲಾಗಿದೆ ಎಂಬುದಾಗಿ ಪರೀಕ್ಷಿಸಿ ಎಚ್ಚರಿಸಲು ಅವಕಾಶ ಮಾಡಿ ಕೊಡುವ "ಅಂತಿಮ ಬಳಕೆ ಉಸ್ತುವಾರಿ ವ್ಯವಸ್ಥೆಗಳು"(ಇಯುಎಂಎ) ಇರಲೇಬೇಕು ಎಂದು ಒತ್ತಾಯಿಸುತ್ತದೆ. ತನ್ನೆಲ್ಲ ನಾಟೋ ಮತ್ತು ಇತರ ಮಿತ್ರ ದೇಶಗಳೊಂದಿಗೆ ಅದು ಇಂತಹ ವ್ಯವಸ್ಥೆಗಳನ್ನು ಮಾಡಿಕೊಂಡಿದೆ. ಇದರ ಪ್ರಕಾರ ನಮ್ಮ ಮಿಲಿಟರಿ ವ್ಯವಸ್ಥೆಯೊಳಗೆ ನುಗ್ಗಿ ಅದು ನಡೆಸುವ ತಪಾಸಣೆ ಅದು ಪೂರೈಕೆ ಮಾಡಿದ ಉಪಕರಣದ ಬಳಕೆಯ ಬಗ್ಗೆ ಮಾತ್ರವಲ್ಲ ಅದಕ್ಕೆ ಸಂಬಂಧಪಟ್ಟ ಭಾರತದ ಉಪಕರಣಗಳು ಮತ್ತು ಅವುಗಳ ತಾಂತ್ರಿಕ ಸಾಮರ್ಥ್ಯಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ಕೂಡಾ ಅವಕಾಶ ಮಾಡಿ ಕೊಡುತ್ತದೆ. ಈ ಶರತ್ತಿನಿಂದಾಗಿ ಅಮೆರಿಕಾ ಪೂರೈಸುವ ರಕ್ಷಣಾ ಉಪಕರಣವನ್ನು ಅದು ನಿಗದಿ ಪಡಿಸಿದ ರೀತಿಯಲ್ಲಲ್ಲದೆ ಬೇರೆ ಯಾವ ರೀತಿಯಲ್ಲೂ ಭಾರತ ಬಳಸುವಂತಿಲ್ಲ.

ವಿದೇಶಾಂಗ ಮಂತ್ರಿ ಎಸ್ ಎಂ ಕೃಷ್ಣ ಬೇರೆ ದೇಶಗಳೊಂದಿಗೆ ಕೂಡಾ ಇಂತಹ ಒಪ್ಪಂದಗಳನ್ನು ಮಾಡಿಕೊಳ್ಳಲಾಗಿದೆ ಎಂದು ಸಂಸತ್ತಿನಲ್ಲಿ ಹೇಳಿದ್ದಾರೆ. ಅದು ತಪ್ಪು. ರಶ್ಯಾ ಮತ್ತು ಅದಕ್ಕೆ ಮೊದಲು ಸೋವಿಯೆಟ್ ಒಕ್ಕೂಟ ಭಾರತಕ್ಕೆ ಅತಿ ದೊಡ್ಡ ಶಸ್ತ್ರಾಸ್ತ್ರ ಪೂರೈಕೆದಾರ ದೇಶವಾಗಿತ್ತು. ಅವು ಎಂದೂ ಇಂತಹ ಒಪ್ಪಂದಗಳನ್ನು ಕೇಳಿಲ್ಲ. ಫ್ರಾನ್ಸ್ ಮತ್ತು ಇತರ ದೇಶಗಳೂ ಕೇಳಿಲ್ಲ. ಯುಪಿಎ ಸರಕಾರ ಈಗಾಗಲೇ ಅಮೆರಿಕನ್ ರಕ್ಷಣಾ ಸಲಕರಣೆಗಳನ್ನು ಖರೀದಿಸುವ ಪ್ರಕ್ರಿಯೆಯನ್ನು ಆರಂಭಿಸಿದೆ. ರಕ್ಷಣಾ ಚೌಕಟ್ಟು ಒಪ್ಪಂದವಾದ ಮೇಲೆ ಭಾರತ ನಾವಿಕ ಪರಿಶೀಲನಾ ವಿಮಾನಗಳು, ಮಿಲಿಟರಿ ಸಾಗಾಣಿಕೆ ವಿಮಾನಗಳು ಮತ್ತು ಅಮೆರಿಕಾದ ಯುಎಸ್ಎಸ್ ಟ್ರೆಂಟನ್ ಎಂಬ ಯುದ್ಧ ಹಡಗನ್ನು ಖರೀದಿಸಿದೆ. ಇವನ್ನು ದಾಳಿ ಕಾರ್ಯಾಚರಣೆಗಳಿಗೆ ಬಳಸುವಂತಿಲ್ಲ ಎಂಬ ಶರತ್ತಿದೆ.

ಈ ಇಯುಎಂಎ ವ್ಯವಸ್ಥೆಗಳಿಂದಾಗಿ ನಾವು ದೊಡ್ಡ ಪ್ರಮಾಣದಲ್ಲಿ ಅಮೆರಿಕನ್ ಶಸ್ತ್ರಾಸ್ತ್ರಗಳನ್ನು ಖರೀದಿಸುವಂತಾಗುತ್ತದೆ. ಅಮೆರಿಕಾ ಈ ರಕ್ಷಣಾ ಸಂಬಂಧಗಳನ್ನು ಬಯಸಲು ಒಂದು ಮುಖ್ಯ ಕಾರಣ ಇದೇ. ಈಗಾಗಲೇ ನಡೆದಿರುವ ಸುಮಾರು ಐವತ್ತಕ್ಕೂ ಹೆಚ್ಚು ಜಂಟಿ ಸೇನಾ ಕವಾಯತುಗಳಲ್ಲದೆ ಎರಡು ಸಶಸ್ತ್ರ ಪಡೆಗಳ ನಡುವೆ "ಪರಸ್ಪರ ನಿರ್ವಹಣೆ"ಯನ್ನು ತರುವಲ್ಲಿ ಇದು ಮುಖ್ಯ ಹೆಜ್ಜೆಯಾಗುತ್ತದೆ. ನಮ್ಮೆರಡು ಸಶಸ್ತ್ರ ಪಡೆಗಳು ಬಳಸುವ ಉಪಕರಣಗಳು ಮತ್ತು ತಂತ್ರಜ್ಞಾನಗಳ ನಡುವೆ ಹೊಂದಾಣಿಕೆ ಇರುವಂತೆ ಮಾಡುವುದು ಜಂಟಿ ಕಾರ್ಯಾಚರಣೆಗಳಿಗೆ ಅತ್ಯಗತ್ಯವಾಗುತ್ತದೆ.

ರಕ್ಷಣಾ ಸಂಬಂಧದ ಚೌಕಟ್ಟು ಒಪ್ಪಂದದ ಅಡಿಯಲ್ಲಿ ಎರಡು ಸಶಸ್ತ್ರ ಪಡೆಗಳ ನಡುವೆ ಹೆಚ್ಚೆಚ್ಚು ಸಮನ್ವಯ ನಡೆಯುತ್ತಿದೆ ಎಂಬುದು ಕಾಣ ಬರುತ್ತಿದೆ. ಅಮೆರಿಕಾದ ಶಾಂತಸಾಗರ ಸೇನಾಧಿಪತಿ ಪ್ರತಿ ಆರು ತಿಂಗಳಿಗೊಮ್ಮೆ ಭಾರತಕ್ಕೆ ಭೇಟಿ ನೀಡುತ್ತಾರೆ. ಭಾರತ ಈ ಸೇನಾಧಿಪತ್ಯದ ವ್ಯಾಪ್ತಿಗೆ ಬರುತ್ತದೆ. ಈ ಶಾಮೀಲಿಗೆ "ರಕ್ಷಣಾ ನೀತಿ ಗುಂಪು" ಎಂಬುದರ ಮೂಲಕ ಸಾಂಸ್ಥಿಕ ಸ್ವರೂಪ ಕೊಡಲಾಗಿದೆ. ಇದು ವರ್ಷಕ್ಕೊಮ್ಮೆ ಸಭೆ ಸೇರುತ್ತದೆ. ಅದು ಹಲವು ಉಪಗುಂಪುಗಳನ್ನೂ ರಚಿಸಿದೆ.

ಈ ಚೌಕಟ್ಟು ಒಪ್ಪಂದದ ಮುರಿದಿನ ಹಂತದಲ್ಲಿ "ಸಂಪರ್ಕ ಪರಸ್ಪರ ನಿರ್ವಹಣೆ ಮತ್ತು ಭದ್ರತಾ ಜ್ಞಾಪಕ ಒಪ್ಪಂದ" (ಸಿಐಎಸ್ಎಂಒಎ) ಮತ್ತು "ಮಿಲಿಟರಿ ಸಾಗಣೆ ಬೆಂಬಲ ಒಪ್ಪಂದ" (ಎಲ್ಎಸ್ಎ) ಆಗಬೇಕಾಗಿದೆ. ಆಗ ಭಾರತವು ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಪೂರ್ಣ ಪ್ರಮಾಣದ ಮಿಲಿಟರಿ ಸಹಚರ ದೇಶವೆಂಬ ಪದವಿಗೇರುತ್ತದೆ.

ಪರಮಾಣು ವ್ಯವಹಾರ-ತಂತ್ರಜ್ಞಾನ ನಿರಾಕರಣೆ

ಭಾರತ-ಅಮೆರಿಕಾ ಪರಮಾಣು ವ್ಯವಹಾರ ಕೂಡ ಈ ಅಸಮಾನ ಮೈತ್ರಿಯ ಭಾಗ. ಪರಮಾಣು ಪ್ರಸರಣ ಸಂಧಿಗೆ ಸಹಿ ಹಾಕದ ದೇಶಗಳಿಗೆ ಇಂಧನವನ್ನು ಸಮೃದ್ಧಗೊಳಿಸುವ ಮತ್ತು ಮರು ಸಂಸ್ಕರಿಸುವ (ಇಎನ್ಆರ್) ತಂತ್ರಜ್ಞಾನಗಳ ವರ್ಗಾವಣೆ ಮಾಡಬಾರದು ಎಂಬ ಜಿ-8 ದೇಶಗಳ ನಿರ್ಣಯ ಭಾರತವನ್ನು ತಟ್ಟಲಿದೆ. ಭಾರತ ಪರಮಾಣು ಪೂರೈಕೆದಾರರ ಗುಂಪಿ(ಎನ್ಎಸ್ಜಿ)ನಿಂದ ಸ್ವಚ್ಛ ವಿನಾಯ್ತಿ ಪಡೆದಿರುವುದರಿಂದ ನಮಗೆ ಇದು ಸಂಬಂಧಪಡುವುದಿಲ್ಲ ಎಂಬ ಹಣಕಾಸು ಮಂತ್ರಿ ಪ್ರಣಬ್ ಮುಖರ್ಜಿಯವರ ಹೇಳಿಕೆ ಅರ್ಥವಿಲ್ಲದ್ದು. ಭಾರತ ಎನ್ಎಸ್ಜಿಯಿಂದ ವಿನಾಯ್ತಿ ಪಡೆಯುವಾಗ ಅದರ ಎಲ್ಲಾ ಮಾರ್ಗ ನಿರ್ದೇಶನಗಳನ್ನು ಸ್ವೀಕರಿಸುವುದಾಗಿ ಒಪ್ಪಿಕೊಂಡಿದೆ. ಎನ್ಎಸ್ಜಿ ಈಗ ಇಎನ್ಆರ್ ತಂತ್ರಜ್ಞಾನಗಳ ವರ್ಗಾವಣೆ ಕುರಿತಂತೆ ಮಾರ್ಗನಿರ್ದೇಶನಗಳನ್ನು ರೂಪಿಸುವುದರಲ್ಲಿ ತೊಡಗಿದೆ. ಜಿ-8 ನಿರ್ಣಯ ಎನ್ಎಸ್ಜಿ ಮಾರ್ಗನಿರ್ದೇಶನಗಳಾಗಿ ಪರಿವರ್ತನೆಗೊಂಡಾಗ ಇಎನ್ಆರ್ ತಂತ್ರಜ್ಞಾನಗಳನ್ನು ಪಡೆಯುವುದಕ್ಕೆ ಭಾರತಕ್ಕೆ ಬಾಗಿಲು ಮುಚ್ಚುತ್ತದೆ.

ತಾನು ಪೂರ್ಣ ನಾಗರಿಕ ಪರಮಾಣು ಸಹಕಾರ ಪಡೆದಿದ್ದೇನೆ, ಇದರಲ್ಲಿ ಪೂರ್ಣ ಇಂಧನ ಆವೃತ್ತದ ತಂತ್ರಜ್ಞಾನಗಳನ್ನು ಪಡೆಯುವ ಅಂಶವೂ ಒಳಗೊಂಡಿದೆ ಎಂಬ ಮನಮೋಹನ ಸಿಂಗ್ ಸರಕಾರದ ವಂಚನೆ ಇನ್ನೇನು ಬಯಲಾಗುತ್ತದೆ. ಈ ಬಗ್ಗೆ ಗೊತ್ತಿದ್ದವರಿಗೆ ಇದರಿಂದ ಆಶ್ಚರ್ಯವಾಗುವುದಿಲ್ಲ. ಹೈಡ್ ಆಕ್ಟ್ ನಿರ್ದಿಷ್ಟವಾಗಿ ಭಾರತಕ್ಕೆ ಇಂತಹ ತಂತ್ರಜ್ಞಾನದ ವರ್ಗಾವಣೆಯನ್ನು ನಿಷೇಧಿಸಿದೆ. 123 ಒಪ್ಪಂದ ಕೂಡಾ ಅಮೆರಿಕಾ ಇಂತಹ ತಂತ್ರಜ್ಞಾನಗಳನ್ನು ಕೊಡಲು ಒಂದು ಹೊಸ ಕಾನೂನನ್ನು ಮಾಡಬೇಕಾಗುತ್ತದೆ ಎಂದಿದೆ. ಎನ್ಎಸ್ಜಿ ತನ್ನ ಮಾರ್ಗನಿರ್ದೇಶನಗಳನ್ನು ತಯಾರಿಸಿದಾಗ ಇಂತಹ ತಂತ್ರಜ್ಞಾನವನ್ನು ಬೇರೆ

ಪುಟ 14ಕ್ಕೆ

ಸಂದರ್ಶನ

ಗ್ರಾಮಪಂಚಾಯತ್‌ಗಳ ಸಬಲತೆ ನೌಕರರ ಜೀವನ ಭದ್ರತೆ

ಆಗಸ್ಟ್ 7 ರಿಂದ 9, 2009 ರ ವರೆಗೆ ಗುಲ್ಬರ್ಗಾದಲ್ಲಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘದ ರಾಜ್ಯ ಸಮ್ಮೇಳನ ನಡೆಯುತ್ತಿದೆ. ಈ ನೌಕರರ ಉದ್ಯೋಗ ಭದ್ರತೆ, ಜೀವನ ಭದ್ರತೆಯ ಪ್ರಶ್ನೆಗಳ ಕುರಿತು ಸಮ್ಮೇಳನ ಗಂಭೀರವಾಗಿ ಚರ್ಚಿಸಲಿದೆ. ಅಧಿಕಾರ ವಿಕೇಂದ್ರೀಕರಣ - ಪಂಚಾಯತ್‌ಗಳ ಸಬಲತೆ ಎಂಬುದು ಪ್ರಜಾಪ್ರಭುತ್ವವನ್ನು ಬಲಪಡಿಸುವ ಸಾಧನ ಮಾತ್ರವಲ್ಲ ಗ್ರಾಮ ಪಂಚಾಯತ್ ನೌಕರರ ಹಿತಾಸಕ್ತಿಯೂ ಅದರಲ್ಲಿಯೇ ಇದೆ ಎನ್ನುತ್ತಾರೆ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆಯವರು.



ಮಾರುತಿ ಮಾನ್ಪಡೆ

ಜನಶಕ್ತಿ : ಕನಾಟಕ ರಾಜ್ಯದಲ್ಲಿ ಗ್ರಾಮ ಪಂಚಾಯತ್ ನೌಕರರ ಸಂಘವು ಅಧಿಕಾರ ವಿಕೇಂಧ್ರೀಕರಣದ ಬಗೆಗೆ ಬಹಳ ಒತ್ತುನೀಡಿ ಹೋರಾಟ ನಡೆಸುತ್ತಿದೆ. ಯಾಕೆ? ಏನಿದರ ಮಹತ್ವ. ಇದರಲ್ಲಿ ನೌಕರರ ಹಿತಾಸಕ್ತಿ ಏನಿದೆ?

ಮಾನ್ಪಡೆ : ಪ್ರಜಾಪ್ರಭುತ್ವ ವ್ಯವಸ್ಥೆ ಬಲಗೊಳ್ಳಬೇಕಾದರೆ ಅಧಿಕಾರ ಹೆಚ್ಚು ಹೆಚ್ಚು ಜನರ ಕೈಗೆ ತಲುಪಬೇಕಾದರೆ ಜನರಿಗೆ ತಮ್ಮ ಅಭಿವೃದ್ಧಿಯನ್ನು ತಾವೇ ನಿರ್ಧರಿಸಿಕೊಳ್ಳುವ ಅಧಿಕಾರ ವಿಕೇಂದೀಕರಣ ತುಂಬಾ ಮಹತ್ವದ ಅಂಶ. ಗ್ರಾಮ ಪಂಚಾಯ್ತಿಗಳು ಒಟ್ಟಾರೆ ಪಂಚಾಯ್ತಿಗಳ ಸಾಮರ್ಥ್ಯ ಹೆಚ್ಚಿದರೆ ಮಾತ್ರ, ಪಂಚಾಯ್ತಿಗಳು ಬಲಗೊಂಡರೆ ಮಾತ್ರ ಗ್ರಾಮ ಪಂಚಾಯತ್ ನೌಕರರ ಜೀವನ ಸ್ಥಿತಿ ಸುಧಾರಿಸಲು ಸಾಧ್ಯ. ಅದಿಲ್ಲದೇ ಹೋದಲ್ಲಿ ಗ್ರಾಮ ಪಂಚಾಯತ್ ನೌಕರರ ಸಮಸ್ಯೆಗಳನ್ನು ಸಹಿತ ಬಗೆಹರಿಸುವ ಸಾಧ್ಯತೆಗಳು ಕಡಿಮೆ.

ಜನಶಕ್ತಿ : ದೇಶದಲ್ಲಿ ಅಧಿಕಾರ ವಿಕೇಂದೀಕರಣ ಕಲ್ಪನೆ ಮತ್ತು ಅದರ ಸಾಕಾರಗೊಳಿಸುವಿಕೆ ಬೆಳೆದು ಬಂದದ್ದು ಹೇಗೆ?



ಮಾನ್ಪಡೆ : ದೇಶದಲ್ಲಿ ಅಧಿಕಾರ ವಿಕೇಂಧ್ರೀಕರಣ ಎಂಬುದು ಆರಂಭವಾದದ್ದು, ಸ್ವಾತಂತ್ರ್ಯನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಪಕ್ಷವು ಗ್ರಾಮೀಣ ಭಾರತದ ಜನರ ಮೇಲೆ ಹಿಡಿತ ಸಾಧಿಸುವ ಪ್ರಯತ್ನದ ಭಾಗವಾಗಿ. 1956ರಲ್ಲಿ ಕೇಂದ್ರ ಸರ್ಕಾರವು ಬಲವಂತ್ ಮೆಹ್ತಾ ಸಮಿತಿಯನ್ನು ನೇಮಿಸಿತು. ಈ ಸಮಿತಿಯು ಅಧಿಕಾರ ವಿಕೇಂಧ್ರೀಕರಣದ ನಿಟ್ಟಿನಲ್ಲಿ ಹೆಚ್ಚಿನ ಸಕಾರಾತ್ಮಕವಾದ ಪ್ರತಿಪಾದನೆಯನ್ನು ಮಾಡಲಿಲ್ಲ. ಆದಾಗ್ಯೂ ಅವರು ಸಮುದಾಯ ಅಭಿವೃದ್ಧಿ ಯೋಜನೆ (Community Devalopement Schem) ತಂದು ಜಿಲ್ಲಾಧಿಕಾರಿಗಳ ಮೂಲಕ ಗ್ರಾಮ ಪಂಚಾಯತ್‌ಗಳನ್ನು ರಚಿಸಿ ಪಂಚಾಯತ್‌ರಾಜ್ ವ್ಯವಸ್ಥೆ ರೂಪಿಸುವ ಪ್ರಯತ್ನ ನಡೆಯಿತು. ಅವತ್ತು ಪಂಚಾಯತ್ ಕಾರ್ಯದರ್ಶಿ ಎಂದರೆ ಗ್ರಾಮಲೆಕ್ಕಿಗರು. ಸಣ್ಣ ಪಂಚಾಯ್ತಿಗಳು, ಅಧಿಕಾರವಿಲ್ಲ. ಹಣಕಾಸಿಲ್ಲ. ಗ್ರಾಮಾಫೋನ್, ರೇಡಿಯೋ ಕೊಡೋದರ ಮೂಲಕ ಕೇಂದ್ರ ಸರ್ಕಾರದ ಅಧಿಕಾರ ವಿಸ್ತರಣೆಯ ಭಾಗವಾಗಿ ಅದನ್ನು ಬೆಳಸಿಕೊಳ್ಳಲಾಯಿತು.



ಕೆಲ ವರ್ಷಗಳಲ್ಲೇ ಹಲವಾರು ರಾಜ್ಯಗಳಲ್ಲಿ ವಿರೋಧ ಪಕ್ಷಗಳು ಅಧಿಕಾರವನ್ನು ಹಿಡಿದವು. ಅಧಿಕಾರದ ಮೇಲೆ ಕಾಂಗ್ರೆಸ್ ಪಕ್ಷದ ಹಿಡಿತ ಕಡಿಮೆಯಾಯಿತು. 1957ರಲ್ಲಿ ಕೇರಳ ರಾಜ್ಯದಲ್ಲಿ ಇ.ಎಂ.ಎಸ್. ಸರ್ಕಾರ ಅಧಿಕಾರ ಬಂತು ಮತ್ತು ಇ.ಎಂ.ಎಸ್. ಸರ್ಕಾರ ತಂದ ಅಧಿಕಾರ ವಿಕೇಂಧ್ರೀಕರಣ ರಾಷ್ಟ್ರದ ಗಮನಸೆಳೆಯಿತು. ಗ್ರಾಮೀಣ ಜನತೆಯನ್ನು ಒಳಗೊಳ್ಳುವ ಪಂಚಾಯ್ತಿಗಳ ಮೂಲಕ ಸರ್ಕಾರದ ಕೆಲಸಗಳನ್ನು ಮಾಡಿಸಬಹುದು. ಯೋಜನೆಗಳನ್ನು ಜಾರಿಗೆ ತರಬಹುದೆಂಬ ಕಣ್ಣೋಟವನ್ನು ಕೇರಳ ಸರ್ಕಾರವು ದೇಶದ ಮುಂದಿಡಲು ಸಾಧ್ಯವಾಯಿತು.

1977ರಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರವನ್ನು ಕಳೆದುಕೊಂಡು ಜನತಾ ಪಕ್ಷದ ಸರ್ಕಾರವು ಅಧಿಕಾರಕ್ಕೆ ಬಂತು. ಜನತಾ ಸರ್ಕಾರವು ಅಧಿಕಾರ ವಿಕೇಂಧ್ರೀಕರಣದ ಸಂಬಂಧವಾಗಿ ಅಶೋಕ ಮೆಹ್ತಾ ಸಮಿತಿಯನ್ನು ನೇಮಿಸಿತು. ಅದರಲ್ಲಿ ಇ.ಎಂ.ಎಸ್.ನಂಬೂದರಿಪಾಡ್ ಕೂಡ ಸದಸ್ಯರಾಗಿದ್ದರು. ಅಧಿಕಾರ ವಿಕೇಂಧ್ರೀಕರಣ ಕುರಿತು ಸಿಪಿಐ(ಎಂ) ಪಕ್ಷದ ಜನಪರ ಚಿಂತನೆಯನ್ನು ಇ.ಎಂ.ಎಸ್ ಸಮಿತಿಯಲ್ಲಿ ಪ್ರತಿಪಾದಿಸಿದರು. ಪಂಚಾಯ್ತಿಗಳಿಗೆ ಹೆಚ್ಚಿನ ಅಧಿಕಾರ ನೀಡಿ ಅವನ್ನು ಬಲಪಡಿಸುವ ಅಗತ್ಯದ ಕುರಿತು ಇ.ಎಂ.ಎಸ್. ಸಮರ್ಥವಾಗಿ ವಿಚಾರ ಮಂಡಿಸಿದ್ದರು. ವರದಿ ಹೊರ ಬಂತು. ಆದರೆ ಜನತಾ ಪಕ್ಷ ಅಧಿಕಾರ ಕಳೆದುಕೊಂಡಿದ್ದರಿಂದ ವರದಿ ಜಾರಿಗೆ ಬರಲಿಲ್ಲ. ದೇಶವ್ಯಾಪಿ ಅಧಿಕಾರ ವಿಕೇಂಧ್ರೀಕರಣದ ಚಿಂತನೆ ಮೂಲೆಗೆ ತಳ್ಳಲ್ಪಟ್ಟಿತು!

ಪಶ್ಚಿಮ ಬಂಗಾಳದಲ್ಲಿ

ಆದರೆ ಅಶೋಕ ಮೆಹ್ತಾ ಸಮಿತಿಯ ಭಾಗವಾಗಿ ಇಎಂಎಸ್ ಮಂಡಿಸಿದ ವಿಚಾರಗಳನ್ನು 1977ರಲ್ಲಿ ಪಶ್ಚಿಮ ಬಂಗಾಳದಲ್ಲಿ ಅಧಿಕಾರಕ್ಕೆ ಬಂದ ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರವು ಜಾರಿಗೆ ತಂದಿತು. ಮೂರು ಹಂತಗಳ ಪಂಚಾಯ್ತಿ ವ್ಯವಸ್ಥೆ, ವಿಶೇಷವಾಗಿ ಗ್ರಾಮ ಪಂಚಾಯ್ತಿ, ತಾಲೂಕ ಪಂಚಾಯ್ತಿಗಳನ್ನು ಸದೃಢಗೊಳಿಸಲಾಯಿತು. ಭೂಮಿ ಹಂಚುವ ಅಧಿಕಾರ, ಪಿಂಚಣಿ ನೀಡುವ ಅಧಿಕಾರ, ಪಡಿತರ ಚೀಟಿ - ರೇಷನ್ ಕಾರ್ಡ್ ನೀಡುವ ಅಧಿಕಾರ, ಮನೆ, ಜಮೀನುಗಳ ಖಾತಾ ವರ್ಗಾವಣೆ ಅಧಿಕಾರ, ಬರ ಮತ್ತು ನೆರೆ ಪರಿಹಾರ, ಗ್ರಾಮೀಣ ರಸ್ತೆ, ಕುಡಿವ ನೀರು ಯೋಜನೆ ಜಾರಿ ಅಧಿಕಾರ ಈ ಎಲ್ಲವೂ ಪಂಚಾಯ್ತಿಗಳಿಗೆ ನೀಡಲಾಯಿತು. ವಲಯ ಅಭಿವೃದ್ಧಿ ಅಧಿಕಾರಿ(ಬಿಡಿಒ) ಹುದ್ದೆಗೆ ಮ್ಯಾಜಿಸ್ಟ್ರಿಯಲ್ (ನ್ಯಾಯಾಧೀಶರ) ಸ್ಥಾನ ಕೊಟ್ಟು ಆ ಮೂಲಕ ಎಲ್ಲಾ ಅಧಿಕಾರ ಹಾಗೂ ಅಭಿವೃ... ಯೋಜನೆಯನ್ನು ಹಂಚಲಾಯಿತು. ಜಿಲ್ಲಾ ಮಟ್ಟದಲ್ಲಿ ಪಂಚಾಯ್ತಿಗೆ ಯೋಜನೆಯನ್ನು ಉಸ್ತುವಾರಿ ನೋಡುವುದು, ಯೋಜನೆ ರೂಪಿಸುವ ಅಧಿಕಾರ ನೀಡಲಾಯಿತು. ಜಿಲ್ಲಾ ಯೋಜನಾ ಮಂಡಳಿ ಅಂತಾ ಮಾಡಿ ಜಿಲ್ಲಾ ಉಸ್ತುವಾರಿ ಸಚಿವರು ಅಧ್ಯಕ್ಷರಾಗಿದ್ದು, ಜೀಲ್ಲಾಧಿಕಾರಿಗಳು ಕಾರ್ಯದರ್ಶಿಗಳು, ಮೇಯರ್, ಜಿಲ್ಲಾ ಪಂಚಾಯ್ತಿ ಅಧ್ಯಕ್ಷರು, ತಾಲ್ಲೂಕ ಪಂಚಾಯ್ತಿ ಅಧ್ಯಕ್ಷರು, ಸದಸ್ಯರುಗಳು. ಈ ಪಂಚಾಯ್ತಿ ಏನಿದೆ ಅದು ಗ್ರಾಮೀಣ ಬದುಕಿನ ಜನತೆಯ ಎಲ್ಲಾ ಆಗುಹೋಗು, ಶಿಕ್ಷಣ, ಕೃಷಿ, ಪಶು ಸಂಗೋಪನೆ, ಆರೋಗ್ಯ ಮುಂತಾವುಗಳಿಗೆ ಸಂಬಂಧಿಸಿದ ಯೋಜನೆ ಜಾರಿ ಮಾಡಲು, ಜವಾಬ್ದಾರಿ ನಿರ್ವಹಿಸಲು 1977ರ ಇಸವಿಯಲ್ಲೇ ಗ್ರಾಮ ಪಂಚಾಯ್ತಿಗೆ ಎಡರಂಗ ಸರ್ಕಾರ 9ಲಕ್ಷ ಅನುದಾನ ನೀಡಿತು. ಇದಲ್ಲದೆ ವಿವಿಧ ಇಲಾಖೆಗಳಿಂದ ಬ... ಅನುದಾನ ಬೇರೆ ಇತ್ತು. ರಾಜ್ಯ ಸರ್ಕಾರದ ಬಜೆಟ್‌ನಲ್ಲಿ ಶೇ 50 ಹಣವನ್ನು ಪಂಚಾಯ್ತಿಗಳ ಮೂಲಕ ಖರ್ಚು ಮಾಡಬೇಕೆಂಬ ನೀತಿಯನ್ನು ಜಾರಿಗೆ ತರಲಾಯಿತು. ಆದರಲ್ಲಿಯೂ ಬಜೆಟ್‌ನ ಶೇ 25 ಭಾಗವು ಗ್ರಾಮ ಪಂಚಾಯ್ತಿಗಳ ಮೂಲಕವೇ ಜಾರಿ ಮಾಡುವಂತೆ ಮಾಡಲಾಯಿತು. ಅಧಿಕಾರ ವಿಕೇಂದ್ರೀಕರಣದ ಈ ಪ್ರಯತ್ನ ರಾಷ್ಟ್ರವ್ಯಾಪಿ ಗಮನ ಸೆಳೆಯಿತು. ಮಾತ್ರವಲ್ಲ ದೇಶದ ಹೊರಗಿನವರ ಪ್ರಶಂಸೆಗಳು ವ್ಯಕ್ತವಾದವು. ಪಶ್ಚಿಮ ಬಂಗಾಳದಂತೆ ರಾಷ್ಟ್ರದಲ್ಲಿ ಎಲ್ಲಿಯೂ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಸದೃಡಗೊಳಿಸಿ, ನಿಯಮಿತವಾಗಿ ಚುನಾವಣೆ ನಡೆಸಿದ ಉದಾಹರಣೆ ಇಲ್ಲ. ಈ ಕೀರ್ತಿ ಸಿಪಿಐ(ಎಂ) ಮತ್ತು ಎಡರಂಗಕ್ಕೆ ಸಲ್ಲುತ್ತದೆ. ಈ ಕ್ರಮದಿಂದಾಗಿ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರವು ಗ್ರಾಮೀಣ ಜನತೆಯ ವ್ಯಾಪಕ ಬೆಂಬಲಗಳಿಸುವುದು ಸಾಧ್ಯವಾಯಿತು.

ಕರ್ನಾಟಕ ಆಂಧ್ರಗಳಲ್ಲಿ

1983ರಲ್ಲಿ ಕರ್ನಾಟಕ ರಾಜ್ಯದಲ್ಲಿ ರಾಜ್ಯದ ಮೊದಲ ಕಾಂಗ್ರೆಸೇತರ ಸರ್ಕಾರ ಅಂದರೆ ಜ... ಪಕ್ಷದ ಸರ್ಕಾರವು ಅಧಿಕಾರಕ್ಕೆ ಬಂತು. ಈ ಜನತಾ ಸರ್ಕಾರವು ಅಬ್ದುಲ್ ನಜೀರ್ ಸಾಬ್ ಅವರ ಅಧ್ಯಕ್ಷತೆಯಲ್ಲಿ ಪಶ್ಚಿಮ ಬಂಗಾಳದಲ್ಲಿ ಅಧಿಕಾರ



ವಿಕೇಂದ್ರೀಕರಣದ ವ್ಯವಸ್ಥೆಯ ಅಧ್ಯಯನಕ್ಕಾಗಿ ಒಂದು ತಂಡವನ್ನು ಕಳಿಸಿತು. ಆ ತಂಡ ಅಧ್ಯಯನ ಮಾಡಿ ಬಂದು ರೂಪಿಸಿದ ವಿಕೇಂದ್ರೀಕರಣ ಯೋಜನೆಯನ್ನು ಸರ್ಕಾರ ಅಂಗೀಕರಿಸಿತು. ಈ ಸಂಬಂಧ ಮಾದರಿ ಕಾನೂನನ್ನು ರಚಿಸಿ 1985ರಲ್ಲಿ ಅಂಗೀಕಾರಕ್ಕಾಗಿ ರಾಷ್ಟ್ರಪತಿಗಳಿಗೆ ಕಳಿಸಲಾಯಿತು. ರಾಷ್ಟ್ರಪತಿಗಳು ಅದನ್ನು ಅಂಗೀಕಾರ ಮಾಡಲಿಲ್ಲ. ರಾಜ್ಯವ್ಯಾಪಿ ಸಿಪಿಐ(ಎಂ), ಸಿಪಿಐ, ಜನತಾದಳಗಳು ಚಳುವಳಿ, ಧರಣಿ ಮಾಡಿ ಒತ್ತಡ ಹೇರಲಾಯಿತು. ಅದರಿಂದಾಗಿ ಆನಂತರ ಕಾಯ್ದೆಯನ್ನು ಅಂಗೀಕಾರ ಮಾಡಲಾಯಿತು.

ಇದೇ 80ರ ದಶಕದಲ್ಲೇ ಆಂಧ್ರ ಪ್ರದೇಶದಲ್ಲಿ ಕಾಂಗ್ರೇಸನ್ನು ಸೋಲಿಸಿ ಎನ್.ಟಿ.ರಾಮ್‌ರಾವ್ ನೇತೃತ್ವದಲ್ಲಿ ತೆಲಗು ದೇಶಂ ಪಕ್ಷ ಅಧಿಕಾರಕ್ಕೆ ಬಂತು. ಆ ಸರ್ಕಾರ ಸಹ ರಾಜಕೀಯ ಇಚ್ಛಾಶಕ್ತಿ ಪ್ರದರ್ಶಿಸಿ ಆಂಧ್ರ ವಿಧಾನ ಸಭೆಯಲ್ಲಿ ಅಧಿಕಾರ ವಿಕೇಂದ್ರೀಕರಣಕ್ಕೆ ಸಂಬಂಧಿಸಿದ ಕಾಯ್ದೆ ಅಂಗೀಕರಿಸಿದರು. ಅದೇ ರೀತಿ ಈಶ್ಯಾನ ಭಾರತದ ತ್ರಿಪುರ ರಾಜ್ಯದಲ್ಲಿ ಸಿಪಿಐ(ಎಂ) ನೇತೃತ್ವದಲ್ಲಿ ಎಡರಂಗ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಅಲ್ಲಿಯೂ ಅಧಿಕಾರ ವಿಕೇಂದ್ರೀಕರಣ ಜಾರಿಗೆ ತರಲಾಯಿತು.

ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರಗಳು ಹಾಗೂ ಕಾಂಗ್ರೆಸ್ಸೇತರ ವಿರೋಧ ಪಕ್ಷಗಳ ಸರ್ಕಾರಗಳು ಅಧಿಕಾರ ವಿಕೇಂದ್ರೀಕರಣಕ್ಕೆ ಮುಂದಾಗಿದ್ದರಿಂದ ಕಾಂಗ್ರೇಸ್ ಸರ್ಕಾರದ ಮೇಲೆ ಒತ್ತಡ ಆರಂಭವಾಯಿತು. ಕಾಂಗ್ರೆಸ್ ವಿರುದ್ಧವಾಗಿ ಜನಾಭಿಪ್ರಾಯ ರೂಪಗೊಳ್ಳತೊಡಗಿತು. ಅಧಿಕಾರ ವಿಕೇಂದ್ರೀಕರಣ ಮಾಡುವದು ಅನಿವಾರ್ಯವಾಗಿ ರಾಜೀವ್ ಗಾಂಧಿಯವರ ಕಾಲದಲ್ಲಿ ಸಂವಿಧಾನಕ್ಕೆ 73 ಮತ್ತು 74ನೇ ತಿದ್ದು ಪಡಿಯನ್ನು ತಂದಿತು. ಮುನಿಸಿಪಾಲಿಟಿ (ನಗರ ಸಭೆಗಳು) ಹಾಗೂ ಜಿಲ್ಲಾ ಪಂಚಾಯ್ತಿ, ಗ್ರಾಮ ಪಂಚಾಯ್ತಿಗಳಿಗೆ ಅಧಿಕಾರ ನೀಡುವ ಮತ್ತು ಚುನಾವಣೆಯನ್ನು ಕಡ್ಡಾಯಗೊಳಿಸುವ ಸಂವಿಧಾನ ತಿದ್ದುಪಡಿ ತರಲಾಯಿತು.

ಪಂಚಾಯ್ತ್‌ರಾಜ್ ವ್ಯವಸ್ಥೆಯನ್ನು ಆದರೂ ಕೂಡ ಆರ್ಥಿಕ ಸಬಲೀಕರಣ ಇಲ್ಲದೆ ಪಂಚಾಯ್ತಿ ಸಂಸ್ಥೆಯನ್ನು ಹುಟ್ಟುಹಾಕಿದರು. ಬಂಗಾಳದಲ್ಲಿ ಪಹಣಿ ದಾಖಲೆ ನಿರ್ವಹಣೆ ಅಧಿಕಾರ ಕೊಟ್ಟಂತೆ ಇಲ್ಲಿ ಕೊಡಲಿಲ್ಲ, ಕೇವಲ ರಾಜಕೀಯ ಲಾಭಕ್ಕಾಗಿ ಸಂವಿಧಾನ ತಿದ್ದುಪಡಿ ತರಲಾಯಿತು. ಇದರಿಂದ ಪಂಚಾಯತ್ ಸಂಸ್ಥೆಗೆ ಪ್ರಜಾಪ್ರಭುತ್ವ ಬಲವರ್ಧನೆಗೆ ಹೆಚ್ಚಿನ ಪ್ರಯೋಜನ ಆಗಲಿಲ್ಲ.

ಅನುದಾನ ಹೆಚ್ಚಳ ಗ್ರಾಮ ಪಂಚಾಯತ್ ನೌಕರರ ಸಂಘದ ಸಾಧನೆ

ಜನಶಕ್ತಿ : ಕರ್ನಾಟಕದಲ್ಲಿ ಗ್ರಾಮ ಪಂಚಾಯತ್ ಅನುದಾನ ಹೆಚ್ಚಿದ್ದು ಹೇಗೆ?

ಮಾನ್ಪಡೆ: 90 ರ ದಶಕದಲ್ಲಿ ಕೇರಳದ ಈ.ಕೆ.ನಾಯನಾರ್ ಸರ್ಕಾರ ಇಎಂಎಸ್‌ರವರ ಕಲ್ಪನೆಯ 'ಜನತಾ ಯೋಜನೆ' (People's Plan) ಜಾರಿಗೆ ತರಲು ಶ್ರಮಿಸಿತು. ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿ ಡಾ|| ಥಾಮಸ್ ಐಸಾಕ್ ಅವರು ಜನತಾ ಯೋಜನೆಯ ಬಗೆಗೆ ಬರೆದದ್ದನ್ನು ನಮ್ಮ ರಾಜ್ಯದಲ್ಲಿ ಗ್ರಾಮಿಣ- ಅಭಿವೃದ್ಧಿ ಕಾರ್ಯದರ್ಶಿ ರಘನಂದನ್ ಅವರಿಗೆ ಕೊಟ್ಟು ಓದಿಸಿದೆವು. ಅದೇ ರೀತಿ ಗ್ರಾಮೀಣಾಭಿವೃದ್ಧಿ ಮಂತ್ರಿ ಎಂ.ವೈ.ಘೋರ್ಪಡೆಯವರಿಗೆ ಕೊಟ್ಟೆವು ಅವರು ಅದನ್ನು ಓದಿದರು. ಈ ಮುತುವರ್ಜಿ ವಹಿಸಿದ್ದು ಕರ್ನಾಟಕ ರಾಜ್ಯ ಗ್ರಾಮ ಪಂಜಾಯತ್ ನೌಕರರ ಸಂಘ. ಈ ಮುತುವರ್ಜಿ, ಮತ್ತು ಹೋರಾಟಗಳ ಹಿನ್ನಲೆಯಲ್ಲಿ ಗ್ರಾಮ ಪಂಚಾಯತ್‌ಗಳ ಅನುದಾನ 1ಲಕ್ಷ ರೂ ಇದ್ದದ್ದು, 5 ಲಕ್ಷ ರೂ ಗಳಿಗೆ ಏರಿತು. ಇದು ನಮ್ಮ ಸಂಘಟನೆಯ ಮಧ್ಯ ಪ್ರವೇಶದಿಂದ ಆದ ಸಾಧನೆ. ಮುಂದೆ ಎಂ.ವೈ. ಘೋರ್ಪಡೆ ಅಧಿಕಾರ ಕಳೆದುಕೊಂಡರು ಆ ನಂತರ ಬಂದವರು ಈ ಬಗೆಗೆ ಗಂಭೀರವಾಗಿ ತೆಗೆದುಕೊಳ್ಳಲಿಲ್ಲ.



ಇಂದು ಗ್ರಾಮ ಪಂಚಾಯ್ತಿಗಳು, ಪಂಚಾಯತ್ ರಾಜ್ ವ್ಯವಸ್ಥೆ ಸಬಲೀಕರಣ ಆಗಬೇಕಿದ್ದರೆ ಪಂಚಾಯ್ತಿಗಳಿಗೆ ಕೇಂದ್ರ ಸರ್ಕಾರ ಒಟ್ಟು ರಾಷ್ಟ್ರೀಯ ಉತ್ಪನ್ನ(ಜಿಡಿಪಿ)ಯ ಶೇ 1ರಷ್ಟಾದರೂ ಹಣವನ್ನು ಮೀಸಲಿಡಬೇಕು. 2004-09ರ ಅವಧಿಯಲ್ಲಿ ಅಂದಿನ ಪಶ್ಚಿಮ ಬಂಗಾಳದ ಗ್ರಾಮೀಣಾಭಿವೃದ್ಧಿ ಸಚಿವ ಸೂರ್ಯಕಾಂತ ಮಿಶ್ರ ಸಂಚಾಲಕತ್ವದಲ್ಲಿ ರಾಷ್ಟ್ರಾದ್ಯಂತ 9ಕಡೆ ಅಧಿಕಾರ ವಿಕೇಂದ್ರೀಕರಣ ಪಂಚಾಯತ್ ವ್ಯವಸ್ಥೆಯ ಸಬಲೀಕರಣದವಾದಂತೆ ಎಲ್ಲೆಡೆ ಕುರಿತು ದುಂಡು ಮೇಜಿನ ಸಭೆಗಳನ್ನು ನಡೆಸಲಾಗಿದೆ. ಕೇರಳ, ಪಶ್ಚಿಮ ಬಂಗಾಳಗಳಲ್ಲಿ ಪಂಚಾಯತ್ ಸಬಲೀಕರಣ ಮಾಡಬೇಕೆಂದು ಒತ್ತಾಯಿಸಲಾಗುತ್ತಿದೆ. ಈಗ ಕೇರಳದಲ್ಲಿ ಗ್ರಾಮ ಪಂಚಾಯ್ತಿಯೊಂದಕ್ಕೆ 4 ಕೋಟಿ ಅನುದಾನ ನೀಡಲಾಗುತ್ತಿದೆ.

ಕರ್ನಾಟಕದಲ್ಲಿಯೂ ಗ್ರಾಮ ಪಂಚಾಯತ್‌ಗೆ ಹಣಕಾಸು ಬೆಂಬಲ ಹೆಚ್ಚಬೇಕಿದೆ. ಗ್ರಾಮ ಪಂಚಾಯತ್‌ಗೆ ಶಾಸನಾತ್ಮಕವಾದ ಅನುದಾನ 25ಲಕ್ಷ ಆಗಬೇಕು. ಇದು ನಮ್ಮ ಬೇಡಿಕೆ. ಇದಲ್ಲದೆ ಯೋಜನೆ/ ಯೋಜನೇತರ/ ಹಾಗೂ ವಿವಿಧ ಇಲಾಖೆಗಳ ಮೂಲಕ ಹೆಚ್ಚು ಹೆಚ್ಚು ಸಂಪನ್ಮೂಲ ಬರಬೇಕಾಗಿದೆ. ಹಾಗಾದಾಗ ಮಾತ್ರ ಗ್ರಾಮೀಣ ಜನತೆಯ ಅಭಿವೃದ್ಧಿ ಕೈಗೊಳ್ಳಲು ಹಾಗೂ ನೌಕರರಿಗೆ ಉದ್ಯೋಗ ಭದ್ರತೆ, ಜೀವನಭದ್ರತೆ ಒದಗಿಸಲು ಸಾಧ್ಯ. ದುರದೃಷ್ಟವಶಾತ್ ರಾಜ್ಯದ ಬಿಜೆಪಿ ಸರ್ಕಾರವು ಅಧಿಕಾರ ವಿಕೇಂದ್ರೀಕರಣದಿಂದ ದೂರ ಸರಿಯುತ್ತಿದೆ. ಅದು ಜೆಡಿ(ಎಸ್) ಕಾಂಗ್ರೇಸ್ ನೀಡಿದ ಅಧಿಕಾರವನ್ನು ಸಹ ಕಿತ್ತುಕೊಂಡಿದೆ.

ಪಂಚಾಯತ್‌ಗೆ ಸಿಗುತ್ತಿರುವ ಹಣದಲ್ಲಿ ವಿದ್ಯುತ್ ಬಿಲ್ ನೀಡಲು, ಸಿಬ್ಬಂದಿ ಸಂಬಳ, ಇತ್ಯಾದಿಗಳಿಗಾಗಿ ಸಾಲುತಿಲ್ಲ. ಆಶ್ರಯ ಮನೆ ಹಂಚುವ ಅಧಿಕಾರವನ್ನು ಪಂಚಾಯ್ತಿಗಳಿಂದ ಕಿತ್ತುಕೊಂಡು ಶಾಸಕರಿಗೆ ನೀಡಲು ಹೊರಟಿದೆ.

ಕರ್ನಾಟಕದಲ್ಲಿ 91 ಸಾವಿರ ಗ್ರಾಮ ಪಂಚಾಯತ್ ಸದಸ್ಯರಿದ್ದರೆ. 5628 ಗ್ರಾಮ ಪಂಚಾಯ್ತಿಗಳಿವೆ. ಈ ಪ್ರಜಾಸ್ತತ್ಮಕ ವ್ಯವಸ್ಥೆಯನ್ನು ಬಲಪಡಿಸುವ ಬದಲಿಗೆ ಬಿಜೆಪಿ ಸರ್ಕಾರ ಪಂಚಾಯತ್ ವ್ಯವಸ್ಥೆಯ ಕತ್ತು ಹಿಸುಕುತ್ತಿದೆ. ಬಿಜೆಪಿ ಸರ್ಕಾರದಲ್ಲಿ ಅಧಿಕಾರ ವಿಕೇಂದ್ರೀಕರಣಕ್ಕೆ ವಿರೋಧವಾದ ಮನೋಭಾವ ಇದೆ. ಬಿಜೆಪಿಯು ಆಳ್ವಿಕೆ ನಡೆಸಿದ, ನಡೆಸುತ್ತಿರುವ ರಾಜ್ಯಗಳಲ್ಲಿ ಪಂಚಾಯತ್ ವ್ಯವಸ್ಥೆಯನ್ನು ಸಮರ್ಪಕವಾಗಿ ತರಲಾಗಿಲ್ಲ. ಇಂತಹ ಮನೋಭಾವ ಧೋರಣೆಯ ವಿರುದ್ಧ ಹೋರಾಟ ರೂಪಿಸುವ ಅಗತ್ಯವಿದೆ. ಪಂಚಾಯತ್ ಸದಸ್ಯರು, ಉಪಾಧ್ಯಕ್ಷರು, ಅಧ್ಯಕ್ಷರು, ಗ್ರಾಮ ಪಂಚಾಯತ್ ನೌಕರರು ಎಲ್ಲಾರನ್ನು ಕೂಡಿಸಿ ಪಂಚಾಯತ್ ವ್ಯವಸ್ಥೆಯನ್ನು ಬಲಪಡಿಸಲು ಹೋರಾಟ ಆಗಬೇಕಾಗಿದೆ. ಈ ನಿಟ್ಟಿನಲ್ಲಿ ವ್ಯಾಪಕ ಜನಾಭಿಪ್ರಾಯ ರೂಪಿಸುವುದು ಅಗಬೇಕಾಗಿದ್ದು, ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘ ಈ ನಿಟ್ಟಿನಲ್ಲಿ ಶಕ್ತಿಮೀರಿ ಶ್ರಮೀಸಲಿದೆ. □

ಪಂಚಾಯತುಗಳಿಗೆ ಹೆಚ್ಚಿನ ಅನುದಾನ ಅಗತ್ಯ

ಪಂಚಾಯತಿಗೆ ಹಣಕಾಸು ಹೆಚ್ಚಿಸುವ ಅಗತ್ಯವಿದೆ. ಗ್ರಾಮ ಪಂಚಾಯತಿಗಳು ದಿನನಿತ್ಯ ಆಡಳಿತ ನಡೆಸಲು, ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು, ಪಂಚಾಯತಿ ಸಿಬ್ಬಂದಿಗೆ ಸಂಬಳ ಕೊಡಲು ಗ್ರಾಮ ಪಂಚಾಯತಿಗಳು ಪರದಾಡುವಂತಾಗಿದೆ. ಸಿಬ್ಬಂದಿಗಳಿಗೆ 6 ತಿಂಗಳು, ವರ್ಷಗಳ ಕಾಲ ಸಂಬಳವನ್ನೇ ನೀಡುತ್ತಿಲ್ಲ. ಪ್ರತಿ ತಿಂಗಳು ಸಂಬಳ ಪಡೆಯುವುದು ಮರೀಚಿಕೆಯಾಗಿದೆ. ಹಲವಾರು ಕಡೆಗೆ ವಸೂಲಿ ಮಾಡಿದ ಹಣವನ್ನು, ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ದುರ್ಬಳಕೆಯಾಗುತ್ತಿರುವುದರಿಂದ ಸಿಬ್ಬಂದಿಗೆ ಸಂಬಳ ಸಿಗುತ್ತಿಲ್ಲ. ಸಂಬಳ ಸಿಗದಿದ್ದರೂ ಕೂಡ ಪಂಚಾಯತಿ ಸಿಬ್ಬಂದಿ ಕೆಲಸ ನಿಲ್ಲಿಸದೆ ದುಡಿಯುತ್ತಿದ್ದಾರೆ. ಈ ಕಷ್ಟ ನಿವಾರಣೆಯಾಗಲು ಪಂಚಾಯತಿಗಳಿಗೆ ಅನುಧಾನ ಹೆಚ್ಚಿಸುವುದು ಅಗತ್ಯ. ನಮ್ಮ ಸಂಘವು ಅನುದಾನ 25 ಲಕ್ಷ ರೂ.ಗೆ ಹೆಚ್ಚಿಸಲು ಒತ್ತಾಯಿಸಿದೆ. ಸದಸ್ಯರ ಗೌರವಧನ ಹೆಚ್ಚು ಮಾಡುವ ಬಗ್ಗೆ ಯೋಚಿಸುವ ಸರ್ಕಾರ ಇತ್ತೀಚೆಗೆ ಶಾಸನ ಸಭೆಯಲ್ಲಿ ಶಾಸಕರ ವೇತನ, ಭತ್ಯೆಗಳನ್ನು ಹೆಚ್ಚಿಗೆ ಮಾಡಲು ನಿರ್ಧರಿಸಲಾಗಿದೆ. ತಿಂಗಳಿಗೆ 22,000 ರೂ. ರಿಂದ 44,000 ಕ್ಕೆ ಹೆಚ್ಚಿಸಿದೆ. ಆದರೆ ಪಂಚಾಯತಿ ನೌಕರರ ಸಂಬಳ ಹೆಚ್ಚು ಮಾಡುವದಾಗಲಿ, ಅನುದಾನ ಹೆಚ್ಚು ಮಾಡುವುದಕ್ಕಾಗಲಿ ಸರ್ಕಾರ ಮುಂದಾಗಿಲ್ಲ.

ಸರ್ಕಾರದ ಮೇಲೆ ಒತ್ತಾಯ ತರಲು ಭಾಗಲಕೋಟೆ, ಗುಲ್ಬರ್ಗ ಮತ್ತಿತರ ಕಡೆಗಳಲ್ಲಿ ಚುನಾಯಿತ ಗ್ರಾಮ ಪಂಚಾಯತಿ ಪ್ರತಿನಿಧಿಗಳ ಹಾಗೂ ನೌಕರರ ಜಂಟಿ ಸಮಾವೇಶ ನಡೆಸಿ ಜನಾಭಿಪ್ರಾಯ ರೂಪಿಸಿದುದರ ಫಲವಾಗಿ ರಾಜ್ಯಪಾಲರ ಆಡಳಿತವಿದ್ದಾಗ 5 ಲಕ್ಷದಿಂದ 6 ಲಕ್ಷಕ್ಕೆ ಹೆಚ್ಚು ಮಾಡಲಾಯಿತು.

ರಾಜ್ಯ ಸರ್ಕಾರ ನೇಮಿಸಿದ 3ನೇ ಹಣಕಾಸು ಆಯೋಗದ ಮುಂದೆ ಸಂಘವು ಮನವಿ ಸಲ್ಲಿಸಿ ನೌಕರರ ಕಷ್ಟಗಳನ್ನು ವಿವರಿಸಲಾಯಿತು. ಸನ್ಮಾನ್ಯ 3ನೇ ಹಣಕಾಸು ಆಯೋಗದ ಅಧ್ಯಕ್ಷರು ಮತ್ತು ಸದಸ್ಯರು ಗ್ರಾಮ ಪಂಚಾಯತ್ ನೌಕರರಿಗೆ ವೇತನಕ್ಕಾಗಿ ಪ್ರತ್ಯೇಕ ನಿಧಿಗಾಗಿ ಶಿಫಾರಸು ಮಾಡಿದ್ದಾರೆ. ಅಲ್ಲದೆ ಈಗಿರುವ ಅನುದಾನವನ್ನು 4 ಸಾವಿರ ಜನಸಂಖ್ಯೆ ಕಡಿಮೆ ಇರುವ ಪಂಚಾಯತಿಗೆ 9 ಲಕ್ಷ ರೂ, 4 ಸಾವಿರದಿಂದ 8 ಸಾವಿರ ಜನಸಂಖ್ಯೆ ಇರುವ ಪಂಚಾಯತಿಗೆ ರೂ.12 ಲಕ್ಷ, 8 ಸಾವಿರಕ್ಕಿಂತ ಹೆಚ್ಚು ಜನಸಂಖ್ಯೆ ಇರುವ ಪಂಚಾಯಿತಿಗೆ ರೂ.15 ಲಕ್ಷ ಶಿಫಾರಸು ಮಾಡಲಾಗಿದೆ. ಸಂಘದ ಪ್ರಯತ್ನದ ಫಲವಾಗಿ

ಈ ಶಿಫಾರಸ್ಸುಗಳು ಬಂದಿವೆ. ಹಣಕಾಸು ಆಯೋಗ ವರದಿ ಸಲ್ಲಿಸಿ 6 ತಿಂಗಳಾಗಿದೆ. ವರದಿ ಜಾರಿಯಾಗಿಲ್ಲ. ಜಾರಿಗಾಗಿ ನಮ್ಮ ಪ್ರಯತ್ನ ಅಗತ್ಯವಿದೆ.

ಕೇಂದ್ರ ಸರ್ಕಾರದ 13ನೇ ಹಣಕಾಸು ಆಯೋಗ ಬೆಂಗಳೂರಿಗೆ ಭೇಟಿ ನೀಡಿದಾಗ ಗ್ರಾಮ ಪಂಚಾಯಿತ್‌ಗಳಿಗೆ ಅಗತ್ಯಕ್ಕೆ ತಕ್ಕಂತೆ ಜಿ.ಡಿ.ಪಿ.ಯ ಶೇ.1 ಹಣವನ್ನು ನೀಡಲು ಮನವಿ ಸಲ್ಲಿಸಲಾಗಿದೆ.

ಪುಟ 14 ಕ್ಕೆ

ಗ್ರಾಮ ಪಂಚಾಯತ್ ನೌಕರರ ಚಳುವಳಿಗೆ 21 ವರ್ಷಗಳ ಇತಿಹಾಸವಿದೆ. ಕಳೆದ 10 ವರ್ಷಗಳ ಅವಧಿಯ ಪ್ರಮುಖ ಘಟನೆಗಳನ್ನು ಇಲ್ಲಿ ವಿವರಿಸಲಾಗಿದೆ. ಮುಂದಿನ ಹೋರಾಟಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ನಡೆಸಲು ಇದು ಅನುಕೂಲವಾಗಲಿದೆ.

ಗ್ರಾಮ ಪಂಚಾಯತ್ ನೌಕರರ ಹೋರಾಟದ ಇತಿಹಾಸ

ದಿನಾಂಕ 04.01.199 ರಂದು ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ 3 ನೇ ಸಮ್ಮೇಳನ ನಡೆದಿತ್ತು. 10.01.1994 ರಂದು ರಾಜ್ಯ ಸರಕಾರವು ಪ್ರಕಟಿಸಿದ್ದ ಅರೆಬರೆ ವೇತನ ಶ್ರೇಣಿಯ ನಂತರ ಇನ್ನೊಂದು ವೇತನ ಶ್ರೇಣಿಯ ಜಾರಿಗಾಗಿ ಈ ಅವಧಿ (1997 ರಿಂದ 1999) ಯಲ್ಲಿ ಅನೇಕ ಹೋರಾಟಗಳನ್ನು ನಡೆಸಲಾಗಿತ್ತು. ರೂ.500; ರೂ.600, ರೂ.900 ಗರಿಷ್ಠ ವೇತನ ಪಾವತಿ ಮಾಡಬೇಕೆಂದು 10.01.1994 ರ ಆದೇಶದಲ್ಲಿ ಸ್ಪಷ್ಟಪಡಿಸಿದ್ದ ರಿಂದ ಹೆಚ್ಚಿನಂಶ ಪಂಚಾಯತ್ ನೌಕರರ ವೇತನ ಹೆಚ್ಚಳ ರೂ.50 ರೂ. 100 ಗಳಿಗೆ ಮಾತ್ರ ಸೀಮಿತಗೊಂಡಿತ್ತು.

04.01.1999 ರ ಸಮ್ಮೇಳನದ ದಿನ ವೇತನ ಪರಿಷ್ಕರಣೆ ಆದೇಶ ಪ್ರಕಟಿಸುವುದಾಗಿ ಅಂದಿನ ಆರ್.ಡಿ.ಪಿ.ಆರ್ ಸಚಿವ ಎಂ.ಪಿ. ಪ್ರಕಾಶ್ ಭರವಸೆ ನೀಡಿದ್ದರು. ಈ ಭರವಸೆ ಈಡೇರಲಿಲ್ಲ ಮಾತ್ರವಲ್ಲ ಸಚಿವರು ಸಮ್ಮೇಳನಕ್ಕೂ ಹಾಜರಾಗಲಿಲ್ಲ.

ಮುಂದೆ 24.06.1999 ರಂದು ಹೊಸ ವೇತನ ಶ್ರೇಣಿ ಜಾರಿಯಾಯಿತು. ಮೊಟ್ಟ ಮೊದಲ ಬಾರಿಗೆ



ಕನಿಷ್ಠ, ಗರಿಷ್ಠ ಎಂಬ ಪರಿಕಲ್ಪನೆ ಉಂಟಾಯಿತು. ಕನಿಷ್ಠ ರೂ.700, ರೂ.800, ರೂ.1000 ಎಂದೂ ಗರಿಷ್ಠ ರೂ.800, ರೂ.1000, ರೂ.1200 ಈ ರೀತಿ ವೇತನ ಶ್ರೇಣಿಯ ಆದೇಶ ಪ್ರಕಟವಾಯಿತು. ಸೇವಾ ಜೇಷ್ಠತೆ ಪರಿಗಣಿಸಬೇಕೆಂದು ಹಿಂದೆ ಸಂಬಳ ಹೆಚ್ಚಿದ್ದರೆ ಅದನ್ನೇ ಮುಂದುವರೆಸಬೇಕು - ಈ ಅಂಶಗಳೂ ಆದೇಶದಲ್ಲಿದ್ದವು.

24.06.1999 ರ ಆದೇಶ ಜಾರಿಗೆ ಸಲುವಾಗಿ ಪ್ರಯತ್ನಿಸಲು ರಾಜ್ಯಸಮಿತಿಯ ಪರವಾಗಿ ಅನೇಕ ಸುತ್ತೋಲೆ ಕಳಿಸಲಾಯಿತು. ಅನೇಕ ಕಡೆ ಪ್ರತಿಭಟನಾ ಕಾರ್ಯಕ್ರಮಗಳೂ ನಡೆದವು. ನೌಕರರಲ್ಲಿ ಪಡೆದುಕೊಳ್ಳುವ (ಬಾರ್ಗೇನಿಂಗ್) ಶಕ್ತಿ ಹಾಗೂ ಸಂಘಟನೆ ಕೊರತೆಯಿಂದ ಹೊಸ ವೇತನ ಶ್ರೇಣಿ ರಾಜ್ಯಾದ್ಯಂತ ಜಾರಿ ಆಗಲೇ ಇಲ್ಲ. ಕೇವಲ ಶೇ.40 ಮಾತ್ರ ನೌಕರರು ಹೊಸ ವೇತನ ಶ್ರೇಣಿ ಪಡೆಯಲು ಸಾಧ್ಯವಾಯಿತು.



ಹೊಸ ವೇತನ ಶ್ರೇಣಿ ಪ್ರಕಟಣೆಗೆ ಆಗ್ರಹಿಸಿ ಜೂನ್ 11, 12 ಮತ್ತು 13 ರಂದು ಬೆಂಗಳೂರು ಚಲೋ ಕಾರ್ಯಕ್ರಮ ನಡೆಯಿತು. ಸುಮಾರು 600 ನೌಕರರು ಪಾಲ್ಗೊಂಡಿದ್ದರು.

ಈ ಕಾರ್ಯಕ್ರಮದಿಂದಾಗಿ ಇಲಾಖೆಯೊಟ್ಟಿಗೆ ಮಾತುಕತೆ ನಡೆಯಲು ಒತ್ತಡ ನೀಡಲು ಸಾಧ್ಯವಾಯಿತು. ಕರ ವಸೂಲಿ ಕೆಲಸ ಹಾಗೂ ಕುಡಿಯುವ ನೀರು ಸರಬರಾಜು ಕೆಲಸ ಕಾಂಟ್ರಾಕ್ಟ್ ಕೊಡಲು ಹಾತೊರೆಯುತ್ತಿದ್ದ ಸರಕಾರಕ್ಕೆ ಬಿಸಿ ಮುಟ್ಟಿಸಿ ಕಾಂಟ್ರಾಕ್ಟ್ ನೀಡವುದನ್ನು ತಪ್ಪಿಸಲು ಈ ಹೋರಾಟದಿಂದ ಸಾಧ್ಯವಾಯಿತು.

ಕರಾವಳಿ ಜಿಲ್ಲೆಗಳಾದ ದಕ್ಷಿಣಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಸಂಘಟನೆ ಆರಂಭವಾಯಿತು.

18.09.2001 ರಂದು ಆಗಿನ ಆರ್.ಡಿ.ಪಿ.ಆರ್ ಪ್ರಧಾನ ಕಾರ್ಯದರ್ಶಿ ಶ್ರೀ ಗಂಗಾಧರಪ್ಪ ಅವರು ಎಲ್ಲ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಖಾಲಿ ಇರುವ ಕಾರ್ಯದರ್ಶಿ ಹುದ್ದೆಗಳಿಗೆ ಅರ್ಹ ದಿನಗೂಲಿ ನೌಕರರನ್ನು ಕೂಡಲೇ ನೇಮಿಸಿಕೊಳ್ಳುವಂತೆ ಸೂಚಿಸಿ ಪತ್ರ ಬರೆದಿದ್ದರು. ನಾವು ಕೂಡಲೇ ಮಧ್ಯಪ್ರವೇಶಿಸಿ ಪಂಚಾಯತ್ ನೌಕರರಿಗೆ ಶೇ.30 ರಷ್ಟು ಹುದ್ದೆ ಮೀಸಲಿರಿಸಿದ್ದನ್ನು ವಿವರಣೆ ನೀಡಿ ಶೇ.30 ರಷ್ಟು ಸ್ಥಾನಗಳಿಗೆ ನೇಮಕಾತಿ ಬೇಡ ಎಂದು ಶ್ರೀ ಗಂಗಾಧರಪ್ಪ ಅವರಿಂದ ಪತ್ರ ಬರೆಸಲು ಸಾಧ್ಯವಾಯಿತು.



ಇದೇ ಅವಧಿ (07.11.2001) ಯಲ್ಲೇ ಗ್ರಾಚ್ಯುಟಿಗೆ ಸಂಬಂಧಿಸಿ ರಾಜ್ಯಮಟ್ಟದ ಸುತ್ತೋಲೆಯನ್ನು ಹೊರಡಿಸಲು ಸಾಧ್ಯವಾಯಿತು.

ಈ ಅವಧಿಯಲ್ಲಿ ನಾವು ಮೂವರು ಹಿರಿಯ ಮುಖಂಡರನ್ನು ಕಳೆದುಕೊಂಡೆವು. ಸಂಘ ಆರಂಭವಾದಾಗಿನಿಂದ ನೇತೃತ್ವ ನೀಡಿದ್ದ ಹಿರಿಯ ಮುಖಂಡ, ಸ್ವಾತಂತ್ರ್ಯಯೋಧ ಎಸ್.ಕೆ.ಉಪಾಧ್ಯಾಯ, ಅವಿಭಜಿತ ಧಾರವಾಡ ಜಿಲ್ಲೆಯಲ್ಲಿ ಸಂಘಟನೆಯ ಉಸ್ತುವಾರಿ ಮಾಡುತ್ತಿದ್ದ ಹಾಗೂ ರಾಜ್ಯಸಮಿತಿಯ ಒಬ್ಬ ಪ್ರಮುಖ ಮುಂದಾಳು ಸಿ.ಆರ್.ಭಟ್ ಮತ್ತು ಸಂಘಟನೆಗೆ ಯಾವಾಗಲೂ ಮಾರ್ಗದರ್ಶನ ನೀಡುತ್ತಿದ್ದ ಹಿರಿಯ ಕಾರ್ಮಿಕ ಮುಖಂಡ ಸೂರ್ಯ ನಾರಾಯಣರಾವ್ ಅವರು ನಿಧನರಾದರು. ಹೀಗಾಗಿ ಹಿರಿಯರ ಮಾರ್ಗದರ್ಶನ ಇಲ್ಲದಂತಾಯಿತು.

ಹೊಸ ವೇತನ ಶ್ರೇಣಿ ಆದೇಶ ಪ್ರಕಟಣೆಗೆ ಒತ್ತಾಯ ತರಲು 05.08.2002 ರ ಫೆಬ್ರುವರಿಯಲ್ಲಿ ಜಿಲ್ಲಾಮಟ್ಟದಲ್ಲಿ ಬೃಹತ್ ಮತ ಪ್ರದರ್ಶನ ಕಾರ್ಯಕ್ರಮ ನಡೆದವು. ಇದುವರೆಗೆ ಜಿಲ್ಲಾಮಟ್ಟದ ಕೇಡರ್ ಎಂದು ಪರಿಗಣಿತವಾಗಿದ್ದ ಪಂಚಾಯತ್ ಕಾರ್ಯದರ್ಶಿ (II) ಹುದ್ದೆಯುನ್ನು ಮೊದಲಿನಂತೆ ರಾಜ್ಯಮಟ್ಟದ ಕೇಡರ್ ಆಡಿ ರಾಜ್ಯಮಟ್ಟದಲ್ಲಿ ಜೇಷ್ಠತಾಪಟ್ಟಿ ತಯಾರಿಸಿ ನೇಮಕಾತಿ ಮಾಡುವುದಾಗಿ ಊಹಾಪೋಹ ನಡೆಯಿತು. ತಲಾ ನೌಕರರಿಂದ ರೂ.30 ಸಾವಿರ ಸಂಗ್ರಹಿಸುವ ಭಾರೀ ಕುತಂತ್ರವೇ ನಡೆಯಿತು. ಇಲಾಖೆಯ ಹಿರಿಯ ಅಧಿಕಾರಿಗಳೇ ಭಾರೀ ಭ್ರಷ್ಟಾಚಾರದಲ್ಲಿ ಪಾಲ್ಗೊಂಡರು. ಬಡಪಾಯಿ ನೌಕರರಿಂದ ಲಕ್ಷಾಂತರ ರೂಪಾಯಿ ಸುಲಿಯಲಾಯಿತು.

ರಾಜ್ಯಮಟ್ಟದ್ದೋ ಅಥವಾ ಜಿಲ್ಲಾ ಮಟ್ಟದ್ದೋ ನೇಮಕಾತಿ ಆಗಲಿ ಆದರೆ ಭ್ರಷ್ಟಾಚಾರ ನಿಲ್ಲಲೇಬೇಕು ಎಂದು ಸಂಘ ಬಲವಾಗಿ ಪ್ರತಿಪಾದಿಸಿತು. 17.01.2003 ರಂದು 10 ವರ್ಷ ಸೇವೆ ಸಲ್ಲಿಸಿ ಜೇಷ್ಠತಾ ಪಟ್ಟಿಯಲ್ಲಿರುವ ನೌಕರರ ಸಭೆಯುನ್ನು ಬೆಂಗಳೂರಿನಲ್ಲಿ ಕರೆಯಲಾಯಿತು. ಗ್ರಾಮ ಪಂಚಾಯತ್‌ಗಳ... ಬಲಿಷ್ಠಗೊಳಿಸುವ ಹಿನ್ನೆಲೆಯಲ್ಲಿ ವಿಕೇ... ಪಂಚಾಯತುಗಳು ಕಾರ್ಯರೂಪಕ್ಕೆ ಬರಲಿದ್ದು ಒಂದೇ ಸಲ ನೇಮಕಾತಿಗಾಗಿ ಪ್ರಯತ್ನಿಸುವ ಬಗ್ಗೆ ತೀರ್ಮಾನಕ್ಕೆ ಬರಲಾಯಿತು.

ವೇತನ ಪರಿಷ್ಕರಣೆ ಮಾತುಕತೆ ಸಮಯದಲ್ಲಿ ಸಂಬಳ ಹೆಚ್ಚಿಸುತ್ತೇವೆ, ಆದರೆ ಕಮಿಷನ್ ಏಜೆಂಟನೆಂದು ಪರಿಗಣಿಸುವ ಇಲಾಖೆ ಕಾರ್ಯದರ್ಶಿಯವರ ವಿಚಾರಕ್ಕೆ ತೀವ್ರ ಪ್ರತಿಭಟನೆ ಸಲ್ಲಿಸಲಾಯಿತು.

ವೇತನ ಪರಿಷ್ಕರಣೆ ಮಾಡುವಂತೆ ಒತ್ತಾಯಿಸಿ ಜೂನ್ 2 (2003) ರಂದು ಬೆಂಗಳೂರು ಚಲೋ ಕಾರ್ಯಕ್ರಮ ನಡೆಸಲಾಯಿತು. ಸುಮಾರು 5000 ನೌಕರರು ಪಾಲ್ಗೊಂಡಿದ್ದರು.

ಈ ಹೋರಾಟದಿಂ... 20.06.2003 ರಂದು ಹೊಸ ವೇತನ ಶ್ರೇಣಿ ಜಾರಿಯಾಯಿತು. ಕನಿಷ್ಠ ರೂ.800, ರೂ.1000, ರೂ.1200 ಹಾಗೂ ಗರಿಷ್ಠ ರೂ.1000, ರೂ.1200, ರೂ.1500 ವೇತನ ನಿಗದಿಯಾಯಿತು. ಎಲ್ಲಾ ಜಿಲ್ಲೆಗಳಿಗೂ ಭೇಟಿ ನೀಡಿ ನೌಕರರ ಸಭೆ ನಡೆಸಲಾಯಿತು.

ವೇತನ ಪರಿಷ್ಕರಣೆ ಆದೇಶದ ಜೊತೆಗೆ ಅನುದಾನದಲ್ಲಿ ಸಂಬಳ ನೀಡಬಾರದೆಂದು ಅರ್ಥ... ಬರುವ ಸುತ್ತೋಲೆಯನ್ನು ಇಲಾಖೆ ಹೊರಡಿಸಿತು. ಒಂದೆ ಕಡೆ ವೇತನ ಹೆಚ್ಚಳ ಮಾಡಿದ್ದೇವೆಂದು ಹೇಳಿಕೊಳ್ಳುವುದು ಇನ್ನೊಂದು ಕಡೆ ಸಂಬಳ ದೊರೆಯದಂತೆ ನೋಡಿಕೊಳ್ಳುವುದು ಇದು ಸರಕಾರದ ಕುತಂತ್ರ. ಸ್ವೀಪರುಗಳಿಗೆ ಹಾಗೂ



ವಾಟರ್‌ಮನ್‌ಗಳಿಗೆ ಅನುದಾನದಲ್ಲೇ ಸಂಬಳ ಪಾವತಿ ಮಾಡಬೇಕೆನ್ನುವ ಹಿಂದಿನ ಸುತ್ತೋಲೆಗಳನ್ನು ಇಲಾಖೆಯ ಗಮನಕ್ಕೆ ತಂದು ಸ್ಪಷ್ಟೀಕರಣ ನೀಡಲು ವಿನಂತಿಸಲಾಗಿತ್ತು. ಮತ್ತೆ ಅಡ್ಡಗೋಡೆ ಮೇಲೆ ದೀಪವಿಟ್ಟಂತೆ ಸ್ಪಷ್ಟೀಕರಣ ನೀಡಿದರು.

2003 ರ ವೇತನ ಪರಿಷ್ಕರಣೆ ಆದೇಶದ ಪ್ರಮುಖ ಅಂಶವೆಂದರೆ ಪಂಚಾಯತ್ ನೌಕರರು ಅರೆಕಾಲಿಕ... ಸರಕಾರಕ್ಕೆ ಸಂಬಂಧವಿಲ್ಲ. ವೇತನದ ಬ... ಕಮಿಷನ್ ಇವೆಲ್ಲ ವಾದಗಳನ್ನು ಹೊಡೆದುಹಾಕಿದ್ದು...

ಪುಟ 12



ಬೋಡೀಡೇ ಬೋಡು ಮಂಗಳೂರು ರೈಲ್, ಾಯಿಡ್ ಬುಡ್ನ, ಯಾವು ರೈಲ್, ಪಟ್ಟಡ್ ರಡ್ ಬೆಂಗಳೂರ್ ರೈಲ್, ಕುಡ್ಡದ ಜನಕ್ಲೆಗ್ ೋಸ ಮಲ್ತಿನ ಮುನಿಯಪ್ಪಗ್ ಧಿಕ್ಕಾರ, ಮಮತಾ ್ಯಾನರ್ಜಿಗ್ ಧಿಕ್ಕಾರ' (ಬೇಕೇ ಬೇಕು ಬೆಂಗಳೂರು ಲು, ಬಾಯಲ್ಲಿ ಬಿಟ್ಟದ್ದು ಸಾಕು ರೈಲು ಹಳಿಯ ೀಲೆ ಬರಲಿ ರೈಲು, ಕುಡ್ಲದ ಜನರಿಗೆ ಮೋಸ ಾಡಿದ ಮುನಿಯಪ್ಪರಿಗೆ ಧಿಕ್ಕಾರ, ಮಮತಾ ಾರ್ಜಿಗೆ ಧಿಕ್ಕಾರ) ಹೀಗೆ ಅನೇಕ ಸಮಸ್ಯೆಗಳಿಂದ ದಿರುವ ಮಂಗಳೂರಿನ ಜನತೆ ಜಾತಿ-ಧರ್ಮ ಕ್ಷಗಳ ಬೇಧ ಭಾವವಿಲ್ಲದೆ ಒಕ್ಕೊರಲಿನಿಂದ ೋಷಣೆಗಳನ್ನು ಕೂಗಾತ್ತಾ ನಗರದಲ್ಲಿ ಸಂಚರಿಸಿ ುಂಗಳೂರು ಸೆಂಟ್ರಲ್ ರೈಲ್ವೇ ನಿಲ್ದಾಣದ ಎದುರು ಮಾಯಿಸಿದರು.

ಇತ್ತೀಚಿಗೆ ಸಂಸತ್ತಿನಲ್ಲಿ ಮಂಡನೆಯಾದ ರೈಲ್ವೆ ಜೆಟ್‌ನಲ್ಲಿ ಮಂಗಳೂರು-ಬೆಂಗಳೂರು ರೈಲನ್ನು ಣ್ಣೂರಿಗೆ ವಿಸ್ತರಿಸುವ ಪ್ರಸ್ತಾಪದ ವಿರುದ್ಧ 25.07.2009ರಂದು ಈ ಪ್ರತಿಭಟನೆಯನ್ನು ಮ್ಮಿಕೊಳ್ಳಲಾಗಿತ್ತು. ಪ್ರತಿಭಟನೆಯಲ್ಲಿ ಡಿವೈಎಫ್ಐ-ಎಸ್ಎಫ್ಐ ಸೇರಿದಂತೆ ಹತ್ತು ಹಲವು ಸಂಘಟನೆಗಳು ಭಾಗವಹಿಸಿದ್ದವು.

ರೈಲು ಯಾನ ವಿಳಂಬಿಸುವಲ್ಲಿ ಬಸ್ ಮಾಲೀಕರ ಲಾಭಿ

1992ರಿಂದ ಸುಮಾರು 15 ವರ್ಷಗಳ ು ಮಂಗಳೂರು-ಬೆಂಗಳೂರು ರೈಲು ವಿಳಂಬಿಸುವಲ್ಲಿ ದ.ಕ. ಜಿಲ್ಲೆಯ ಬಸ್ ಮಾಲೀಕರ ಲಾಭಿಯು ಕೂಡಾ ಕಾರಣವಾಗಿದೆ. ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ಹಾಗೂ ಆರ್‌ಟಿಓ ಅಧಿಕಾರಿಗಳನ್ನು ನಿಯಂತ್ರಿಸುವಲ್ಲಿ ಪ್ರಭಾವಶಾಲಿಯಾದ ಬಸ್ ಮಾಲೀಕರು ರಾಜ್ಯ ಸರ್ಕಾರದ ಮೇಲೆಯೂ ಹಿಡಿತ ಸಾಧಿಸಿದಾರೆ. ಪ್ರತಿದಿನ ರಾತ್ರಿ ಹೊತ್ತು ಮಂಗಳೂರಿನಿಂದ ಬೆಂಗಳೂರಿಗೆ ಸುಮಾರು 500ರಷ್ಟು ಖಾಸಗಿ ಬಸ್‌ಗಳು ಓಡಾಡುತ್ತಿದ್ದು ರೈಲು ಪ್ರಾರಂಭಗೊಂಡರೆ ತಮ್ಮ ಲಾಭಕ್ಕೆ ಪೆಟ್ಟಾಗಬಹುದೆಂದು ಬಸ್ ಮಾಲೀಕರ ಲೆಕ್ಕಾಚಾರ. ಅಂದು ಬಿಜೆಪಿಯ ಎಂ.ಪಿ.ಗಳಾದ ಧನಂಜಯಕುಮಾರ್ ಹಾಗೂ ಸದಾನಂದ ಗೌಡರು ಬಸ್ ಮಾಲೀಕರ ಹಿತಾಸಕ್ತಿಗಾಗಿ ರೈಲು ಹಳಿಯ ಮೇಲೆ ಮಲಗಿದ್ದರೆ ಹೊರತು ಜನತೆಗಾಗಿ ಅಲ್ಲ. ಜನರಿಗೆ ಕೇವಲ ಪೇಪರ್ ಹುಲಿಗಳಾದರು.

ದಕ್ಷಿಣ ಕನ್ನಡದ ಜನತೆ ದೀರ್ಘಕಾಲದ ಹೋರಾಟದಿಂದ ಪಡೆದ ರೈಲ್ವೆ ಸೌಲಭ್ಯವನ್ನು ಕಳೆದುಕೊಳ್ಳುವಂತಹ ತೀರ್ಮಾನವನ್ನು ಕೇಂದ್ರದ ರೈಲ್ವೆ ಇಲಾಖೆ ಕೈಗೊಂಡಿದೆ. ಬಿಜೆಪಿ ಸಂಸದರು, ಮುಖಂಡರು ಪ್ರಾಮಾಣಿಕವಾಗಿ ಈ ಬಗ್ಗೆ ದನಿ ಎತ್ತುತ್ತಿಲ್ಲ, ಜನರೇ ಸೌಲಭ್ಯ ಉಳಿಸಿಕೊಳ್ಳಲು ಬೀದಿಗೆ ಇಳಿದಿದ್ದಾರೆ.

ದಕ್ಷಿಣ ಕನ್ನಡ

ರೈಲ್ವೆ ಸೌಲಭ್ಯದ ಉಳಿವಿಗಾಗಿ ಹೋರಾಟ

ಸಿಂಚನ
ಮಂಗಳೂರು

ಹೋರಾಟದ ಹಿನ್ನಲೆ:

ಕರ್ನಾಟಕ ರಾಜ್ಯದಲ್ಲೇ ಮಂಗಳೂರು ಪ್ರಮುಖ ವಾಣಿಜ್ಯ ಕೇಂದ್ರ. ಸಮುದ್ರ ದಡದಲ್ಲಿರುವ ಮಂಗಳೂರು ಬಂದರು ಪ್ರದೇಶವಾಗಿದ್ದು, ಪರವೂರಿನ ಜನತೆಯನ್ನು ಆಕರ್ಷಿಸುವ ಪ್ರವಾಸಿಧಾಮವೂ ಆಗಿದೆ. ಇಲ್ಲಿನ ವ್ಯಾಪಾರ, ವಹಿವಾಟು, ಮೀನುಗಾರಿಕೆ, ಬೀಡಿ, ಹಂಚು, ಗೇರುಬೀಜ ಮುಂತಾದ ಪಾರಂಪರಿಕ ಕೈಗಾರಿಕೆಗಳು ತನ್ನವೇ ಆದ ಛಾಪನ್ನು ಮೂಡಿಸಿವೆ. ಇಂತಹ ಪ್ರಾಮುಖ್ಯತೆಯನ್ನು ಪಡೆದ ಮಂಗಳೂರಿಗೆ ಸಾಮಾನ್ಯ ಜನತೆ ಬಂದು ಹೋಗುವಂತಹ ರೈಲು ವ್ಯವಸ್ಥೆ ಬೇಕಾಗಿತ್ತು. ಅದು ಕನಿಷ್ಠ ರಾಜ್ಯ ಕೇಂದ್ರ ಬೆಂಗಳೂರಿಗಾದರೂ ರೈಲು ಬೇಕೆಂಬುದು ಕರಾವಳಿ ಕನ್ನಡಿಗರ ಹಲವು ವರ್ಷಗಳ ಬೇಡಿಕೆ.

ಪಿ.ವಿ.ನರಸಿಂಹರಾವ್‌ರವರ ಸರ್ಕಾರ 1992ರಲ್ಲಿ ಇಡೀ ದೇಶದಲ್ಲಿ ಒಂದೇ ರೀತಿಯ ರೈಲ್ವೆ ಗೇಜ್ ಇರಬೇಕೆಂದು ತೀರ್ಮಾನಿಸಿರುವ ಹಿನ್ನಲೆಯಲ್ಲಿ ಅಲ್ಲಿಯವರೆಗೆ ಮಂಗಳೂರು-ಬೆಂಗಳೂರು ಮಧ್ಯೆ ಮೀಟರ್ ಗೇಜ್ ಹಳಿಯಲ್ಲಿ ಓಡಾಡುತ್ತಿದ್ದ ರೈಲನ್ನು ನಿಲ್ಲಿಸಿ, ಹಳಿಗಳನ್ನು ಸಂಪೂರ್ಣವಾಗಿ ಕಳಚಿ ಹಾಕಲಾಯಿತು. ಇದರಿಂದಾಗಿ ಮಂಗಳೂರು -ಬೆಂಗಳೂರು ಮಧ್ಯೆ ರೈಲು ಸಂಪರ್ಕ ಕಡಿದು ಹೋಯಿತು. ಮಂಗಳೂರಿನ ಜನತೆಯಂತೂ ಇಂದಲ್ಲ ನಾಳೆ ರೈಲು ಪ್ರಾರಂಭವಾಗಬಹುದೆಂಬ ನಿರೀಕ್ಷೆಯಲ್ಲಿದ್ದರು. ಆದರೆ ರೈಲು ಮಾತ್ರ ಬರಲೆ ಇಲ್ಲ. ಯಾಕೆಂದರೆ ಹಳಿಗಳನ್ನು ಸಿದ್ದಪಡಿಸಲು 12 ವರ್ಷಗಳೇ ಬೇಕಾಯಿತು. ಹೀಗೆ 2004 ರಲ್ಲಿ ಬ್ರಾಡ್‌ಗೇಜ್ ಹಳಿಗಳು ಸಿದ್ಧಗೊಂಡಿದ್ದರೂ ರೈಲನ್ನು ಮಾತ್ರ ಪ್ರಾರಂಭಸಲಿಲ್ಲ. ಇದ್ದ ಒಂದೇ ಒಂದು ರೈಲು ಕೂಡಾ ಮಂಗಳೂರಿನ ಜನತೆಗೆ ಮರೀಚಿಕೆಯಾಯಿತು.



ಈ ಸಂದರ್ಭದಲ್ಲಿ ಜನತೆ ಕೈಗೊಂಡ ಹೋರಾಟದ ಭಾಗವಾಗಿ 2005-06ರ ರೈಲ್ವೆ ಬಜೆಟ್‌ನಲ್ಲಿ ಮಂಗಳೂರು-ಮೈಸೂರು-ಬೆಂಗಳೂರು ಮಾರ್ಗವಾಗಿ ಒಂದು ಎಕ್ಸ್‌ಪ್ರೆಸ್, ಮಂಗಳೂರು-ಅರಸೀಕೆರೆ-ಬೆಂಗಳೂರು ಮಾರ್ಗವಾಗಿ ಇನ್ನೊಂದು ಎಕ್ಸ್‌ಪ್ರೆಸ್ ಹಾಗೂ ಶ್ರವಣಬೆಳಗೊಳ-ಮಂಗಳೂರಿಗೆ ಪ್ಯಾಸೆಂಜರ್ -ಹೀಗೆ 3 ರೈಲುಗಳು ಮಂಜೂರಾಗಿ ಅವುಗಳ ಸಮಯಗಳು ರೈಲ್ವೆ ಇಲಾಖೆಯಲ್ಲಿ ಮುದ್ರಿತವಾಗಿ ಪ್ರಕಟಗೊಂಡರೂ ರೈಲುಗಳು ಮಾತ್ರ ಹಳಿಯಲ್ಲಿ ಓಡಾಡಲೇ ಇಲ್ಲ. ಜನತೆಯ ಹೋರಾಟ ಮತ್ತೆ ಭುಗಿಲೆದ್ದಿತು. ಕೊನೆಗೆ ಜನತೆಯ ಹೋರಾಟಕ್ಕೆ ಮಣಿದ ರೈಲ್ವೆ ಇಲಾಖೆಯು ಅರೆಮನಸ್ಸಿನಿಂದ 08.12.2007 ರಂದು ಮಂಗಳೂರು -ಬೆಂಗಳೂರು ರಾತ್ರಿ ರೈಲನ್ನು (ನಂ.6518) ಪ್ರಾರಂಭಿಸಿತು. ಅಂದಿನಿಂದ ಇಂದಿನವರೆಗೂ ರೈಲ್ವೆ ಇಲಾಖೆ ಹಲವು ಕುಂಟು ನೆಪಗಳನ್ನು ಮುಂದಿಟ್ಟು ಅನೇಕ ಬಾರಿ ರೈಲನ್ನು ನಿಲ್ಲಿಸಿದ ನಿದರ್ಶನಗಳೂ ಇವೆ. ಹೀಗೆ ನಿರಂತರವಾಗಿ ರೈಲ್ವೆ ಇಲಾಖೆಯಿಂದ ನಿರ್ಲಕ್ಷ್ಯಕ್ಕೊಳಗಾದ ಮಂಗಳೂರಿನ ಜನತೆಗೆ ಮತ್ತೊಂದು ಆಘಾತಕಾರಿ ಸಂಗತಿಯೆಂದರೆ ಇದೇ ರೈಲನ್ನು ಕಣ್ಣೂರಿನವರೆಗೂ ವಿಸ್ತರಿಸುವುದು. ಇದ್ದ ಒಂದೇ ಒಂದು ರೈಲನ್ನು ಮರಳಿ ಪಡೆಯಬೇಕಾದರೆ 15 ವರ್ಷಗಳಿಂದ ಜಾತಕ ಪಕ್ಷಿಯಂತೆ ಕಾಯುವುದರ ಜೊತೆಗೆ ನಿರಂತರ ಹೋರಾಟವನ್ನು ಮಾಡಬೇಕಾಯಿತು. ಈಗ ಅದೇ ರೈಲನ್ನು ಮಂಗಳೂರಿನಿಂದಲೇ ಹೊರಡಿಸಬೇಕು, ಕಣ್ಣೂರಿನಿಂದ ರೈಲು ಪ್ರಾರಂಭಗೊಂಡರೆ ಅಲ್ಲಿಂದಲೇ ರಿಸರ್ವೇಶನ್ ಆಗಿ, ಜನರಲ್ ಬೋಗಿಗಳೂ ಕೂಡಾ ತುಂಬಿ ತುಳುಕಿದರೆ ಮಂಗಳೂರಿನ ಜನತೆಯಂತೂ ಪ್ರಯಾಣ ನಡೆಸಲು ಹರಸಾಹಸ ಪಡೆಬೇಕಾಗಿದೆ. ಕೇರಳದ ಸಂಸದರು ಒಗ್ಗಟ್ಟಾಗಿ ಕಣ್ಣೂರಿನಿಂದ ಬೆಂಗಳೂರಿಗೆ ಹೊಸ ರೈಲಿನ ಬೇಡಿಕೆ ಇಟ್ಟರೆ ಅದು ಮಂಗಳೂರಿಗೂ ಪ್ರಯೋಜನವಾಗುತ್ತದೆ. ಅದನ್ನು ಬಿಟ್ಟು ಹೋರಾಟದ ಮೂಲಕ ಪಡೆದುಕೊಂಡ ಒಂದೇ ಒಂದು ರೈಲನ್ನು ಕಣ್ಣೂರಿಗೆ ವಿಸ್ತರಿಸಿದರೆ ಮಂಗಳೂರಿನ ಜನತೆಯ ಗತಿಯೇನು..? ಕಣ್ಣೂರಿಗೆ ರೈಲು ಹೋಗುವುದಕ್ಕೆ ವಿರೋಧವೇನೂ ಇಲ್ಲ. ಆದರೆ ಈಗ ಇದ್ದ ರೈಲನ್ನು ಕಣ್ಣೂರಿನಿಂದ ಬಿಟ್ಟರೆ ಮಂಗಳೂರಿನ ಜನತೆಗೆ ಅನ್ಯಾಯವೆಸಗಿದಂತೆ ಪ್ರತ್ಯೇಕವಾಗಿ ಹೊಸ ರೈಲನ್ನೇ ಓಡಿಸಲಿ.

ಹಗಲು ಕನಸಾದ ಹಗಲು ರೈಲು

ಈಗಾಗಲೇ ಮಂಜೂರಾಗಿದ್ದ ಯಶವಂತಪುರ- ಅರಸೀಕೆರೆ- ಮಂಗಳೂರು(ನಂ.6515) ಹಗಲು ರೈಲನ್ನು ಪ್ರಾರಂಭಿಸಬೇಕೆಂದು ಮಂಗಳೂರಿನ ಜನತೆ ಹೋರಾಟದ ಮೂಲಕ ಒತ್ತಡ ಹಾಕುತ್ತಿದ್ದರೂ, ರೈಲ್ವೆ ಇಲಾಖೆಯಾಗಲೀ, ಕೇಂದ್ರ ಸರ್ಕಾರವಾಗಲೀ ಕಿಂಚಿತ್ತೂ ಗಮನ ನೀಡುತ್ತಿಲ್ಲ. ಕಾರಣ ಕೇಳಿದರೆ ಗುಡ್ಡ ಪ್ರದೇಶದಲ್ಲಿ ಮಣ್ಣು ಕುಸಿತ ಸೇರಿದಂತೆ ಸುರಕ್ಷತೆಯ ಪ್ರಶ್ನೆಯಲ್ಲಿ ಹಲವಾರು ಸಮಸ್ಯೆಗಳಿವೆ ಎಂದು ರೈಲ್ವೆ ಅಧಿಕಾರಿಗಳು ಸಬೂಬು ನೀಡುತ್ತಾರೆ. ಸತ್ಯಾಂಶವೇನೆಂದರೆ ಅದೆ ಹಳಿಯಲ್ಲಿ ಹಗಲು ಹೊತ್ತಿನಲ್ಲಿ 2ಗೂಡ್ಸ್ ರೈಲುಗಳು ಅದಿರು ಸಾಗಾಟ ನಡೆಸುತ್ತಿದ್ದು, ಇದರಿಂದಾಗಿ ರೈಲ್ವೆ ಇಲಾಖೆಗೆ ಸಾಕಷ್ಟು ಆದಾಯವಿದೆ. ಹಗಲು ರೈಲು ಪ್ರಾರಂಭಗೊಂಡರೆ ಅದಿರು ಸಾಗಾಟದ ಗೂಡ್ಸ್ ರೈಲಿಗೆ ಕ್ರಾಸಿಂಗ್ ಕೊಡಲು ಸಾಧ್ಯವಿಲ್ಲ. ಇದರಲ್ಲಿ ಗಮನಿಸಬೇಕಾದ

[illegible]

ಸಂಕುಚಿತವಾದಿಗಳ ಮಧ್ಯಪ್ರವೇಶ

ನಾಡು, ನುಡಿ, ದೇಹ, ಜನನ, ಮರಣ.. ಎಲ್ಲವೂ ಕನ್ನಡ, ಹೀಗೆ ಮಂತ್ರಪಠಣ ಮಾಡಿದಂತೆ ಗಂಟೆಗಟ್ಟಲೆ ಅಸಹ್ಯ ಹುಟ್ಟಿಸುವ ರೀತಿಯಲ್ಲಿ ಘೋಷಣೆ ಹಾಕುತ್ತಿರುವ ಕರ್ನಾಟಕ ರಕ್ಷಣಾ ವೇದಿಕೆ, ಬೆಂಗಳೂರು ಹಾಗೂ ಉತ್ತರ ಕರ್ನಾಟಕದ ಕೆಲವು ಭಾಗಗಳಿಗೆ ಮಾತ್ರ ಸೀಮಿತವಾಗಿತ್ತು.

ದಕ್ಷಿಣ ಕನ್ನಡ-ಉಡುಪಿ ಜಿಲ್ಲೆಯಲ್ಲಿ ಇದರ ಹೆಸರೆತ್ತುವವರೇ ಇರಲಿಲ್ಲ, ಇತ್ತೀಚಿನ ದಿನಗಳಲ್ಲಿ ಇಲ್ಲಿಗೂ ವಕ್ಕರಿಸಿದ ವೇದಿಕೆಗೆ ಇಲ್ಲಿ ಎತ್ತಿಕೊಳ್ಳಲು ಯಾವುದೇ ಪ್ರಶ್ನೆಗಳಿರಲಿಲ್ಲ. ಈಗ ಇವರ ಬಾಯಿಗೂ ಭರ್ಜರಿ ಊಟವೆಂಬಂತೆ ರೈಲಿನ ವಿಷಯವನ್ನು ಮುಂದಿಟ್ಟು ಮಂಗಳೂರಿನ ಜನತೆಯನ್ನು ಕೇರಳ ಜನರ ವಿರುದ್ದ ಎತ್ತಿ ಕಟ್ಟುವ ಮೂಲಕ ತನ್ನ ಸಂಕುಚಿತ ವಾದವನ್ನು ಹಾಗೂ ಪ್ರಾದೇಶಿಕ ಭಾವನೆಯನ್ನು ಕೆರಳಿಸಲು ಹೊರಟಿದೆ. ಮೊದಲೇ ಜಾತಿ-ಧರ್ಮದ ವಿಚಾರದಲ್ಲಿ ನಲುಗಿ ಹೋಗಿರುವ ಮಂಗಳೂರು ಬೂದಿಮುಚ್ಚಿದ ಕೆಂಡದಂತಿದ್ದು ಕರವೇಯ ಈ ನಡವಳಿಕೆ ಉರಿಯುವ ಬೆಂಕಿಗೆ ಬಿಸಿ ತುಪ್ಪ ಸುರದಂತಾಗಿದೆ.

ರೈಲ್ವೆ ಉಳಿವಿಗಾಗಿ....

ಪುಟ 11 ರಿಂದ

ಅಂಶವೇನೆಂದರೆ ಜನತೆಯ ಬಗ್ಗೆ ಬಾರಿ ಬಡಾಯಿ ಕೊಚ್ಚಿಕೊಳ್ಳುವ ಸರ್ಕಾರಗಳು ತಮ್ಮ ಇಲಾಖೆಯ ಆದಾಯಗಳನ್ನು ಹೆಚ್ಚಿಸಿಕೊಳ್ಳಲು ಗಮನಹರಿಸುತ್ತವೆಯೇ ಹೊರತು ಜನತೆಯ ಹಿತಾಸಕ್ತಿಗಳನ್ನಲ್ಲ ಎಂದು ಅರಿಯಬೇಕಾಗಿದೆ. ಮಾತ್ರವಲ್ಲ ಇತ್ತೀಚಿನ ರೈಲ್ವೆ ಬಜೆಟ್‌ನಲ್ಲಿ ಹಗಲು ರೈಲು ಬಗ್ಗೆ ಪ್ರಸ್ತಾಪವೇ ಇರಲಿಲ್ಲ. ಇದರಿಂದಾಗಿ ಹಗಲು ರೈಲು ಹಗಲು ಕನಸಾಗಿಯೇ ಉಳಿದಿದೆ.

ಮೊಸಳೆ ಕಣ್ಣೀರು ಸುರಿಸುತ್ತಿರುವ ಬಿಜೆಪಿ ಹಾಗೂ ಕಾಂಗ್ರೆಸ್

ಪ್ರತಿಯೊಂದು ಊರಿನ ಅಭಿವೃದ್ಧಿಗೆ ರೈಲು ವ್ಯವಸ್ಥೆ ಪ್ರಮುಖ ಮೈಲುಗಲ್ಲು, ಸಾಮಾನ್ಯ ಜನತೆ ಓಡಾಡಲು ಸಹಕಾರಿಯಾಗುವಂತೆ ರೈಲಿನ ವ್ಯವಸ್ಥೆಯನ್ನು ಮಾಡಲು ಕಳೆದ ಹದಿನೇಳು ವರ್ಷಗಳಿಂದ ಕಾಂಗ್ರೆಸ್ ಬಿಜೆಪಿ ಪಕ್ಷಗಳ ಮುಖಂಡರು, ಜನಪ್ರತಿನಿಧಿಗಳು ನಯಾಪೈಸೆಯಷ್ಟೂ ಕೆಲಸ ಮಾಡಿಲ್ಲ. 15 ವರ್ಷಗಳ ಬಳಿಕ ಮತ್ತೆ ರೈಲು ಪ್ರಾರಂಭಗೊಂಡಿದ್ದರೆ ಅದು ಮಂಗಳೂರಿನ ಜನತೆಯ ಹೋರಾಟದ ಫಲವೇ ಹೊರತು ಕಾಂಗ್ರೆಸ್-ಬಿಜೆಪಿಗಳಿಂದಲ್ಲ. ಪಕ್ಕದ ಕೇರಳದಲ್ಲಾಗಲೀ ಹಾಗೂ ಇತರ ರಾಜ್ಯಗಳಲ್ಲಾಗಲೀ ಅಲ್ಲಿನ ಜನಪ್ರತಿನಿಧಿಗಳು ಒಂದಾಗಿ ಪಕ್ಷಬೇಧ ಮರೆತು ರೈಲು ವ್ಯವಸ್ಥೆಯನ್ನು ಮಾಡಿಸುವಲ್ಲಿ ಒಗ್ಗಟ್ಟಾಗಿ ಕೆಲಸ ಮಾಡಿದ ಮಾದರಿ ನಮ್ಮ ಮುಂದಿರುವಾಗ ಕರಾವಳಿ ಕರ್ನಾಟಕದ ಅಭಿವೃದ್ಧಿಗೆ ಇಲ್ಲಿನ ಜನಪ್ರತಿನಿಧಿಗಳು ಮಾಡಿದ್ದಾದರೂ ಏನೂ?

ಕಳೆದ ಹದಿನೇಳು ವರ್ಷಗಳ ಅವಧಿಯಲ್ಲಿ ಮಂಗಳೂರು ಲೋಕಸಭಾ ಕ್ಷೇತ್ರದಲ್ಲಿ ನಿರಂತರವಾಗಿ ಬಿಜೆಪಿ ಗೆದ್ದುಬಂದಿದ್ದರೂ, ಈ ಅವಧಿಯಲ್ಲಿ ಧನಂಜಯಕುಮಾರ್, ಡಿ.ವಿ.ಸದಾನಂದಗೌಡ ಹಾಗೂ ಸದ್ಯಕ್ಕೆ ನಳಿನ್ ಕುಮಾರ್ ಕಟೀಲು ಸಂಸದರಾಗಿ ಆಯ್ಕೆಯಾಗಿ ಬಂದಿದ್ದರೂ ಎಳ್ಳಷ್ಟೂ ಕಾಳಜಿ ವಹಿಸಿಲ್ಲ. ಧನಂಜಯ ಕುಮಾರ್ ಹಾಗೂ ಸದಾನಂದ ಗೌಡರವರು ತಮ್ಮ ಅಧಿಕಾರ ಅವಧಿಯಲ್ಲಿ ಸಂಪೂರ್ಣವಾಗಿ ಬಾಯಿಯಲ್ಲಿ ರೈಲು ಬಿಟ್ಟಿದ್ದು ಬಿಟ್ಟರೆ ಹಳಿಯಲ್ಲಿ ಬಿಡಲು ಸಾಧ್ಯವಾಗಿಲ್ಲ. ರೈಲಿನ ಸಮಸ್ಯೆ ಮಂಗಳೂರಿನಲ್ಲಿ ಗಂಭೀರ ಸ್ವರೂಪ ಪಡೆಯುತ್ತಿದ್ದರೂ, ಸಂಸದರಾದ ನಳಿನ್ ಕುಮಾರ್ ಕಟೀಲ್‌ರವರು ರೈಲ್ವೆ ಬಜೆಟ್ ಕಣ್ಣೂರಿಗೆ ವಿಸ್ತರಿಸಿದ್ದರೂ ಕೇಂದ್ರ ಸರ್ಕಾರದ ವಿರುದ್ಧ ಸಂಸದರು ಆಕ್ರೋಶಿತಗೊಂಡಿಲ್ಲ. ಬದಲಾಗಿ ಜನತೆಯ ಹೋರಾಟದಲ್ಲಿ ಕ್ಷಣಮಾತ್ರವೇ ಭಾಗವಹಿಸಿ ಮಾಧ್ಯಮದೆದುರು ಪೋಸ್ ನೀಡುವ ಮೂಲಕ ಕಪಟ ನಾಟಕವನ್ನಾಡಿದ್ದಾರೆ. ಮಾತ್ರವಲ್ಲದೆ, ಮಂಗಳೂರಿಗಾದ ಅನ್ಯಾಯವನ್ನು ವಿರೋಧಿಸಿ ಪ್ರಬಲ ಹೋರಾಟ ನಡೆಸುವ ಬದಲು ಮಂಗಳೂರಿನ ಕೆನರಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯನ್ನು ಮುಂದುವರಿಸಿಕೊಂಡು ಬಿಜೆಪಿ ರಾಜಕೀಯ ನಡೆಸಿದೆ. ಹೋರಾಟವನ್ನು ಎಲ್ಲರೂ ಸೇ ನಡೆಸಿದ್ದರೆ, ದೆಹಲಿಗೆ ಮಾತ್ರ ಬಿಜೆ -ಆರ್‌ಎಸ್‌ಎಸ್ ಮುಖಂಡರು ಮಾತ್ರ ತೆರಳಿ ರೈ ಸಚಿವೆಗೆ ಮನವಿ ಅರ್ಪಿಸಿದರು.

ಇನ್ನೂ ಕಾಂಗ್ರೆಸ್ ನಾಟಕ ಹೇಳತೀರದು. ಕಳೆ ಹದಿನೇಳು ವರ್ಷಗಳಲ್ಲಿ 5 ವರ್ಷ ಎನ್‌ಡಿಎ ಕೂ ಹಾಗೂ 2 ವರ್ಷ ಸಂಯುಕ್ತರಂಗ ಅಧಿಕಾ ನಡೆಸಿರುವುದು ಬಿಟ್ಟರೆ 10 ವರ್ಷಗಳ ಕಾ ಕೇಂದ್ರದಲ್ಲಿ ಅಧಿಕಾರದ ಸವಿಯನ್ನುಂಡಿರುವುದ ಕಾಂಗ್ರೆಸ್. ಈ ಸಂದರ್ಭದಲ್ಲಿ ಆಸ್ಕರ್ ಫರ್ನಾಂಡಿಸ್ ಕೇಂದ್ರ ಸಚಿವರಾಗಿದ್ದರು ಹಾಗ ಜನಾರ್ಧನ ಪೂಜಾರಿ ರಾಜ್ಯ ಸಭಾ ಸದಸ್ಯರಾಗಿದ್ದ ಮಾತ್ರವಲ್ಲದೆ ವಿನಯಕುಮಾರ್ ಸೊರಕೆಯವ ಮಂಗಳೂರು ಸೇರಿದಂತೆ ಉಡುಪಿ ಲೋಕಸಭ ಕ್ಷೇತ್ರದ ಸಂಸದರಾಗಿ ಆಯ್ಕೆಯಾಗಿದ್ದರು ವೀರಪ್ಪಮೊಯಿಲಿ ಯವರು ಯೋಜನಾ ಆಯೋಗ ಅಧ್ಯಕ್ಷರಾಗಿ ಪ್ರಸ್ತುತ ಕಾನೂನು ಸಚಿವರಾಗಿರುತ್ತಾ ಇಷ್ಟೆಲ್ಲಾ ಘಟನುಘಟಿಗಳು ಅಧಿಕಾರದಲ್ಲಿ ಮಂಗಳೂರಿಗೆ ಮಾತ್ರ ರೈಲು ವ್ಯವಸ್ಥೆ ಕಲ್ಪಿ ಸಾಧ್ಯವಾಗಿಲ್ಲ. ಮಾತ್ರವಲ್ಲದೆ ಮಂಗಳೂರಿನ ರೈಲ ಕಿತ್ತುಕೊಂಡು ಕೇರಳಕ್ಕೆ ಒದಗಿಸಿದರೂ, ಮಹಾನುಭಾವರು ತುಟಿಪಿಟಿಕ್ಕೆನ್ನ ಮೌನವಹಿಸಿರುವುದು ತೀರಾ ನಾಚಿಕೆಗೇಡಿ ಸಂಗತಿಯಾಗಿದೆ. ಕಳೆದ ಯುಪಿಎ ಸರ್ಕಾರ ಅವಧಿಯಲ್ಲಿ ಉಡುಪಿಯ ರೈಲ್ವೆ ಯಾತ್ರಿಕರ ಸಂಘ ಪದಾಧಿಕಾರಿಗಳು ದೆಹಲಿಗೆ ತೆರಳಿ ಕಾರ್ಮಿ ಸಚಿವರಾಗಿದ್ದ ಆಸ್ಕರ್ ಫರ್ನಾಂಡೀಸ್ ಮೂಲ ರೈಲ್ವೆ ಸಚಿವರಾದ ಲಾಲೂಪ್ರಸಾದ ಯಾದವ್‌ರವರನ್ನು ಭೇಟಿಯಾ ಮಂಗಳೂರು-ಬೆಂಗಳೂರು ಹಗಲು ರೈಲನ ಮಂಗಳೂರಿಗೆ ಮಾತ್ರ ಸೀಮಿತಗೊಳಿಸ ಉಡುಪಿ-ಕುಂದಾಪುರ ಮಾರ್ಗವಾಗಿ ಕಾರವಾ ತನಕ ವಿಸ್ತರಿಸಬೇಕೆಂದು ಬೇಡಿಕೆಯನ್ನಿಟ್ಟಾಗ ಇಬ್ಬರು ಕೇಂದ್ರ ಸಚಿವರು ತಲೆದೂಗಿದರೇ ಹೊರತು ಏನನ್ನೂ ಮಾಡಲಿಲ್ಲ. ಕನಿಷ್ಠ ಉಡುಪಿಯವರೇ ಆ ಆಸ್ಕರ್‌ರವರು ಅತ್ತ ತಲೆ ಹಾಕಲೇ ಸಿಪಿಐ(ಎಂ) ಪಕ್ಷ ಮತ್ತು ಹಲವು ಸಾಮೂಹಿ ಸಂಘಟನೆಗಳು ಈ ಪ್ರಶ್ನೆಯನ್ನು ಗಂಭೀರವಾ ಕೈಗೆತ್ತಿಕೊಂಡು ಹೋರಾಟ ನಡೆಸುತ್ತಿವೆ.

ಸಿಪಿಐ(ಎಂ) ಪಕ್ಷದ ಪಾತ್ರ

ಕಳೆದ ಹದಿನೇಳು ವರ್ಷಗಳಿಂದ ಮಂಗಳೂರಿನ ಜನತೆಯ ಹೋರಾಟ ನಡೆದಾಗ ಸಿಪಿಐ(ಎಂ) ಪಕ್ಷವೂ ತನ್ನದೇ ಆದ ಜವಾಬ್ದಾರಿಯುತ ಪಾತ್ರವನ್ನು ನಿರ್ವಹಿಸಿದೆ, ಹೋರಾಟಗಳಲ್ಲಿ ಭಾಗಿಯಾಗಿದೆ.

ಪುತ್ತೂರಿನಲ್ಲಿ ಸಿಪಿಐ(ಎಂ)ನ ಮುತುವರ್ಜಿಯಿಂದಲೇ ಇತರೆ ರಾಜಕೀಯ ಪಕ್ಷಗಳನ್ನು ಒಟ್ಟು ಸೇರಿಸಿ 'ಸಿಟಿಜನ್ ಫೋರಂ' ಎಂಬ ವೇದಿಕೆಯನ್ನು ಹುಟ್ಟು ಹಾಕಿ ಮಂಗಳೂರು-ಬೆಂಗಳೂರು ರೈಲನ್ನು ಪ್ರಾರಂಭಿಸಲು ಧರಣಿ, ಅನ್ನ ಸತ್ಯಾಗ್ರಹದಂತಹ ಅನೇಕ ವಿಧದ ಹೋರಾಟಗಳ ಮೂಲಕ ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗಿದೆ. ಮಂಗಳೂರು-ಬೆಂಗಳೂರು ರೈಲು ಪ್ರಾರಂಭವಾಗಬೇಕೆಂದು ಕೇರಳ ರಾಜ್ಯಕ್ಕೆ ಸೇರಿರುವ ಕಾಸರಗೋಡಿನ ಸಂಸದರಾದ ಕೆ.ಕರುಣಾಕರನ್‌ರವರು ಸಂಸತ್ತಿನಲ್ಲಿ ಪ್ರಸ್ತಾಪಿಸಿದರೇ ಹೊರತು ಬಿಜೆಪಿಯ ಡಿ.ವಿ.ಸದಾನಂದಗೌಡರಲ್ಲ. ಕರುಣಾಕರನ್‌ರವರ ಮುತುವರ್ಜಿಯಿಂದಲೇ ಕಾಣಿಯೂರು ಕಾಂಞಂಗಾಡ್ ಮಧ್ಯೆ ರೈಲು ವ್ಯವಸ್ಥೆ ಕಲ್ಪಿಸಲು ಈಗಾಗಲೇ ಸರ್ವೆ ನಡೆಸುವ ಕಾರ್ಯ ಭರದಿಂದ ನಡೆಯುತ್ತಿದೆ. ಮಂಗಳೂರನ್ನು ಕೇಂದ್ರೀಕರಿಸಿ ಮಧ್ಯ ಭಾರತಕ್ಕೆ ಹಾಗೂ ಉತ್ತರ ಭಾರತಕ್ಕೆ ರೈಲು ಓಡಾಟ ನಡೆಸಬೇಕೆಂಬ ಬೇಡಿಕೆ ಮೂಡಿಬಂದದ್ದೇ ಸಿಪಿಐ(ಎಂ)ನಿಂದ. ಈ ಬಗ್ಗೆ ಲೋಕಸಭೆಯಲ್ಲಿ ಸಿಪಿಐ(ಎಂ) ಗುಂಪಿನ ನಾಯಕರಾದ ಬಸುದೇವ ಆಚಾರ್ಯರಿಗೆ ಮನವಿಯನ್ನು ಅರ್ಪಿಸಿದಾಗ ಅವರು ಕೇಂದ್ರ ಸರ್ಕಾರದ ಗಮನಕ್ಕೆ ತಂದಿರುವ ಬಗ್ಗೆ ದಾಖಲೆಗಳಿವೆ. ಹೀಗೆ ಸಿಪಿಐ(ಎಂ) ಪಕ್ಷ ಮಾತ್ರವೇ ಜನರ ನಾಡಿ ಮಿಡಿತವನ್ನು ಪರೀಕ್ಷಿಸಿ ಅವರೊಂದಿಗೆ ಹೆಜ್ಜೆ ಹಾಕುತ್ತಿದೆ. ಇನ್ನಷ್ಟು ರೈಲಿನ ವ್ಯವಸ್ಥೆಯನ್ನು ಪಡೆಯುವಲ್ಲಿ ಹೋರಾಟ ಮುಂದುವರಿಯಲಿದೆ.

ಪ್ರಸ್ತುತ ಸಮಸ್ಯೆ ಪರಿಹಾರಕ್ಕೆ ಸಿಪಿಐ(ಎಂ)ನ ಬೇಡಿಕೆಗಳು

1. ದ.ಕ.ಜಿಲ್ಲೆ ಮಂಗಳೂರು ಮತ್ತು ಇತರ ನಿಲ್ದಾಣಗಳಲ್ಲಿ ಈ ತನಕ ಲಭ್ಯವಿರುವ ಸೀಟುಗಳಲ್ಲಿ ಮತ್ತು ಸಾಮಾನ್ಯ ಬೋಗಿಗಳಲ್ಲಿ ಸ್ಥಳಾವಕಾಶವು ಕಡಿಮೆಯಾಗದಂತೆ ಖಾತ್ರಿಪಡಿಸಲು ಅಗತ್ಯವಿರುವಷ್ಟು ಹೆಚ್ಚುವರಿ ಬೋಗಿಗಳನ್ನು ಒದಗಿಸಬೇಕು.

2. ಬೆಂಗಳೂರಿಗೆ ಹೋಗುವ ಮತ್ತು ಅಲ್ಲಿಂದ ಬರುವ ರೈಲುಗಳು ಈಗಿನಂತೆ ಮಂಗಳೂರು ಕೇಂದ್ರ ನಿಲ್ದಾಣಕ್ಕೆ ಬರಬೇಕು.

3. ತಾತ್ಕಾಲಿಕ ಟಿಕೇಟು ಕೊಳ್ಳುವ ಮಂಗಳೂರಿನ ಪ್ರಯಾಣಿಕರಿಗೆ ಬೆಂಗಳೂರು-ಮಂಗಳೂರು ನಡುವಿನ ದೂರವನ್ನೇ ಪರಿಗಣಿಸಬೇಕು.

4. ಬೆಂಗಳೂರು-ಮಂಗಳೂರು ನಡುವೆ ಈಗಾಗಲೇ ನಿರ್ಧರಿಸಲಾದ ಹಗಲು ರೈಲನ್ನು ತಕ್ಷಣ ಆರಂಭಿಸಬೇಕು. ಇನ್ನೊಂದು ಹೆಚ್ಚುವರಿ ರಾತ್ರಿ ರೈಲನ್ನು ಸಂಚಾರಕ್ಕೆ ಮಂಜೂರು ಮಾಡಬೇಕು.

5. ಮಂಗಳೂರಿನಿಂದ ಮೈಸೂರಿಗೆ ಪ್ರತ್ಯೇಕ ರೈಲು ಆರಂಭಿಸಿ ಈಗಿರುವ ರೈಲು ಕನಿಷ್ಠ 8 ತಾಸುಗಳಲ್ಲಿ ಬೆಂಗಳೂರು ತಲುಪುವಂತೆ ಅದನ್ನು ಹಾಸನ-ಅರಸೀಕೆರೆ ಮಾರ್ಗವಾಗಿ ಓಡಿಸಬೇಕು.

ಪಂಚಾಯಿತ್ ನೌಕರರ ಹೋರಾಟದ ಇತಿಹಾಸ

ಪುಟ 10 ರಿಂದ

ಸುಪ್ರಿಂ ಕೋರ್ಟ್ ನೌಕರರ ಮುಷ್ಕರದ ಹಕ್ಕನ್ನು ನಿರಾಕರಿಸಿದ ಹಿನ್ನೆಲೆಯಲ್ಲಿ 2004 ಫೆಬ್ರವರಿ 24 ರಂದು ಅಖಿಲ ಭಾರತ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಲಾಯಿತು. ಅನುದಾನದಲ್ಲಿ ಸಂಬಳ ಪಾವತಿ ಅಂಶವನ್ನು ಜೋಡಿಸಿ ಈ ಮುಷ್ಕರದಲ್ಲಿ ಪಾಲ್ಗೊಳ್ಳಲು ಪಂಚಾಯತ್ ನೌಕರರಿಗೂ ವಿನಂತಿಸಲಾಯಿತು. ಸುಮಾರು 18 ಜಿಲ್ಲೆಗಳಲ್ಲಿ ಪಂಚಾಯತ್ ನೌಕರರು ಅಭೂತಪೂರ್ವ ಮುಷ್ಕರ ನಡೆಸಿದರು. ಸುಮಾರು 10 ಸಾವಿರ ನೌಕರರು ಹೋರಾಟದಲ್ಲಿ ಪಾಲ್ಗೊಂಡರು. ಸಂಘಟನೆಯ ಇತಿಹಾಸದಲ್ಲೇ ಇದು ಗಮನಾರ್ಹ ಸಾಧನೆಯಾಯಿತು.

ಫೆಬ್ರುವರಿ ಹೋರಾಟದ ಫಲವಾಗಿ ಅನುದಾನದಲ್ಲಿ ವೇತನ ಪಾವತಿಗೆ ಅನುಮತಿ ನೀಡಲಾಯಿತು. ಮೊದಲು ಸ್ವೀಪರುಗಳು ಮತ್ತು ವಾಟರ್‌ಮನ್‌ಗಳಿಗೆ ಮಾತ್ರ ಇದ್ದ ಸೌಲಭ್ಯ ಹೊಸ ಆದೇಶದಲ್ಲಿ ಎಲ್ಲ ನೌಕರರಿಗೂ ದೊರೆತಿದ್ದು ಭಾರೀ ಪ್ರಮುಖ ಅಂಶ. ಇದನ್ನೇ ನಾವು ಕಳೆದ 10 ವರ್ಷಗಳಿಂದ ಕೇಳುತ್ತಿದ್ದೆವು. ಹೋರಾಟಕ್ಕೆ ಫಲ ದೊರೆಯಿತು.

2005 ಸೆಪ್ಟೆಂಬರ್ 27, 28, 29 ರಂದು ತಾಲ್ಲೂಕು ಪಂಚಾಯತ್ ಕಛೇರಿ ಎದುರು ಧರಣಿ, 2006 ಜನವರಿಯಲ್ಲಿ 22 ಜಿಲ್ಲೆಗಳಲ್ಲಿ ಕಾರ್ಮಿಕ ಅಧಿಕಾರಿಗಳಿಗೆ ಮನವಿ ಹಾಗೂ ಮಾರ್ಚ್ ತಿಂಗಳಲ್ಲಿ 10,000 ಕ್ಕೂ ಅಧಿಕ ನೌಕರರ ಹಗಲುರಾತ್ರಿ ಧರಣಿಯಿಂದಾಗಿ ಕನಿಷ್ಟ ವೇತನ ರೂ. 1891 ಹಾಗೂ 2041 ಪಡೆಯಲು ಸಾಧ್ಯವಾಯಿತು.

2007 ಮತ್ತು 2008 ರಲ್ಲಿ ವಿವಿಧ ಹಂತಗಳ ಹೋರಾಟ ಮತ್ತು ಮಾತುಕತೆಗಳ ಫಲವಾಗಿ ಗ್ರಾಮ ಪಂಚಾಯತಿ ನೌಕರರಿಗೆ 1.4.2008 ರಿಂದ ಕನಿಷ್ಟ ವೇತನ ರೂ. 2030, 2130, 2180 ಹಾಗೂ 2380 ಗೆಜೆಟ್‌ನಲ್ಲಿ ಪ್ರಕಟವಾದುದು ಮಾತ್ರವಲ್ಲದೇ ಪ್ರತಿ ಪಾಯಿಂಟ್‌ಗೆ ತಿಂಗಳಿಗೆ 90 ಪೈಸೆಯಂತೆ ತುಟ್ಟಿಭತ್ಯೆ ಪಡೆಯಲು ಸಾಧ್ಯವಾಗಿದೆ. ತುಟ್ಟಿಭತ್ಯೆ ಎಂಬುದು ಗ್ರಾಮ ಪಂಚಾಯತ್ ನೌಕರರ ದೀರ್ಘಕಾಲದ ಹೋರಾಟಕ್ಕೆ ಸಂದ ಜಯವೆಂದೇ ಹೇಳಬೇಕು. 1.4.2008 ರಿಂದ 31.3.2009 ರ ವರೆಗೆ ತಿಂಗಳಿಗೆ ರೂ. 206.10 ಹಾಗೂ 1.4.2009 ರಿಂದ 31.3.2010ರವರೆಗೆ ರೂ. 504.90 ತುಟ್ಟಿಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ.

ಹೋರಾಟ ಮಾಡಿದ ಫಲವಾಗಿ ಆದೇಶ ಜಾರಿಯಾಗಿದ್ದರೂ ಅನೇಕ ಪಂಚಾಯತುಗಳಲ್ಲಿ ತುಟ್ಟಿಭತ್ಯೆ ನೀಡುತ್ತಿಲ್ಲ. ಆದ್ದರಿಂದ ಹಿಂದಿನ ಹೋರಾಟದ ಪರಂಪರೆಯನ್ನು ಮೆಲುಕುಹಾಕುತ್ತಾ ತಾಲ್ಲೂಕು ಮಟ್ಟಗಳಲ್ಲಿ ದೀರ್ಘಕಾಲದ ಚಳ ರೂಪಿಸಬೇಕು.

ಮತ್ತೆ ಎಲ್‌ಐಸಿ ತಿದ್ದುಪಡಿ ಮಸೂದೆ

ಜುಲೈ 31ರಂದು ಯುಪಿಎ ಸರಕಾರ ಎಲ್‌ಐಸಿ(ತಿದ್ದುಪಡಿ) ಮಸೂದೆ, 2009ನ್ನು ಲೋಕಸಭೆಯಲ್ಲಿ ಮಂಡಿಸಿದೆ. ಯುಪಿಎ?1 ಸರಕಾರ ಎಡಪಕ್ಷಗಳು ಪರಮಾಣು ವ್ಯವಹಾರದ ವಿಷಯದಲ್ಲಿ ಬೆಂಬಲ ಹಿಂತೆಗೆದುಕೊಂಡ ನಂತರ ಈ ಮಸೂದೆಯನ್ನು ಮಂಡಿಸಿತ್ತು. ಆ ಲೋಕಸಭೆಯ ಅವಧಿ ಮುಗಿಯುವುದರೊಂದಿಗೆ ಆ ಮಸೂದೆ ರದ್ದಾಗಿ ಹೋಗಿತ್ತು. ಯುಪಿಎ-2 ಹಣಕಾಸು ಬಂಡವಾಳಿಗರ ಒತ್ತಡಕ್ಕೆ ತಲೆಬಾಗಿ ಅದಕ್ಕೆ ಈಗ ಮರು ಜೀವ ಕೊಟ್ಟಿದೆ. ಇದನ್ನು ಪ್ರತಿಭಟಿಸಿ ಎಲ್‌ಐಸಿ ನೌಕರರು ದೇಶಾದ್ಯಂತ ಆಗಸ್ಟ್ 4ರಂದು ಎರಡು ಗಂಟೆಗಳ ಮುಷ್ಕರ ನಡೆಸಿ ಬಲವಾದ ಪ್ರತಿಭಟನೆ ವ್ಯಕ್ತ ಪಡಿಸಿದ್ದಾರೆ. ಇದು 26 ಕೋಟಿ ಪಾಲಿಸಿದಾರರನ್ನು ಹೊಂದಿರುವ ದೇಶದ ಬೃಹತ್ ಹಣಕಾಸು ಸಂಸ್ಥೆಯನ್ನು ಖಾಸಗಿಯವರ ಕೈಗಿಡುವತ್ತ ಮೊದಲ ಹೆಜ್ಜೆ ಎಂದು ಟೀಕಿಸಲಾಗಿದೆ.

ಖಾಸಗಿ ವಿಮಾನ ಮಾಲಕರ ಮುಷ್ಕರ!

ತಮ್ಮನ್ನು ಸರಕಾರ ಕಾಪಾಡಲು ಮುಂದಾಗದಿದ್ದರೆ ತಾವು ಆಗಸ್ಟ್ 18ರಂದು ಮುಷ್ಕರ ನಡೆಸುತ್ತೇವೆಂದು ಖಾಸಗೀ ವಿಮಾನ 'ಕಂಪನಿ ಮಾಲಕರು ಆಗಸ್ಟ್ 1ರಂದು ಸರಕಾರವನ್ನು ಬೆದರಿಸಿದರು. ಸರಕಾರ ಅವರ ಬೆದರಿಕೆಗೆ ಮಣಿಯುವುದಿಲ್ಲ ಎಂಬ ಪೋಸು ಕೊಟ್ಟಿದೆ. ಆದರೆ ಅವರನ್ನು ಮಾತುಕತೆಗೆ ಕರೆದಿದೆ. ಖಾಸಗೀ ವಿಮಾನಯಾನ ಕಂಪನಿಗಳಿಗೆ ?ಮುಷ್ಕರದ ಹಕ್ಕು? ಯಾವಾಗ ಸಿಕ್ಕಿತು ಎಂದು ಪ್ರಶ್ನಿಸಿರುವ ಕಾರ್ಮಿಕ ಸಂಘಗಳು ಇದು ಒಂದು ನಾಟಕದಂತೆ ಕಾಣುತ್ತದೆ, ಮೊನ್ನೆಮೊನ್ನೆಯ ವರೆಗೂ ನಾಗರಿಕ ವಿಮಾನಯಾನ ಇಲಾಖೆಯಲ್ಲಿ ಕಾರ್ಯದರ್ಶಿ ಹುದ್ದೆಯಲ್ಲಿದ್ದು ಈಗ ಖಾಸಗೀ ವಿಮಾನಯಾನ ಕಂಪನಿಗಳ ಒಕ್ಕೂಟದ ಮುಖಂಡನಾಗಿರುವಾತ ಹಾಗೂ ಯುಪಿಎ-2 ಸರಕಾರದ ನಾಗರಿಕ ವಿಮಾನಯಾನ ಮಂತ್ರಿ ಒಟ್ಟಾಗಿ ಬರೆದ ನಾಟಕ ಎಂದು ಅಭಿಪ್ರಾಯ ಪಟ್ಟಿವೆ. ಯುಪಿಎ ಸರಕಾರ ಸಾರ್ವಜನಿಕ ವಲಯದ ಏರ್ ಇಂಡಿಯಾ ಕಂಪನಿಗೆ ಹೇಳಿದಂತೆ ?ಕೆಲಸ ಮಾಡಿ ತೋರಿಸಿ, ಇಲ್ಲವೆ ನಾಶವಾಗಿ? ಎಂದು ಖಾಸಗಿಯುವರಿಗೂ ಹೇಳುತ್ತದೋ ಕಾದು ನೋಡಬೇಕು.


✸

ಬಾತ್ಲಾ ಎನ್‌ಕೌಂಟರ್ ಮರು ತನಿಖೆಗೆ ಆಗ್ರಹ

ಕಳೆದ ಸಪ್ಟಂಬರಿನಲ್ಲಿ ದಿ'ಲ್ಲಿಯ ಬಾತ್ಲಾ ಹೌಸ್ ಎಂಬಲ್ಲಿ ನಡೆದ ಎನ್‌ಕೌಂಟರ್‌ನಲ್ಲಿ ಇಬ್ಬರು ಉಗ್ರಗಾಮಿಗಳು ಕೊಲ್ಲಲ್ಪಟ್ಟರು ಎಂಬ ಪೋಲೀಸ್ ವರದಿಯ ಬಗ್ಗೆ ತನಿಖೆ ನಡೆಸಿರುವ ರಾಷ್ಟ್ರೀಯ ಮಾನವ ಹಕ್ಕು ಆಯೋಗ ಹೈಕೋರ್ಟಿಗೆ ನೀಡಿರುವ ವರದಿಯೂ ಟೀಕೆಗೊಳಗಾಗಿದೆ. ಆಯೋಗ ತನ್ನದೇ ಸ್ವತಂತ್ರ ತನಿಖೆ ನಡೆಸದೆ ಪೋಲೀಸ್ ಹೇಳಿಕೆಗಳ ಆಧಾರದಲ್ಲಷ್ಟೇ ವರದಿ ನೀಡಿದೆ, ಆದ್ದರಿಂದ ಹೈಕೋರ್ಟ್ ನೇಮಿಸಿದ ವಿಶೇಷ ತನಿಖಾ ತಂಡ ಇದರ ತನಿಖೆ ನಡೆಸಬೇಕು ಎಂದು ಆಗ್ರಹಿಸಲಾಗುತ್ತಿದೆ.

✸

ಯುಪಿಎ II ದರ್ಬಾರ್‌ನಲ್ಲಿ



ಅಮೆರಿಕಾದ ಒತ್ತಡಗಳಿಗೆ ಮತ್ತೆ ಶರಣು

ಸ್ವತಃ ಸಶಸ್ತ್ರ ಪಡೆಗಳೇ ಖಾಸಗಿಯಾಗಿ ಮತ್ತು ಬಹಿರಂಗವಾಗಿ ಸಂದೇಹ ವ್ಯಕ್ತ ಪಡಿಸಿದರೂ ಯುಪಿಎ-2 ಸರಕಾರ ಇಯುಎಂ ಅಂದರೆ ಅಮೆರಿಕಾದಿಂದ ಪಡೆದ ರಕ್ಷಣಾ ಉಪಕರಣಗಳನ್ನು ಅಂತಿಮವಾಗಿ ಹೇಗೆ ಬಳಸಲಾಗುತ್ತಿದೆ ಎಂಬುದನ್ನು ಪರೀಕ್ಷಿಸಲು ಅಮೆರಿಕಾಕ್ಕೆ ಅವಕಾಶ ಕೊಡುವ ಒಪ್ಪಂದಕ್ಕೆ ಸಹಿ ಹಾಕಿದೆ. ಬೇರೆ ಯಾವ ಪ್ರಮುಖ ವಿದೇಶೀ ಸರಕಾರವೂ ಇಂತಹ ಒಪ್ಪಂದ ಬೇಕೆಂದು ಕೇಳಿಲ್ಲ. ಆದರೆ ಭಾರತ ಸರಕಾರ ಈಗ ಒಪ್ಪಂದಕ್ಕೆ ಸಹಿ ಹಾಕಿರುವುದರಿಂದ ಇನ್ನು ಮುಂದೆ ಅವೂ ಕೇಳಬಹುದು.

ಅಲ್ಲದೆ ಅಮೆರಿಕಾದ ಪರಮಾಣು ಸ್ಥಾವರಗಳ ಸ್ಥಾಪನೆಗೆ ಎರಡು ಪರಮಾಣು ಪಾರ್ಕುಗಳನ್ನು ಗುರುತಿಸಬೇಕೆಂಬ ಅಮೆರಿಕಾದ ಆಗ್ರಹಕ್ಕೂ ಯುಪಿಎ ಸರಕಾರ ತಲೆಬಾಗಿದೆ. ಅತ್ತ ಜಿ-8 ಗುಂಪಿನ ನಿರ್ಧಾರದಂತೆ ಎನ್‌ಪಿಟಿಗೆ ಸಹಿ ಹಾಕದ ದೇಶಗಳಿಗೆ ಸಂಬಂಧಪಟ್ಟ ತಂತ್ರಜ್ಞಾನಗಳನ್ನು ಕೊಡಬಾರದು ಎಂಬ ನಿಯಮವನ್ನು ರೂಪಿಸಲು ಮುಂದಾಗಿದ್ದರೂ ಇದು ಭಾರತಕ್ಕೆ ಅನ್ವಯುವಾಗುವುದಿಲ್ಲೆಂದು ನಂಬಿಸುವ ಪ್ರಯತ್ನವನ್ನು ಯುಪಿಎ ಸರಕಾರದ ಪ್ರಮುಖರು ಮಾಡುತ್ತಿದ್ದಾರೆ. ವಾಸ್ತವವಾಗಿ ಅಮೆರಿಕಾದ ವಿದೇಶಾಂಗ ಕಾರ್ಯದರ್ಶಿಗಳು ಈ ಒಪ್ಪಂದಗಳನ್ನು ಮಾಡಿಸಲು ಭಾರತದಲ್ಲಿರುವಾಗಲೇ ಅಮೆರಿಕಾದ ಮಿಲಿಟರಿ ವ್ಯವಸ್ಥೆ ಪೆಂಟಗನ್ ಅಮೆರಿಕಾದಲ್ಲಿ ನೀಡಿದ್ದ ಹೇಳಿಕೆ ಇದಕ್ಕೆ ವ್ಯತಿರಿಕ್ತವಾಗಿದೆ. ಆದರೆ ಈ ಹೇಳಿಕೆ ಆಗ ಭಾರತದಲ್ಲಿ ಪ್ರಕಟವಾಗಲಿಲ್ಲ ಎಂದು ಪತ್ರಿಕೆಯೊಂದು ವರದಿ ಮಾಡಿದೆ.(ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ವಿಶೇಷ ಲೇಖನವನ್ನು ಓದಿ.)

✸

ನ್ಯಾಯಾಧೀಶರ ಆಸ್ತಿ ಮಸೂದೆ ಮುಂದಕ್ಕೆ

ನ್ಯಾಯಾಧೀಶರು ತಮ್ಮ ಆಸ್ತಿಗಳನ್ನು ಘೋಷಿಸುವ ಕುರಿತಾದ ಮಸೂದೆಯನ್ನು ಯುಪಿಎ ಸರಕಾರ ರಾಜ್ಯ ಸಭೆಯಲ್ಲಿ ವಿರೋಧ ಪಕ್ಷಗಳ ಬಲವಾದ ಪ್ರತಿರೋಧದಿಂದಾಗಿ ಮುಂದಕ್ಕೆ ಹಾಕಿದೆ. ಕೆಲವು ಕಾಂಗ್ರೆಸ್ ಸದಸ್ಯರೂ ಇದನ್ನು ವಿರೋಧಿಸಿದರು ಎಂದು ವರದಿಯಾಗಿದೆ. ಹೈಕೋರ್ಟ್ ಮತ್ತು ಸುಪ್ರಿಂ ಕೋರ್ಟ್. ನ್ಯಾಯಾಧೀಶರು ತಮ್ಮ ಆಸ್ತಿಗಳನ್ನು ಘೋಷಿಸಬೇಕು, ಆದರೆ ಅದನ್ನು ಸಾರ್ವಜನಿಕ ಗೊಳಿಸಲಾಗುವುದಿಲ್ಲ ಎಂಬ ಅಂಶದ ಬಗ್ಗೆ ವಿರೋಧ ಬಂದಿತ್ತು.

✸



'ವಿದ್ಯುತ್ ರಾಜಕೀಯ' - ಕಾದಿದೆ ರೈತರಿಗೆ ಬಡಿತ

ಬಿಜೆಪಿ ದರ್ಬಾರ್‌ನಲ್ಲಿ

'ಸಮಸ್ಯೆಯೇನಿಲ್ಲ - ವಿದ್ಯುತ್ ಪೂರೈಸುವೆವು' ಎನ್ನುವ ಮುಖ್ಯಮಂತ್ರಿ - ಗ್ರಾಮೀಣ ಪ್ರದೇಶಗಳಿಗೆ ಒಟ್ಟಾರೆ 14 ಗಂಟೆ ಪೂರ್ಣ ವಿದ್ಯುತ್ ಕಡಿತ - ಭಾಗಶಃ ಕಡಿತ ಸೇರಿ ದಿನಕ್ಕೆ 19 ಗಂಟೆಗಳ ವಿದ್ಯುತ್ ಕಡಿತವನ್ನು ಘೋಷಿಸುವ ವಿದ್ಯುತ್ ಸಚಿವರ 'ಜುಗಲ್ ಬಂದಿ' ಆಟದ ಬಗೆಗೆ ಹಾಗೂ ಒಟ್ಟಾರೆ ರಾಜ್ಯ ಬಿಜೆಪಿ ಸರ್ಕಾರದ ಹೊಣಗೇಡಿತನದ ಬಗೆಗೆ ಕಳೆದ ಸಂಚಿಕೆಯಲ್ಲಿ ಓದಿದ್ದೀರಿ.

ಈಗ ಬಿಜೆಪಿ ಪಕ್ಷದ ಹೊಣೆಗೇಡಿತನದ ಬಗ್ಗೆ ಓದಿ. ಬೆಂಗಳೂರು ನಗರದಲ್ಲಿ ಎರಡು ದಿನಗಳ ಕಾಲ ನಡೆದ ಬಿಜೆಪಿ ಕಾರ್ಯಕಾರಿಣಿಯಲ್ಲಿ ಲೋಡ್ ಶೆಡ್ಡಿಂಗ್ ವಿದ್ಯುತ್ ಕಡಿತ ಘೋಷಣೆ ಬಗೆಗೆ ಅಸಮಾಧಾನ ವ್ಯಕ್ತವಾಗಿದೆಯಂತೆ. ಬಿಜೆಪಿ ಕಾರ್ಯಕಾರಣಿಯು ವಿದ್ಯುತ್ ಕಡಿತದ ನಿರ್ಧಾರ ಬದಲಿಸಿ ಗುಣಮಟ್ಟದ ವಿದ್ಯುತ್ ಪೂರೈಕೆಗೆ ರಾಜ್ಯ ಸರ್ಕಾರವನ್ನು ಆಗ್ರಹಿಸಿದೆಯಂತೆ! ಆಗ್ರಹಿಸುವುದು ಯಾರು? ಇವರ ಆಗ್ರಹಕ್ಕೆ ಗುರಿಯಾಗುವವರು ಯಾರು? ಆಹಾ ಏನು ನಾಟಕ!

ಬರಿ ನಾಟಕ ಅಲ್ಲ. ಇಲ್ಲೊಂದು ದೊಡ್ಡ ಸಂಚು ಕೂಡಾ ಇದ್ದಂತೆ ಕಾಣುತ್ತಿದೆ. ಕಾರ್ಯಕಾರಿಣಿಯ ತಿರ್ಮಾನವನ್ನು ವಿವರಿಸಿದ ಶಾಸಕ ಸಿ.ಟಿ.ರವಿಯವರು ಅದೇ ಕಾರ್ಯಕಾರಿಣಿಯ ಇನ್ನೊಂದು ಅಮೋಘ ಆಗ್ರಹದ ಕುರಿತು ವಿವರ ಬಹಿರಂಗ ಪಡಿಸಿದ್ದಾರೆ. 'ರೈತರಿಗೆ ನಿರಂತರವಾಗಿ ಗುಣಮಟ್ಟದ ವಿದ್ಯುತ್ ಪೂರೈಸಿ ಅದಕ್ಕೆ ಸರಿಯಾದ ಬಿಲ್ ವಸೂಲಿ ಮಾಡುವಂತೆಯೂ ಕಾರ್ಯಕಾರಿಣಿ ಅಭಿಪ್ರಾಯ ಪಟ್ಟಿದೆ' ಎಂದಿದ್ದಾರೆ ರವಿ. ಅಂದರೆ ರೈತರಿಗೆ ನೀಡಲಾಗುತ್ತಿರುವ ಉಚಿತ ವಿದ್ಯುತ್ ಸೌಲಭ್ಯಕ್ಕೆ ಕತ್ತರಿ ಬೀಳಲಿದೆ ಅಂತಲ್ಲವೇ ಇದರರ್ಥ. ವಿಧಾನಸಭಾ ಚುನಾವಣೆಯಲ್ಲಿ ಗೆದ್ದಾಯ್ತು. ಲೋಕಸಭಾ ಚುನಾವಣೆಯೂ ಮುಗಿಯಿತು. ಚುನಾವಣಾ ಭರವಸೆ ಬಗ್ಗೆ ಮತ್ತೆ ಯಾಕೆ ತಲೆಕೆಡಿಸಿಕೊಳ್ಳಬೇಕು ಅಲ್ಲವೇ?

ಗೋಶಾಲೆ ಹೆಸರಿನಲ್ಲಿ ಕೋಟಿ ಕೋಟಿ........ಟಿ

ಚುನಾವಣಾ ಭರವಸೆಯಂತೆ ಜನರಿಗೆ ಕಡಿಮೆ ಬೆಲೆಯ ಅಕ್ಕಿ, ಗೋಧಿ ಕೊಡುವುದು ಹೋಗಲಿ ಅತ್ಯಗತ್ಯವಾದ ರೇಷನ್‌ಕಾರ್ಡ್ ಕೂಡ ಕೊಡಲಾಗದ ರಾಜ್ಯ ಬಿಜೆಪಿ ಸರ್ಕಾರ ಆಗಸ್ಟ್ 4 ರಂದು ಸಚಿವ ಸಂಪುಟದ ಸಭೆ ನಡೆಸಿ ಘನವಾದ ತೀರ್ಮಾನಗಳನ್ನೇ ತೆಗೆದುಕೊಂಡಿದೆ.

ರಾಜ್ಯ ಪ್ರತಿ ತಾಲ್ಲೂಕಿನಲ್ಲಿಯೂ ಗೋಶಾಲೆಗಳನ್ನು ಸ್ಥಾಪಿಸುವ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಿದ ಸರ್ಕಾರ ಮೊದಲ ಹಂತದಲ್ಲಿ 50 ಗೋಶಾಲೆ ಸ್ಥಾಪನೆಗಾಗಿ 5 ಕೋಟಿ ಬಿಡುಗಡೆ ಮಾಡಲು ಒಪ್ಪಿಗೆ ನೀಡಿದೆ.

ರಾಜ್ಯದಲ್ಲಿ ಜನರಲ್ಲಿ ಕೋಮುಭಾವನೆ ಕೆರಳಿಸಲು, ಅಲ್ಪಸಂಖ್ಯಾತರ ಮೇಲೆ ದಾಳಿ ನಡೆಸಲು, ಜನರ ಆಹಾರದ ಹಕ್ಕನ್ನು ಕಸಿಯಲು ಗೋಸಂರಕ್ಷಣೆ ಎಂಬ ನೆಪ ಹೇಗೆ ಬಳಕೆಯಾಗುತ್ತಿದೆ ಎಂಬುದು ಜಗತ್ತಿಗೆ ಗೊತ್ತಿರುವುದೇ ಆಗಿದೆ. ಈ ನಿಟ್ಟಿನಲ್ಲಿ ಪುಂಡಾಟಿಕೆ, ದಾಳಿ, ದಬ್ಬಾಳಿಕೆ ನಡೆಸುತ್ತಿರುವ ಸಂಘ ಪರಿವಾರದ ಅಂಗ ಸಂಸ್ಥೆಗಳು, ಮುಖಂಡರಿಗೆ 5 ಕೋಟಿ ಬಿಡುಗಡೆ ಬಾರಿ ಖುಷಿ ತಂದಿರಬಹುದು ಅಲ್ಲವೇ?

○

ದುಬಾರಿ ಕನಸು

ಸ್ವಂತಕ್ಕೆ ಒಂದು ಗೂಡು ಮಾಡಿಕೊಳ್ಳಬೇಕು. ಪುಟ್ಟ 'ಕನಸಿನ ಮನೆ' ಕಟ್ಟಿಕೊಳ್ಳಬೇಕು ಎಂದುಕೊಂಡ ಜನಗಳಿಗೆ ರಾಜ್ಯ ಬಿಜೆಪಿ ಸರ್ಕಾರ ಬೆನ್ನ ಮೇಲೆ ಮತ್ತೊಂದು ಬರೆ ಎಳೆದಿದೆ.

ಗಣಿ ಅದಿರು ಸಾಗಿಸುವ ಲಾರಿಗಳಿಂದ ರಸ್ತೆ ಹಾಳಾಗುತ್ತದೆ. ಅಂತಹ ಲಾರಿಗಳಿಗೆ 500 ರಿಂದ 1000 ರೂಪಾಯಿವರೆಗೆ ಶುಲ್ಕ ವಿಧಿಸಲು ರಾಜ್ಯ ಸಚಿವ ಸಂಪುಟ ನಿರ್ಧರಿಸಿದೆ. ಗಣಿ ವ್ಯವಹಾರಗಳಿಂದ ದೊಡ್ಡ ಲಾಭ ಮಾಡುವ ಗಣಿ 'ಧಣಿ' ಗಳಿಂದ ಗಣಿ ಲೂಟಿಕೋರರಿಂದ ಶುಲ್ಕ ವಸೂಲಿ ಮಾಡಿದರೆ ತಪ್ಪೇನಿಲ್ಲ. ಭಾರಿ ಅಕ್ರಮ ಗಣಿ ಲೂಟಿಯ ಸಂಬಂಧ ರೆಡ್ಡಿ ಸಹೋದರ ಮೇಲಿನ ಹಲವು ಮೊಕದ್ದಮೆಗಳನ್ನೇ ವಾಪಸ್ ಪಡೆಯಿತು ರಾಜ್ಯ ಬಿಜೆಪಿ ಸರ್ಕಾರ. ಜನ ಇದನ್ನು ಇನ್ನೂ ಮರೆತಿಲ್ಲ. ಆದರೆ ಮರಳು ಸಾಗಣೆ ಲಾರಿ, ಮರ ಮಟ್ಟು ಸಾಗಿಸುವ ಲಾರಿಗಳಿಗೂ ಶುಲ್ಕ ವಿಧಿಸಲಾಗುವುದಂತೆ. ಈ ಹೊರೆ ನೇರವಾಗಿ ಮನೆ ಕಟ್ಟ ಬಯಸುವ ಜನರ ಹೆಗಲಿಗೆ ಏರುತ್ತದೆ ಎಂಬುದನ್ನು ಹೆಚ್ಚು ವಿವರಿಸಿ ಹೇಳಬೇಕಾಗಿಲ್ಲ. ಬಿಜೆಪಿ ಸರ್ಕಾರ ಖಜಾನೆ ತುಂಬಿಕೊಳ್ಳಲು ಜನರನ್ನೇ ಹುರಿದು ಮುಕ್ಕುವಂತಹ ನಿರ್ಧಾರಗಳನ್ನು ಒಂದೊಂದಾಗಿ ತೆಗೆದುಕೊಳ್ಳುತ್ತಾ ಹೊರಟಿದೆ.

ಜಗದಗಲ

ಶರತ್‌ಚಂದ್ರ


ಅಮೆರಿಕಕ್ಕೆ ನಿರಾಸೆ ತಂದ ಇರಾನ್ ಚುನಾವಣೆ

ಇರಾನ್ ಅಧ್ಯಕ್ಷೀಯ ಚುನಾವಣೆ ಬಗ್ಗೆ ಇದ್ದ ವಿವಾದ ಹಿಂದೆ ಸರಿಯುತ್ತಿದೆ. ಅಹ್ಮದ್ ಅವರ ಆಯ್ಕೆಯನ್ನು ಸುಪ್ರೀಂ ನಾಯಕ ಖಮೇನಿ ನಾಯಕತ್ವದ 'ಗಾರ್ಡಿಯನ್ ಕೌನ್ಸಿಲ್' ಖಚಿತಪಡಿಸಿದ್ದು, ಅವರ ಅಧಿಕಾರ ಗ್ರಹಣಕ್ಕೆ ದಾರಿ ಸುಗಮವಾಗಿದೆ. ಆದರೆ ಸೋತ ಇಬ್ಬರೂ ಅಭ್ಯರ್ಥಿಗಳು - ಮೌಸವಿ ಮತ್ತು ಖರೌಬಿ - ಇನ್ನೂ ತಮ್ಮ ಸೋಲು ಒಪ್ಪಿಕೊಂಡಿಲ್ಲ. ಅವರಿಬ್ಬರೂ ಇನ್ನೂ ಕರೆ ಕೊಡುತ್ತಿದ್ದರೂ, ಬೀದಿ ಪ್ರತಿಭಟನೆಗಳು ತಣ್ಣಗಾಗಿವೆ. ಮಾಜಿ ಅಧ್ಯಕ್ಷರುಗಳಾದ ರಫ್ಸಂಜಾನಿ ಮತ್ತು ಖತಾಮಿ ಇಬ್ಬರೂ ವಿರೋಧಿ ಅಭ್ಯರ್ಥಿಗಳ ಹಿಂದೆ ಇದ್ದು, ಈಗಲೂ ಚುನಾವಣೆ ಸಕ್ರಮತೆ ಬಗ್ಗೆ ಸಂಶಯ ವ್ಯಕ್ತಪಡಿಸುತ್ತಿದ್ದಾರೆ. ರಫ್ಸಂಜಾನಿ ಚುನಾವಣೆ ಸಕ್ರಮ ಅಲ್ಲವೇ ಎಂಬ ಬಗ್ಗೆ ಜನಮತಸಂಗ್ರಹ ನಡೆಸಬೇಕು ಎಂಬ ವಿಚಿತ್ರ ಸಲಹೆ ಮಾಡಿದ್ದಾರೆ. ಆದರೆ ಇರಾನಿನ ಸಂವಿಧಾನದ ಪ್ರಕಾರ 'ಗಾರ್ಡಿಯನ್ ಕೌನ್ಸಿಲ್' ನದ್ದು ಚುನಾವಣೆ ಬಗ್ಗೆ ಕೊನೆಯ ನಿರ್ಧಾರ.

ಈಗ ಇರಾನಿನ ಈ ರಾಜಕೀಯ 'ಬಿಕ್ಕಟ್ಟು' ಬಗ್ಗೆ ಹೆಚ್ಚಿನ ಮಾಹಿತಿ ಬಂದಿದ್ದು ಆ ಬಗ್ಗೆ ಒಂದು ತೀರ್ಮಾನಕ್ಕೆ ಬರಬಹುದು. ಹಲವು ಸ್ಥಳೀಯ ಮತ್ತು ಕೆಲವು ವಿದೇಶೀ ಚುನಾವಣೆ-ಪೂರ್ವ ಸಮೀಕ್ಷೆಗಳು ಸಹ ಅಹ್ಮದ್ ಪರ ಬಹುಮತ ನೀಡಿದ್ದವು ಎಂದು ಬೆಳಕಿಗೆ ಬಂದಿವೆ. ಕೇವಲ ಬಿ.ಬಿ.ಸಿ.-ಎನ್.ಬಿ.ಸಿ. ಸಮೀಕ್ಷೆ ಮಾತ್ರ ಅಹ್ಮದ್ ಹಿಂದೆ ಇದ್ದಾರೆ ಎಂದಿತ್ತು. ಇರಾನಿನ ಇಸ್ಲಾಮಿಕ್ ಆಳ್ವಿಕೆಗೆ ಬೆಂಬಲ ಕಡಿಮೆ ಆಗುತ್ತಿರುವುದು ಮತ್ತು ಅತೃಪ್ತಿ ಹೆಚ್ಚುತ್ತಿರುವುದು ನಿಜವಾದರೂ, ಹಲವು ಪಾಶ್ಚಿಮಾತ್ಯ ವರದಿಗಳು



ಹೇಳಿದಂತೆ ಈಗಿನ ಬಿಕ್ಕಟ್ಟು ವ್ಯವಸ್ಥೆಗೆ ಸವಾಲು ಒಡ್ಡಿಲ್ಲ. ಹೆಚ್ಚೆಂದರೆ ಇಸ್ಲಾಮಿಕ್ ಆಳ್ವಿಕೆಯಲ್ಲಿ ಹಿಂದಿನ ಐಕ್ಯತೆ ಇಲ್ಲ. ಎರಡು ಬಣಗಳ ನಡುವೆ ಮೇಲಾಟ ನಡೆದಿದೆ. ಮೌಸವಿ ಮತ್ತು ಖರೌಬಿ ಮತ್ತು ಅವರ ಹಿಂದಿರುವ ರಫ್ಸಂಜಾನಿ ಮತ್ತು ಖತಾಮಿ ಇರಾನಿನ ಮಧ್ಯಮ ಮತ್ತು ಶ್ರೀಮಂತ ವರ್ಗಗಳ ಬೆಂಬಲ ಪಡೆದಿದ್ದಾರೆ. ಅಧ್ಯಕ್ಷ ಅಹ್ಮದ್ ಇರಾನಿನ ಬಡವರ ನಡುವೆ ಹೆಚ್ಚು ಜನಪ್ರಿಯತೆ ಪಡೆದಿದ್ದಾರೆ ಎನ್ನಲಾಗಿದೆ.



ಅಮೆರಿಕದ ಹಿಂದಿನ ಅಧ್ಯಕ್ಷ ಬುಶ್ ಇರಾನ್ ಸರ್ಕಾರದ ಪದಚ್ಯುತಿಗೆ ಭಾರೀ ಸಂಪನ್ಮೂಲ ಇದ್ದ (ಸುಮಾರು 400 ಶತಕೋಟಿ ಡಾಲರು) ಯೋಜನೆ ಮಾಡಿದ್ದರು ಎಂಬುದು ಬಹಿರಂಗ ಗುಟ್ಟು. ಈ ಬಣಗಳ ನಡುವೆ ತಿಕ್ಕಾಟವನ್ನು ಬಳಸಿ ಅಮೆರಿಕ ತನ್ನ 'ಬಣ್ಣದ ಕ್ರಾಂತಿಗಳ' ತಂತ್ರವನ್ನು ಇರಾನಿನಲ್ಲಿ ಹೂಡಲು ಪ್ರಯತ್ನ ನಡೆಸಿದ ಹಾಗೆ ಕಾಣುತ್ತದೆ. ಆದರೆ ಈ ತಂತ್ರ ವಿಫಲವಾಗಿ ಅಮೆರಿಕಕ್ಕೆ ಮುಖಭಂಗ ಆಗಿದೆ. 1953 ರಲ್ಲಿ ಇರಾನಿನ ಚುನಾಯಿತ ಅಧ್ಯಕ್ಷರನ್ನು ಪದಚ್ಯುತ ಮಾಡಲು ಸಿ.ಐ.ಎ. ಪಿತೂರಿ ನಡೆಸಿತು ಎಂದು (ಕೈರೋ ಭಾಷಣದಲ್ಲಿ) ಒಪ್ಪಿಕೊಂಡ ಮೊದಲ ಅಮೆರಿಕನ್ ಅಧ್ಯಕ್ಷರಾದ ಒಬಾಮಾ ಆಡಳಿತದಿಂದಲೂ ಈ ಪದಚ್ಯುತಿ ಪ್ರಯತ್ನ ಇರಾನಿ ನಾಗರಿಕರನ್ನು ರೊಚ್ಚಿಗೆಬ್ಬಿಸಿದೆ. ರಫ್ಸಂಜಾನಿ ಸಭೆಯೊಂದರಲ್ಲಿ ಅಧ್ಯಕ್ಷ ಅಹ್ಮದ್ ಬೆಂಬಲಿಗರು 'ಅಮೆರಿಕ ಮುರ್ದಾಬ ಎಂಬ ಘೋಷಣೆ ಹಾಕಿದರೆ, ರಫ್ಸಂಜ ಬೆಂಬಲಿಗರು 'ರಶ್ಯಾ ಮುರ್ದಾಬಾದ್' ವ 'ಚೀನಾ ಮುರ್ದಾಬಾದ್' ಘೋಷಣೆ ಗ ಹಾಕಿದರಂತೆ !

ಒಬಾಮಾರ ಅವಾಂತರದಿಂದ ಇರಾನಿನ ಸಂಘರ್ಷ ಕಡಿಮೆ ಮ ಉತ್ತಮ ಸಂಬಂಧ ಏರ್ಪಡಿ ಪ್ರಯತ್ನಕ್ಕೆ ಹಿನ್ನಡೆ ಆಗಿದೆ. ಪ ಪ್ರಾಚ್ಯ ಪ್ರದೇಶದಲ್ಲಿ ಇರಾ ಪ್ರಭಾವ ಬಳ ಸಂಘ ಕಡಿಮೆ ಮಾಡುವ ಪ್ರಯತ್ನಕ್ಕೆ ಸ ಹಿಂಜ ಉಂಟಾಗಿದೆ. ಒಬಾಮಾರ ವಿದೇಶ ನೀತಿ ಬ ನೀತಿಗಿಂತ ಭಾರೀ ಭಿನ್ನ ಇಲ್ಲ ಎಂದು ಇನ್ನೊ ಜಗಜ್ಜಾಹೀರಾಗಿದೆ.

ಅಮೆರಿಕಾದ ಸಹಚರನಾಗುವತ್ತ....

ಪುಟ 7 ರಿಂದ

ದೇಶಗಳಿಂದ ಪಡೆಯಬಹುದು ಎಂಬ ಸರಕಾರದ ದಾವೆ ಕೂಡಾ ಉಳಿಯುವುದಿಲ್ಲ.

ಅಡಿಯಾಳು ಸಂಬಂಧಗಳು

ಕಾಂಗ್ರೆಸ್ ನೇತೃತ್ವದ ಸರಕಾರ ಅಮೆರಿಕಾದೊಂದಿಗೆ ಸ್ಥಾಪಿಸಿದ ಅಡಿಯಾಳುತ್ವದ ಸಂಬಂಧಗಳು ದೂರಗಾಮಿ ಪರಿಣಾಮಗಳನ್ನು ಬೀರಲಿವೆ. ಬಿಜೆಪಿ ನೇತೃತ್ವದ ಸರಕಾರದ ಕಾಲದಲ್ಲಿ ಭಾರತ ಅಮೆರಿಕಾದ "ಪ್ರಜಾಪ್ರಭುತ್ವಗಳ ಸಮುದಾಯ"(ಸಿಒಡಿ) ಎಂಬ ತಾತ್ವಿಕ ಪ್ರಯತ್ನಕ್ಕೆ ಒಪ್ಪಿಗೆ ಸೂಚಿಸಿತು. ಭಾರತ "ಪ್ರಜಾಪ್ರಭುತ್ವಗಳ ಸಮುದಾಯ"ದ ಸಂಯೋಜಕ ಗುಂಪಿನ ಭಾಗವಾಯಿತು. ಆಗಿದ್ದ ಕ್ಲಿಂಟನ್ ಆಡಳಿತ ಮುಕ್ತ ಮಾರುಕಟ್ಟೆಗಳು ಮತ್ತು ಪ್ರಜಾಪ್ರಭುತ್ವಗಳು ಜೊತೆಜೊತೆಯಾಗಿ ಸಾಗುತ್ತವೆ ಎಂಬ ತಾತ್ವಿಕ ಆಧಾರದಲ್ಲಿ ಈ ವೇದಿಕೆಯನ್ನು ಪ್ರಾಯೋಜಿಸಿತು. ಇದರ ಸ್ಥಾಪನಾ ಮಂತ್ರಿಮಟ್ಟದ ಸಮ್ಮೇಳನ ಜೂನ್ 2000ದಲ್ಲಿ ಪೋಲಂಡಿನ ವಾರ್ಸಾದಲ್ಲಿ ನಡೆಯಿತು. ಈ ಸಿಒಡಿಗೆ ಅಮೆರಿಕಾ ಸರಕಾರದ ನ್ಯಾಶನಲ್ ಎಂಡೋಮೆಂಟ್ ಫಾರ್ ಡೆಮಾಕ್ರಸಿ(ಎನ್‌ಇಡಿ)ಯ ಬೆಂಬಲವಿದೆ. ಈ ಎನ್‌ಇಡಿ ಸರ್ಬಿಯ, ಉಕ್ರೇನ್, ಜಾರ್ಜಿಯ, ನಿಕರಗುವಾ ಮತ್ತು ಇನ್ನೂ ಹಲವೆಡೆ "ಪ್ರಜಾಪ್ರಭುತ್ವ ಆಂದೋಲನಗಳು", "ವರ್ಣಕ್ರಾಂತಿಗಳು" ಮುಂತಾದವುಗಳಿಗೆ ಹಣ ಸಹಾಯ ಒದಗಿಸಿರುವಂತದ್ದು. ಇತ್ತೀಚಿಗೆ ಜುಲೈ 11 ಮತ್ತು 12ರಂದು ಲಿಸ್ಬನ್‌ನಲ್ಲಿ ಈ ಸಿಒಡಿಯ 5ನೇ ಮಂತ್ರಿಮಟ್ಟದ ಸಮ್ಮೇಳನದಲ್ಲಿ ವಿದೇಶಾಂಗ ವ್ಯವಹಾರಗಳ ರಾಜ್ಯ ಮಂತ್ರಿ ಶಶಿ ಥರೂರ್ ಭಾಗವಹಿಸಿದ್ದರು ಎಂಬುದು ಬಹಳ ಮಂದಿಯ ಗಮನಕ್ಕೆ ಬಂದಿಲ್ಲ. ಕಾಂಗ್ರೆಸ್ ನೇತೃತ್ವದ ಸರಕಾರ ಅಮೆರಿಕಾ ಪ್ರಾಯೋಜಿತ ಮುಕ್ತ ಮಾರುಕಟ್ಟೆಗಳು ಮತ್ತು ಪ್ರಜಾಪ್ರಭುತ್ವದ ಗಾಡಿ ಹತ್ತಿದೆ.

ಜೂನ್ ತಿಂಗಳಲ್ಲಿ ವಾಣಿಜ್ಯ ಮಂತ್ರಿ ಆನಂದ ಶರ್ಮರವರ ವಾಶಿಂಗ್ಟನ್ ಭೇಟಿಯ ಫಲಿತಾಂಶವಾಗಿ ಡಬ್ಲ್ಯು?ಟಿಒ ದ ಮಾತುಕತೆಗಳ ದೋಹಾ ಸುತ್ತನ್ನು ಮತ್ತೆ ಆರಂಭಿಸಲು ಭಾರತ ಬದ್ಧವಾಗುವಂತಾಗಿದೆ. ಕೃಷಿ ಮತ್ತು ನಾಮಾ(ಕೃಷಿಯೇತರ ಮಾರುಕಟ್ಟೆ ಅವಕಾಶ) ಮುಂತಾದ ವಿಷಯಗಳ ಮೇಲೆ ಇದುವರೆಗೆ ತಳೆದ ತನ್ನ ದೃಢ ನಿಲುವಿನಿಂದ ಅದು ಹಿಂದಕ್ಕೆ ಸರಿಯಬಹುದು ಎಂದು ಭಯ ಉಂಟಾಗಿದೆ.

ಶರ್ಮ್-ಎಲ್-ಶೈಕ್‌ನಲ್ಲಿ ನಡೆದ ಅಲಿಪ್ತ ಆಂದೋಲನದ ಶೃಂಗ ಸಭೆಯ ವೇಳೆಗೆ ಪ್ರಕಟಿಸಿದ ಭಾರತ-ಪಾಕಿಸ್ತಾನ ಜಂಟಿ ಹೇಳಿಕೆ ಬಹಳಷ್ಟು ವಿವಾದ ಉಂಟು ಮಾಡಿದೆ. ಇಲಿ ಪ್ರಶ್ನೆ ಪಾಕಿಸ್ತಾನದೊಂದಿಗೆ ಸಂವಾದದ ಅಗತ್ಯವಿದೆಯೇ ಇಲ್ಲವೇ ಎಂದಲ್ಲ, ಬದಲಿಗೆ ಯುಪಿಎ ಸರಕಾರ ತಳೆಯುವ ನಿಲುವುಗಳು ವಾಶಿಂಗ್ಟನ್‌ನಿಂದ ಬರುವ "ಸಲಹೆ"ಗಳ ಫಲಿತಾಂಶವಾಗಿರುತ್ತವೆ ಎಂಬ ಸಂದೇಹ. ಪಾಕಿಸ್ತಾನವಾಗಲಿ, ಅಫಘಾನಿಸ್ತಾನವಾಗಲಿ ಒಂದು ಸ್ವತಂತ್ರ ನಿಲುವು ಅಗತ್ಯ.

ಭಾರತ-ಅಮೆರಿಕಾ ಸಾಮರಿಕ ಮೈತ್ರಿ ನಮ್ಮ ವಿದೇಶಾಂಗ ನೀತಿಯ ಮೇಲಷ್ಟೇ ಅಲ್ಲ, ನಮ್ಮ ಆಂತರಿಕ ನೀತಿ ನಿರ್ಧಾರಣೆಗಳ ಇತರ ವಲಯಗಳಲ್ಲೂ ಪ್ರಭಾವ ಬೀರುತ್ತಿದೆ. ಕ್ಲಿಂಟನ್ ಭೇಟಿಯ ಜಂಟಿ ಹೇಳಿಕೆಯಲ್ಲಿ ಆರ್ಥಿಕ ಮತ್ತು ರಾಜಕೀಯ ವಲಯಗಳಲ್ಲಿ ಇನ್ನಷ್ಟು ಇಂತಹ ಹಸ್ತಕ್ಷೇಪಗಳ ಭರವಸೆ ಇದೆ.

ಪ್ರಧಾನ ಮಂತ್ರಿಗಳು ಮತ್ತು ಯುಪಿಎ ಸರಕಾರ ಲೋಕಸಭಾ ಚುನಾವಣಾ ತೀರ್ಪಿನಿಂದ ತಪ್ಪು ಪಾಠಗಳನ್ನು ಕಲಿತಂತಿದೆ. ಅದು ರಾಷ್ಟ್ರೀಯ ಸಾರ್ವಭೌಮತೆಯ ವಿಷಯದಲ್ಲಿ ರಾಜಿ ಮಾಡಿಕೊಳ್ಳಲು ಮತ್ತು ಭಾರತವನ್ನು ಅಮೆರಿಕಾದ ಸಹಚರನಾಗಿ ಪರಿವರ್ತಿಸಲು ಅವರಿಗೆ ಪರವಾನಿಗೆ ಕೊಟ್ಟಿಲ್ಲ.

ಪಂಚಾಯತುಗಳಿಗೆ ಅನುದಾ

ಪುಟ 9 ರಿಂದ

ಪ್ರಮುಖವಾಗಿ ಸಂಬಳ ಹೆಚ್ಚ ಮಾಡಬೇಕೆಂಬ ಅಂದರೆ ಜವಾ ಕಸಗುಡಿಸುವವರಿಗೆ 6000 ರೂ. ಪಂಪ ಆಪರೇಟರ್ 6900 ರೂ. ಬಿಲ್ ಕಲೆಕ್ಟರ ಕಂಪ್ಯೂಟರ್ ಆಪರೇಟರ್, ಗುಮಾಸ್ತರಿಗೆ 7,8 ರೂ ನೀಡಬೇಕೆಂಬ ಬೇಡಿಕೆ ಸರ್ಕಾರ ಮುಂದಿಟ್ಟಿದ್ದೇವೆ. ಜಿಲ್ಲಾ ಪಂಚಾಯತಿ ನೌಕರರು ತಾಲ್ಲೂಕು ಪಂಚಾಯತಿ ನೌಕರರು, ಖಾಯ ನೌಕರರಾಗಿರುವಾಗ ಗ್ರಾಮ ಪಂಚಾಯತಿ ನೌಕರ ಮಾತ್ರ ಖಾಯಂ ಅಲ್ಲವೆಂಬ ಸರ್ಕಾರದ ಧೋರ ನೌಕರ ವಿರೋಧಿಯಾಗಿದೆ. ಗ್ರಾಮ ಪಂಚಾ ನೌಕರರನ್ನು ಖಾಯಂ ಮಾಡಬೇಕು. ಅದಕ್ಕಾ ಗ್ರಾಮ ಪಂಚಾಯತಿ ನೌಕರರು, ಅಂಗನವಾಡಿ ಬಿಸಿಯೂಟ, ಗುತ್ತಿಗೆ ಕಾರ್ಮಿಕರು ಒಂದುಗ ಸೆಪ್ಟೆಂಬರ್ 7 ರಿಂದ ಸೆಪ್ಟೆಂಬರ್ 11 ರವರ ತಾಲ್ಲೂಕು ಕಛೇರಿ ಮುಂದೆ ಮತ್ತು ಸೆಪ್ಟೆಂಬರ 15 ರಂದು ಜಿಲ್ಲಾಧಿಕಾರಿ ಕಛೇರಿಯ ಮುಂ ಹೋರಾಟ ನಡೆಸುವ ಬಗ್ಗೆ ಈ ಸಮ್ಮೇಳನದ ಚರ್ಚಿಸಬೇಕಾಗಿದೆ.


ಸಿಐಟಿಯು ಸಹ ರಾಜ್ಯದ ಗ್ರಾಮೀ ಕಾರ್ಮಿಕರಿಗೆ- ನೌಕರರಿಗೆ ಕನಿಷ್ಟ ವೇತನ 600 ರೂ. ನೀಡಬೇಕೆಂದು ಬೆಂಗಳೂರ ಬಿ.ಎಂ.ಆರ್.ಡಿ. ವ್ಯಾಪ್ತಿಯಲ್ಲಿ 10,000 ರೂ ನೀಡಬೇಕೆಂದು ಸರ್ಕಾರವನ್ನು ಒತ್ತಾಯಿಸಿದ ಲಕ್ಷಗಟ್ಟಲೆ ಸಹಿ ಸಂಗ್ರಹ ನಡೆಸಿ ಫೆಬ್ರವರಿ ರಂದು ಸಚಿವ ರಾಮಚಂದ್ರಗೌಡರ ರಾಜ್ಯಸರ್ಕಾರದ ಪರವಾಗಿ ಮನವಿ ಸ್ವೀಕರಿಸಿದರು ಆದರೆ ಸರ್ಕಾರ ಈ ಬಗ್ಗೆ ಯಾವುದೇ ಕ್ರಮ ವಹಿಸದ ಬಂಡೆಕಲ್ಲಾಗಿದೆ.

ಆದ್ದರಿಂದ ಸಿಐಟಿಯು ರಾಜ್ಯದಲ್ಲಿ ಸಪ್ಟೆಂಬರ ತಿಂಗಳಲ್ಲಿ ಕನಿಷ್ಟ ವೇತನಕ್ಕಾಗಿ ಹೋ ತೀವ್ರಗೊಳಿಸಲು ನಿರ್ಧರಿಸಿದೆ. ನಮ್ಮ ಸಂಪೂರ್ಣ ಬೆಂಬಲ ನೀಡಬೇಕು.



ಬಿಸಿಯೇರುತ್ತಿರುವ ಜಾಗತಿಕ ತಾಪಮಾನಕ್ಕೆ ಚೀನಿಯರ ಚಿಕಿತ್ಸೆ

ತ್ತೀಚೆಗೆ ಇಟಲಿಯಲ್ಲಿ ಸೇರಿದ್ದ ಸಭೆಯಲ್ಲಿ ತ್ತಿರುವ ಜಾಗತಿಕ ತಾಪಮಾನವನ್ನು ತಡೆಗಟ್ಟಲು 8 ರಾಷ್ಟ್ರಗಳು ಕ್ರಮ ಕೈಗೊಳ್ಳುತ್ತವೆಂದು ಕ್ಷಿಸಲಾಗಿತ್ತು. ಆದರೆ, ಅವು ಯಾವುದೇ ನಿರ್ದಿಷ್ಟ ಹಾಕಿಕೊಳ್ಳದೆ, ಆರ್ಥಿಕ ಹಿಂಜರಿಕೆ ವುದರಿಂದ ಕೈಗಾರಿಕಾಭಿವೃದ್ಧಿಗೆ ಇನ್ನಷ್ಟು ಪೆಟ್ಟು ರದೆಂಬ ನೆಪವೊಡ್ಡಿ ಸಭೆಯಲ್ಲಿ ಅವು ದವು. ಆದರೆ, ಮಾಲಿನ್ಯವನ್ನು ತಡೆಗಟ್ಟುವ ನಲ್ಲಿ ಚೀನಾ ವಿಶ್ವ ಆರ್ಥಿಕ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಡ ಚೆನ್ನಾಗಿ ಬಳಸಿಕೊಳ್ಳುತ್ತಿದೆ. ಮಾಲಿನ್ಯಕ್ಕೆ ವಾಣ ಹಾಕುವ ಹಸಿರು ವಿದ್ಯುತ್ ಶಕ್ತಿಯಲ್ಲಿ ನಾ ದಾಪುಗಾಲು ಹಾಕುತ್ತಿದೆ. ತನ್ನ ದೇಶದ ತೆಯ ಹೊಟ್ಟೆ ತುಂಬಿಸಲು ಹೆಣಗುತ್ತಿದ್ದದ್ದು ಈಗ




ತಿಹಾಸ ಮಾತ್ರ. ಕ್ರಾಂತಿಯ ನಂತರ ಬೃಹತ್ ಗಾರಿಕಾಭಿವೃದ್ಧಿಗೆ ಆದ್ಯತೆ ನೀಡುವ ಮತ್ತು ಯನ್ನು ಕೃಷಿಕೂಲಿಕಾರರು ಮತ್ತು ರೈತರಿಗೆ ಡುವ ಮೂಲಕ ದೇಶದ ಆರ್ಥಿಕ ಸ್ವಾವಲಂಬನೆಗೆ ನಾದಿ ಹಾಕಿತ್ತು. ಚೀನಾದಲ್ಲಿ 72 ಕೋಟಿ ಜನತೆ ಗ್ರಾಮೀಣವಾಸಿಗಳಾಗಿದ್ದರೆ, ಸುಮಾರು 61 ಕೋಟಿ ಗರವಾಸಿಗಳಿದ್ದಾರೆ. ಕೈಗಾರಿಕಾಭಿವೃದ್ಧಿಯಿಂದ ಹಜವಾಗಿ ಕೈಗಾರಿಕಾ ಮಾಲಿನ್ಯವು ಸಹ ಜೊತೆಜೊತೆಗೆ ದಾಪುಗಾಲು ಹಾಕುತ್ತಿತ್ತು.

ಸಿರಿನ ಚಿತ್ತಾರ ಬಿಡಿಸಲು ೀನಾ ಬೃಹತ್ ಯೋಜನೆ

ವಿಶ್ವ ಬಂಡವಾಳಶಾಹಿ ವ್ಯವಸ್ಥೆಯು ಳುವಳಿಯಾಗಿ ಬಂದ ಆರ್ಥಿಕ ಬಿಕ್ಕಟ್ಟಿನ ಬಿಸಿ ಮಾಜವಾದಿ ಚೀನಾವನ್ನು ಕೂಡ ತಟ್ಟಿದೆ. ಆದರೆ ಬಿಸಿ ಜನಸಾಮಾನ್ಯರನ್ನು ಆವರಿಸಿಕೊಳ್ಳುವ ಮೊದಲೇ ಚೀನಾ ಸರ್ಕಾರ 30 ಲಕ್ಷ ಕೋಟಿ ರೂಪಾಯಿ ಮೊತ್ತದ ಪ್ಯಾಕೆಜನ್ನು ಜಾರಿಗೆ ತಂದಿತು. ದರಲ್ಲಿ ಶೇ. 40ಕ್ಕಿಂತಲೂ ಹೆಚ್ಚಿನ ಹಣವನ್ನು ಪರಿಸರ ಣೆಗೆ ಪೂರಕವಾದ ಯೋಜನೆಗಳ ಮೇಲೆ ಯೋಗ ಮಾಡುತ್ತಿದೆ. ಇದರಿಂದ ಉದ್ಯೋಗ ವಕಾಶಗಳು ಕುಸಿಯದಂತೆ ನೋಡಿಕೊಳ್ಳಲಾಗಿದೆ.

ಶೇ. 70ಕ್ಕಿಂತಲೂ ಹೆಚ್ಚು ವಿದ್ಯುತ್ ಉತ್ಪಾದನೆಗೆ ಚೀನಾ ಕಲ್ಲಿದ್ದಲನ್ನೇ ಅವಲಂಬಿಸಿದೆ. ಶೇ. 21 ರಷ್ಟು ಜಲವಿದ್ಯುತ್ ಮತ್ತು ಶೇ. 1.1ರಷ್ಟು ಪರಮಾಣು ವಿದ್ಯುತ್ ಬಳಸಲಾಗುತ್ತಿದೆ. ಈಗ ಕಲ್ಲಿದ್ದಲಿನ ಬಳಕೆ ತಗ್ಗಿಸಿ ನವೀಕರಿಸಬಹುದಾದ ಇಂಧನಗಳಾದ ಸೋಲಾರ್ ಅಂದರೆ ಸೌರಶಕ್ತಿ, ವಾಯು ಶಕ್ತಿ, ಇತ್ಯಾದಿಗಳನ್ನು ಹೆಚ್ಚೆಚ್ಚು ಬಳಸಲು ಕ್ರಮಕೈಗೊಂಡಿದೆ. 2020ರ ವೇಳೆಗೆ ಕಲ್ಲಿದ್ದಲು ಮತ್ತು ತೈಲವನ್ನು ಇಂಧನವಾಗಿ ಬಳಸಿ ವಿದ್ಯುತ್ ತಯಾರಿಸುವುದಕ್ಕಿಂತ ಹೆಚ್ಚು ಬಂಡವಾಳವನ್ನು ನವೀಕರಿಸಬಹುದಾದ ಇಂಧನ ಮತ್ತು ಪರಮಾಣು ಇಂಧನಗಳ ಮೇಲೆ ವಿನಿಯೋಗಿಸಲು ಯೋಜನೆ ರೂಪಿಸಿದೆ.

ಡನ್ವಾಂಗ್ ಎಂಬ ಗುಡ್ಡಗಾಡು ಪ್ರದೇಶದಲ್ಲಿ ಸರಣಿಯೋಪಾದಿಯ ಸೋಲಾರ್ ಶಕ್ತಿ ಮತ್ತು ವಾಯುಶಕ್ತಿ (ವಿಂಡ್ ಪವರ್) ಆಧಾರಿತ 6 ವಿದ್ಯುತ್ ತಯಾರಿಕಾ ಘಟಕಗಳನ್ನು ಸ್ಥಾಪಿಸಿದೆ. ಒಂದೊಂದೂ ವಾಯುಶಕ್ತಿ ಘಟಕದ ಸಾಮರ್ಥ್ಯ ಎಷ್ಟಿದೆಯೆಂದರೆ 16 ದೊಡ್ಡ ಕಲ್ಲಿದ್ದಲು ಆಧಾರಿತ ವಿದ್ಯುತ್ ಘಟಕಗಳಿಗಿಂತ ದೊಡ್ಡದಿದೆ. ಇಷ್ಟೊಂದು ಬೃಹತ್ ಸಾಮರ್ಥ್ಯದ ವಾಯುಶಕ್ತಿ ಆಧಾರಿತ ವಿದ್ಯುತ್ ಘಟಕ ವಿಶ್ವದ ಇನ್ನಾವುದೇ ಮೂಲೆಯಲ್ಲೂ ಇಲ್ಲವಂತೆ. 2020ರ ವೇಳೆಗೆ 30,000 ಮೆಗಾವ್ಯಾಟ್ ನಷ್ಟು ವಿದ್ಯುತ್ತನ್ನು ವಾಯುಶಕ್ತಿಯಿಂದಲೇ ತಯಾರಿಸಲು ಯೋಜಿಸಿತ್ತಾದರೂ ಅಷ್ಟೂ ಗುರಿಯನ್ನು ಈ ವರ್ಷವೇ ಸಾಧಿಸಲಾಗುತ್ತಿದೆ. ಆದ್ದರಿಂದ ಅದರ ಗುರಿಯನ್ನು ಈಗ 1ಲಕ್ಷ ಮೆಗಾವ್ಯಾಟ್‌ಗೆ ಹೆಚ್ಚಿಸಲಾಗಿದೆ. ಆದರೆ ಇಂಥಹ ಗುಡ್ಡಗಾಡು ಪ್ರದೇಶಗಳಲ್ಲಿ ಧೂಳಿನ ಬಿರುಗಾಳಿ ಎದ್ದಾಗ ಅದು ಸೋಲಾರ್ ಪ್ಯಾನಲ್‌ಗಳೆಲ್ಲವನ್ನು ಸಂಪೂರ್ಣವಾಗಿ ಮುಚ್ಚಿಬಿಡುವುದರಿಂದ ವಿದ್ಯುತ್ ಅಡಚಣೆ ಯುಂಟಾಗುತ್ತದೆ. ಅಂಥಹ ಸಂದರ್ಭದಲ್ಲಿ ಸೋಲಾರ್ ಪ್ಯಾನೆಲ್‌ಗಳನ್ನು ಕೆಲಸಗಾರರು ಚೆನ್ನಾಗಿ




ತಿಕ್ಕಿ ಧೂಳು ಕೊಡವಿದ ನಂತರವಷ್ಟೆ ಅವು ಕಾರ್ಯಾರಂಭ ನಡೆಸುತ್ತವೆ. 2020ರ ವೇಳೆಗೆ 10,000 ಮೆಗಾ ವ್ಯಾಟ್ ಸೋಲಾರ್ ವಿದ್ಯುತ್ ತಯಾರಿಸುವ ಗುರಿ ಹೊಂದಿದೆ. ಇದಕ್ಕೆ ಹೂಡಲಾಗುವ ಬಂಡವಾಳದ ಮೇಲೆ ಶೆ. 50ರಷ್ಟು ಸಬ್ಸಿಡಿ ನೀಡಲಾಗುತ್ತದೆ.

ಚೀನಾ ಹಸಿರು ಯೋಜನೆಗಳಿಂದ ಅಮೇರಿಕಾ ಪಾಠ

ಜಗತ್ತಿನ ಮಾಲಿನ್ಯದಲ್ಲಿ ಶೇ. 30ರಷ್ಟನ್ನು ಪಾಲು ಹೊಂದಿರುವ ವಿಶ್ವದ ಅತಿದೊಡ್ಡ ಮಲಿನಕಾರಕ ದೇಶ ಎಂದು ಕುಖ್ಯಾತಿ ಪಡೆದಿರುವ ಅಮೇರಿಕಾ ನವೀಕರಿಸಬಹುದಾದ ಇಂಧನಗಳಿಂದ ವಿದ್ಯುತ್ ತಯಾರಿಸಲು ಚೀನಾ ರೂಪಿಸಿರುವ ಯೋಜನೆಗಳನ್ನು ತಾನು ಅಳವಡಿಸಿಕೊಳ್ಳಲು ಅಮೇರಿಕಾದ ತಜ್ಞರು ಪರಿಶೀಲಿಸುತ್ತಿದ್ದಾರಂತೆ. ಚೀನಾದ ದೊಡ್ಡ ವಿದ್ಯುತ್ ತಯಾರಿಕಾ ಕಂಪನಿಗಳು ಇಂತಿಷ್ಟು ಪ್ರಮಾಣದ ವಿದ್ಯುತ್ತನ್ನು ನವೀಕರಿಸಬಹುದಾದ ಇಂಧನಗಳಿಂದ ತಯಾರಿಸಬೇಕೆಂಬ ಕಾನೂನು ಬದ್ದ ಷರತ್ತು ವಿಧಿಸಲಾಗಿದೆ.

ಕಲ್ಲಿದ್ದಲಿನಿಂದ ಉಂಟಾಗುವ ಮಾಲಿನ್ಯ ತಡೆಗೆ ಹಲವು ತಂತ್ರಜ್ಞಾನಗಳು



ಚೀನಾ ಕಲ್ಲಿದ್ದಲಿನ ಬಳಕೆಯನ್ನು ನಿಧಾನವಾಗಿ ತಗ್ಗಿಸುತ್ತಿದೆ ನಿಜ. ಆದರೆ ದೇಶದ ಬಹುಪಾಲು ವಿದ್ಯುತ್ ತಯಾರಿಕೆಯು ಇನ್ನೂ ಕಲ್ಲಿದ್ದಲಿನ ಮೇಲೆ ನಿಂತಿದೆ. ತಾಪಮಾನ ಬಿಸಿಯೇರುವಲ್ಲಿ ಕಲ್ಲಿದ್ದಲನ್ನು ಉರುವಲಾಗಿ ಬಳಸುವಾಗ ಅದರಿಂದ ಬಿಡುಗಡೆ ಯಾಗುವ ಇಂಗಾಲದ ಆಕ್ಸೈಡುಗಳು ಪ್ರಮುಖ ಪಾತ್ರ ವಹಿಸುತ್ತವೆ. ಇಂಥಹ ಇಂಗಾಲ ಬಿಡುಗಡೆಯನ್ನು ತಗ್ಗಿಸಲು ಚೀನಾ ಹಲವು ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಿದೆ.

ಇಂಗಾಲ ಹಿಡಿದಿಡುವ ತಂತ್ರಜ್ಞಾನ

ದೇಶದ ಮೊದಲ ಇಂಗಾಲ ಹಿಡಿದಿಡುವ ತಂತ್ರಜ್ಞಾನವನ್ನು ಬೀಜಿಂಗ್ ಉಷ್ಣಸ್ಥಾವರದಲ್ಲಿ ಅಳವಡಿಸಲಾಗಿದೆ. ಇದರಲ್ಲಿ ವರ್ಷಕ್ಕೆ ಸುಮಾರು 3,000 ಟನ್ ಇಂಗಾಲವನ್ನು ಸಂಗ್ರಹಿಸಿ ಅದನ್ನು ಶುದ್ದಿಗೊಳಿಸಿ ಸ್ಥಳೀಯ ಸೋಡಾ ತಯಾರಿಕಾ ಘಟಕಗಳಿಗೆ ಮಾರಾಟ ಮಾಡಲಾಗುತ್ತದೆ. ಇದೇ ವರ್ಷ ಎರಡನೇ ಯೋಜನೆಯೊಂದನ್ನು ಕೈಗೆತ್ತಿಕೊಂಡಿದ್ದು ಇದರಲ್ಲಿ ವಾರ್ಷಿಕವಾಗಿ 1ಲಕ್ಷ ಟನ್ ಇಂಗಾಲವನ್ನು ಸಂಗ್ರಹಿಸಲಾಗುವುದು ಎಂದು ಹೇಳಲಾಗಿದೆ!

ಕಲ್ಲಿದ್ದಲಿನ ಪದರು ಮತ್ತು ಗಣಿಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಮಾಲಿನ್ಯಕಾರಕ ಅನಿಲವನ್ನು ಪ್ರತ್ಯೇಕವಾಗಿ ಸಂಗ್ರಹಿಸದೇ ಇರುವುದರಿಂದ ಕೆಲವೊಮ್ಮೆ ಅವುಗಳು ಗಣಿಗಳಲ್ಲಿ ಸ್ಫೋಟಗಳನ್ನು ಉಂಟು ಮಾಡುತ್ತವೆ. ಇಲ್ಲವಾದರೆ ವಾತಾವರಣಕ್ಕೆ ಬಿಡುಗಡೆಯಾಗಿ ಮಾಲಿನ್ಯ ಉಂಟು ಮಾಡುತ್ತವೆ. ಇಂಥಹ ಅನಿಲಗಳನ್ನು ನಿಯಂತ್ರಿಸಲು ಶೈತ್ಯಾಗಾರದಂಥ ಯಂತ್ರವನ್ನು ಅಭಿವೃದ್ಧಿಪಡಿಸ ಲಾಗಿದ್ದು ಇದರಲ್ಲಿ ಕಲ್ಲಿದ್ದಲಿನ ಪದರುಗಳಲ್ಲಿರುವ ಅನಿಲವನ್ನು ಸಂಗ್ರಹಿಸಿ ಸುಮಾರು 200 ಡಿಗ್ರಿ ಮೈನಸ್ ಉಷ್ಣಾಂಶದಲ್ಲಿ ತಂಪುಗೊಳಿಸಲಾಗುತ್ತದೆ. ಇಷ್ಟು ಕಡಿಮೆ ಉಷ್ಣಾಂಶದಲ್ಲಿ ಅನಿಲದಲ್ಲಿರುವ ಮಿಥೇನ್,




ಆಮ್ಲಜನಕ ಮತ್ತು ಸಾರಜನಕಗಳನ್ನು ಒಂದಕ್ಕೊಂದು ಪ್ರತ್ಯೇಕಿಸಲಾಗುತ್ತದೆ. ಇದರಿಂದ ಮಿಥೇನನ್ನು ಪ್ರತ್ಯೇಕಿಸಿ ಇಂಧನವಾಗಿ ಅದನ್ನು ಮಾರಾಟ ಮಾಡಲಾಗುತ್ತಿದೆ. ಇಲ್ಲವಾದಲ್ಲಿ ಮಿಥೇನ್ ವಾತಾವರಣಕ್ಕೆ ಬಿಡುಗಡೆಯಾಗಿ ಮಾಲಿನ್ಯಕ್ಕೆ ಕಾರಣವಾಗುತ್ತದೆ. ನಮ್ಮಲ್ಲಿ ಗೋಬರ್ ಗ್ಯಾಸ್ ಘಟಕಗಳಲ್ಲಿ ಮಿಥೇನ್ ಉತ್ಪತ್ತಿಯಾಗಿ ಅದನ್ನೇ ನಾವು ಇಂಧನವಾಗಿ ಬಳಸುವುದು.

ಮತ್ತೊಂದು ತಂತ್ರಜ್ಞಾನದಲ್ಲಿ ಕಲ್ಲಿದ್ದಲನ್ನು ಕೆಲವೊಮ್ಮೆ ಅನಿಲಸ್ಥಾವರದೊಳಗೆ ಶುದ್ದಿಗೊಳಿಸ ಲಾಗುತ್ತದೆ. ಇದರಲ್ಲಿ ಕಲ್ಲಿದ್ದಲಿನಿಂದ ಬಿಡುಗಡೆ ಯಾಗುವ ಅನಿಲಗಳನ್ನು ಸಂಗ್ರಹಿಸಿ ಅದರಲ್ಲಿರುವ ಇಂಗಾಲವನ್ನು ಪ್ರತ್ಯೇಕಿಸಲಾಗುತ್ತದೆ. ಹೀಗೆ ಪ್ರತ್ಯೇಕಿಸಿದ ಅನಿಲವನ್ನು ಶುದ್ದಿಗೊಳಿಸಲು ಹೆಚ್ಚು ವೆಚ್ಚ ತಗಲುವುದರಿಂದ, ಈ ಇಂಗಾಲವನ್ನು ಕಲ್ಲಿದ್ದಲು ಗಣಿಗಳ ನಿರುಪಯುಕ್ತ ಗುಂಡಿಗಳಲ್ಲಿ, ಅಥವಾ ಸಾಗರದ ತಳಮಟ್ಟದಲ್ಲಿ ಭೂಮಿಯೊಳಗೆ ತುಂಬಲಾಗುತ್ತದೆ. ಕೆಲವೊಮ್ಮೆ ಈ ಇಂಗಾಲವನ್ನು ಇತರೆ ಲೋಹ ವಸ್ತುಗಳೊಂದಿಗೆ ಸೇರಿಸಿ ಘನರೂಪಕ್ಕೆ ತರಲಾಗುತ್ತದೆ.

ಅಮೇರಿಕಾದಲ್ಲಿ ಚೀನೀ ತಂತ್ರಜ್ಞಾನ ಬಳಕೆ

ಚೀನೀ ಸೆಟ್ಟು ಎಂದೇ ಜನಪ್ರಿಯವಿರುವ ಅಗ್ಗದ ಉತ್ಪನ್ನಗಳನ್ನು ಚೀನಾ ತಯಾರಿಸುವಂತೆಯೆ ಅತ್ಯುನ್ನತ ತಂತ್ರಜ್ಞಾನ ಸಂಶೋಧನೆಯಲ್ಲೂ ಚೀನಾ ಮುಂಚೂಣಿಯಲ್ಲಿದೆ. ಚೀನಾದ ಉಷ್ಣ ವಿದ್ಯುತ್ ಸಂಶೋಧನಾ ಸಂಸ್ಥೆಯು ಅಭಿವೃದ್ಧಿಪಡಿಸಿರುವ ತಂತ್ರಜ್ಞಾನದಲ್ಲಿ ಕಲ್ಲಿದ್ದಲ್ಲು ಕೃತಕ ಅನಿಲವಾಗಿ ಪರಿವರ್ತಿಸಲಾಗುತ್ತದೆ. ಹೀಗೆ ಪರಿವರ್ತನೆಯಾದ ಅನಿಲದಲ್ಲಿ ಮಲಿನಕಾರಕ ಅನಿಲಗಳಾದ ಪಾದರಸ ಮತ್ತು ಗಂಧಕಗಳನ್ನು ಕಲ್ಲಿದ್ದಲು ಅನಿಲದಿಂದ



ಪ್ರತ್ಯೇಕಿಸಲಾಗುತ್ತದೆ. ಪಾದರಸ ಮತ್ತು ಗಂಧಕ ರಹಿತ ಅನಿಲವನ್ನು ಇಂಧನವಾಗಿ ವಿದ್ಯುತ್ ಸ್ಥಾವರಗಳಲ್ಲಿ ಬಳಕೆ ಮಾಡಲಾಗುತ್ತದೆ. ಇದರಿಂದ ಪಾದರಸ ಮತ್ತು ಗಂಧಕಗಳು ವಾತಾವರಣಕ್ಕೆ ಬಿಡುಗಡೆಯಾಗಿ ಮಾಲಿನ್ಯ ಉಂಟುಮಾಡುವುದು ತಪ್ಪುತ್ತದೆ. ಈ ತಂತ್ರಜ್ಞಾನವನ್ನು ಚೀನಾ ಮೊದಲ ಬಾರಿಗೆ ಅಮೇರಿಕಾದ 275 ಮೆಗಾವ್ಯಾಟ್ ವಿದ್ಯುತ್ ತಯಾರಿಕಾ ಘಟಕವೊಂದರಲ್ಲಿ ಅಳವಡಿಸಿದೆ.

(ಆಧಾರ: ಡೆಕ್ಕನ್ ಹೆರಾಲ್ಡ್ ಲೇಖನ)

JANASHAKTHI KANNADA VARA PATRIKE AUGUST 16, 2009 Price : Rs. 5/- No. KARKAN /2006/17926 Postal Reg. No. RNP/KA/BGS/2078/2007-0

ನಂದಿಸಲಾಗದ ಹಿರೋಶಿಮಾ ನಾಗಸಾಕಿ ಬೆಂಕಿ

ಮುಗ್ಧ ನಾಗರಿಕರ ಮೇಲೆ ಅಣುಬಾಂಬ್ : ಅಮೆರಿಕದ ಕ್ರೌರ್ಯದ ಮುಖ



ಅಮೇರಿಕಾ ವಿಶ್ವದ ಪ್ರಥಮ ಅಣುಬಾಂಬ್ ಸ್ಫೋಟಿಸಿ 70 ವರ್ಷಗಳು ಗತಿಸಿವೆ. 1945ರಲ್ಲಿ ಜಪಾನಿನ ಹಿರೋಶಿಮಾ ಮತ್ತು ನಾಗಸಾಕಿ ಎಂಬ ನಗರಗಳ ಮೇಲೆ ಅಮೇರಿಕಾ ಹಚ್ಚಿದ ಬೆಂಕಿ 70 ವರ್ಷ ಕಳೆದರೂ ಇನ್ನೂ ನಂದಿಲ್ಲ. ವಿಶ್ವದ ಬಂಡವಾಳಶಾಹಿ ಬಣಗಳ ಕಿತ್ತಾಟದಲ್ಲಿ ಎರಡನೇ ವಿಶ್ವ ಯುದ್ಧ (1939-1945) ನಡೆದು ಬೆಲೆ ತೆತ್ತದ್ದು ಮಾತ್ರ ಸಾಮಾನ್ಯ ಜನತೆ. ಇದರಲ್ಲಿ 5 ಕೋಟಿಗೂ ಹೆಚ್ಚಿನ ಸಾವುಗಳು ಸಂಭವಿಸಿವೆ.

ರಷ್ಯಾದ ಕೆಂಪು ಸೇನೆಯ ಪರಾಕ್ರಮ

ದ್ವಿತೀಯ ಮಹಾಯುದ್ಧದಲ್ಲಿ ಹಿಟ್ಲರ್ ಸೇನೆ ಇಡೀ ಯೂರೋಪನ್ನೆಲ್ಲ ಗೆದ್ದು, ರಷ್ಯಾವನ್ನು ವಶಪಡಿಸಿಕೊಳ್ಳಲು ದಾಪುಗಾಲು ಹಾಕಿದ್ದ ಸಮಯವದು. ಇನ್ನೇನು ರಷ್ಯಾವನ್ನು ಗೆದ್ದುಬಿಟ್ಟರೆ, ಏಷ್ಯಾವನ್ನು ತನ್ನ ಕೈವಶ ಮಾಡಿಕೊಳ್ಳುವುದು ಬೆರಳೆಣಿಕೆಯಷ್ಟು ಕೆಲಸವೆಂದು ಹಿಟ್ಲರ್ ಮತ್ತು ಜರ್ಮನ್ ಬಂಡವಾಳಶಾಹಿಗಳು ನಂಬಿದ್ದರು. ಕ್ರಾಂತಿಕಾರಿ ರಷ್ಯದ ಕೆಂಪು ಸೇನೆಯು ಜರ್ಮನಿಯ ಹಿಟ್ಲರ್ ಸೇನೆಯನ್ನು ಬೆಚ್ಚಿಬೀಳಿಸುವ ರೀತಿಯಲ್ಲಿ ತಡೆಹಿಡಿದು ಸೋಲಿಸಿದಾಗ, ಗಾಬರಿಗೊಂಡದ್ದು ಅಮೇರಿಕಾ. ಜರ್ಮನಿಯ ಬಂಡವಾಳಶಾಹಿಗಳು ಜಗತ್ತನ್ನೆಲ್ಲ ತಮ್ಮ ತೆಕ್ಕೆಗೆ ತೆಗೆದುಕೊಳ್ಳುತ್ತಿದ್ದಾಗ ಅಮೇರಿಕಾ ತ'ಟಸ್ಥವಾಗಿಯೇ ಉಳಿದಿತ್ತು. ಏಕೆಂದರೆ ಜರ್ಮನಿಯಿನ್ನೂ ಅಮೇರಿಕಾದ ವಶದಲ್ಲಿದ್ದ ವಸಾಹತುಗಳ ಮೇಲೆ ಖಡ್ಗ ಜಳಪಿಸಿರಲಿಲ್ಲ. ಅಮೇರಿಕಾದ ನೌಕಾ ನೆಲೆ ಪರ್ಲ್ ಹಾರ್ಬರ್ ಮೇಲೆ ಧಾಳಿ ನಡೆಸಿದ್ದರೂ ಅದು ಅಣುಬಾಂಬ್ ಪ್ರಯೋಗಿಸಲು ಮುಂದಡಿ ಇಟ್ಟಿರಲಿಲ್ಲ.

ಆದರೆ, ಹಿಟ್ಲರ್ ಸೇನೆಯ ವಿರುದ್ಧ ರಷ್ಯಾದ ಕೆಂಪು ಸೇನೆಯು ಗೆಲುವು ಸಾಧಿಸಿದಾಗ, ಇದು ಕಮ್ಯುನಿಸಂನ್ನು ಯೂರೋಪಿನಾದ್ಯಂತ ವಿಸ್ತರಿಸುವುದಲ್ಲದೆ ಚೀನಾವನ್ನು ಒಳಗೊಂಡಂತೆ ಏಷ್ಯಾದಲ್ಲಿಯೂ ತನ್ನ ಪ್ರಭಾವವನ್ನು ಹರಡುವುದೆಂದು ಅಮೇರಿಕಾದ ಬಂಡವಾಳಶಾಹಿ ಬೆಚ್ಚಿ ಬಿದ್ದಿತು. ಎರಡನೇ ವಿಶ್ವಯುದ್ಧ ಇನ್ನೇನು ಮುಕ್ತಾಯ ಹಂತದಲ್ಲಿತ್ತು. ಆದರೂ ಈ ಯುದ್ಧ ರಣಾಂಗಣವನ್ನು ತಡವಾಗಿಯಾದರೂ ಪ್ರವೇಶಿಸಲು ಅಮೇರಿಕಾ ತಳಮಳಿಸುತ್ತಿತ್ತು.



ಜರ್ಮನಿ ಈಗಾಗಲೇ ರಷ್ಯನ್ ಸೇನೆಯಿಂದ ಸೋತು ಶರಣಾಗತವಾಗಿದ್ದರಿಂದ ಅದರ ಮೇಲೆ ಬಾಂಬ್ ಪ್ರಯೋಗಿಸಲು ಸಾಧ್ಯವಿರಲಿಲ್ಲ. ಜಪಾನ್ ಕೂಡ ಶರಣಾಗಲು ಸಿದ್ಧವಿತ್ತು. ಏಕೆಂದರೆ, ನಿರಂತರ 6 ತಿಂಗಳ ಕಾಲ ಜಪಾನಿನ ಪ್ರಮುಖ 67 ನಗರಗಳ ಮೇಲೆ ಅಮೇರಿಕಾ-ಬ್ರಿಟನ್ನಿನ ಮೈತ್ರಿಕೂಟ ಬಾಂಬುಗಳ ಸುರಿಮಳೆಗೈಯುತ್ತಿದ್ದವು. ಜಪಾನಿನ ನಗರಗಳೆಲ್ಲ ಸಂಪೂರ್ಣ ನೆಲಸಮಗೊಂಡಿದ್ದು, ಜಪಾನಿನ ರಾಜ ಕುಟುಂಬವು ಶರಣಾಗುವುದಾಗಿ ಘೋಷಿಸಿತ್ತು.

ರಹಸ್ಯ ಮ್ಯಾನ್ ಹಟ್ಟನ್ ಬಾಂಬು ಯೋಜನೆ

ಆದರೆ, ಜಪಾನಿನ ಮೇಲೆ ಪ್ರಬಲವಾದ ಬಾಂಬ್ ದಾಳಿ ನಡೆಸಿ ಸೋಲಿಸದೇ ಇದ್ದಲ್ಲಿ ಜಪಾನಿನಲ್ಲಿರುವ ಅಮೇರಿಕನ್ನರಿಗೂ ಮತ್ತು ಅಮೇರಿಕಾ ದೇಶಕ್ಕೂ ಇದು ಗಂಡಾಂತರವಾಗುವುದೆಂದು ಅಮೇರಿಕಾದ್ಯಂತ ಸುಳ್ಳು ಸುಳ್ಳೇ ವದಂತಿ ಹಬ್ಬಿಸಲಾಯಿತು. ಏಕೆಂದರೆ, ಅಮೇರಿಕಾದ ಅಂದಿನ ಅಧ್ಯಕ್ಷ ಟ್ರುಮನ್ ರಹಸ್ಯವಾಗಿ ಅಣುಬಾಂಬ್ ತಯಾರಿಕಾ ಯೋಜನೆಗೆ ಚಾಲನೆ ನೀಡಿದ್ದು , ಅದು ಯಶಸ್ವಿಯಾಗುವ ಹಂತದಲ್ಲಿತ್ತು. ಅಮೇರಿಕಾದ ಸಂಸತ್ತಿಗೂ ಕೂಡ ಮ್ಯಾನ್ ಹಟ್ಟನ್ ಯೋಜನೆ ಎಂದು ಕರೆಯುವ ಬಾಂಬು ತಯಾರಿಕೆ ಕುರಿತು ತಿಳಿದಿರಲಿಲ್ಲ. ಅಷ್ಟು ರಹಸ್ಯದಿಂದ 200 ಕೋಟಿ ಡಾಲರ್ ಯೋಜನೆಯನ್ನು ಕಾಪಾಡಲಾಗಿತ್ತು.

ಅಮೇರಿಕಾದ ಬಂಡವಾಳಶಾಹಿಯು ವಿಶ್ವದಲ್ಲಿ ತನ್ನ ಯಜಮಾನಿಕೆಯನ್ನು ಸ್ಥಾಪಿಸಿ ಇತರೆ ದೇಶಗಳ ಮೇಲೆ ಬಿಗಿಹಿಡಿತ ಸಾಧಿಸಬೇಕಾದರೆ ತಾನೆಷ್ಟು ಸಮರ್ಥ ಮತ್ತು ತಾನ್ಯಾವ ಕ್ರೌರ್ಯಗಳಿಗೂ ಹೇಸುವುದಿಲ್ಲವೆಂದು ವಿಶ್ವ ಭೂಮಿಕೆಯ ಮೇಲೆ ಸಾಧಿಸಿತೋರಿಸಬೇಕಿದ್ದಿತು. ಇಲ್ಲದಿದ್ದಲ್ಲಿ, ರಷ್ಯಾದ ಸಮಾಜವಾದಿ ಜನತೆಯ ಕ್ರಾಂತಿಯ ಕೀರ್ತಿಪತಾಕೆ ದಶದಿಕ್ಕುಗಳಲ್ಲಿಯೂ ಪಸರಿಸಿದಂತೆ ಎಲ್ಲೆಡೆ ಕೆಂಪು ಬಾವುಟಗಳು ನೆಲೆಯೂರುವ ಸಾಧ್ಯತೆಗಳು ಬಂಡವಾಳಶಾಹಿಗಳನ್ನು ಚಿಂತೆಗೀಡು ಮಾಡಿದ್ದವು.

ಸಾಮಾನ್ಯ ಜಪಾನೀ ಜನತೆಯ ಮೇಲೆ ಬಾಂಬಿನ ಸುರಿಮಳೆ

1945ರ ಆಗಸ್ಟ್ 6 ರಂದು ಹಿರೋಶಿಮಾದ ಮೇಲೂ, ಇದಾದ ಮೂರುದಿನಗಳ ನಂತರ ನಾಗಸಾಕಿಯ ಮೇಲೂ ಭಯಾನಕ ಪರಮಾಣು ಬಾಂಬುಗಳನ್ನು ಅಮೇರಿಕಾ ಸ್ಫೋಟಿಸಿ ಪ್ರಯೋಗ ಪರೀಕ್ಷೆ ನಡೆಸಿಯೇ ಬಿಟ್ಟಿತು. ಹಿರೋಶಿಮಾ ಮತ್ತು ನಾಗಸಾಕಿ ನಗರಗಳು ಜಪಾನಿನ ಕೈಗಾರಿಕಾ ಕೇಂದ್ರಗಳಾಗಿದ್ದು ಅಪಾರ ಸಂಖ್ಯೆಯ ಕೈಗಾರಿಕೆಗಳು, ಕಾರ್ಮಿಕರು ಮತ್ತು ಜನತೆ ಅಲ್ಲಿ ವಾಸವಿದ್ದರು. ಇದರಲ್ಲಿ ತಕ್ಷಣಕ್ಕೆ ಸತ್ತವರ ಸಂಖ್ಯೆ 2,50,000 ಜನ. ಇಡೀ ನಗರಗಳ ಕಟ್ಟಡಗಳು, ಮನೆಗಳು, ಆಸ್ಪತ್ರೆಗಳು, ಶಾಲೆಗಳು ಎಲ್ಲ ನೆಲಸಮಗೊಂಡವು. ಕಂಗೊಳಿಸುತ್ತಿದ್ದ ನಗರ ಬಂಜರು ಭೂಮಿಯಾಯಿತು. ಅಪಾರ ಸಂಖ್ಯೆಯ ಜನತೆ ಲ್ಯುಕೇಮಿಯ, ಕ್ಯಾನ್ಸರ್ ಮುಂತಾದ ವಿಕಿರಣ ಸಂಬಂಧಿತ ಕಾಯಿಲೆಗಳಿಗೆ ತುತ್ತಾದರು. ವಿಕಿರಣ ಸಂಬಂಧಿತ ಕಾಯಿಲೆಗಳು ಹಲವು ಪೀಳಿಗೆಯವರೆಗೂ ಜಪಾನೀಯರನ್ನು ಕಾಡುತ್ತಿವೆ. ಭೂಮಿಯಲ್ಲಿ ಕೃಷಿ ಮಾಡಲು ಸಾಧ್ಯವೇ ಇಲ್ಲವೆಂಬ ಪರಿಸ್ಥಿತಿಯಿದೆ. ಬಾಂಬು ಸ್ಫೋಟಿಸಿದ ಸುತ್ತಲಿನ ಹಲವು ಕಿಲೋಮೀಟರ್‌ವರೆಗಿನ ಜೈವಿಕ ಪರಿಸರ ನಿರ್ನಾಮವಾಯಿತು.

ಹಿಟ್ಲರ್, ಟ್ರುಮನ್ ಮತ್ತು ಮೋದಿಗಳ ಫ್ಯಾಸಿಸ್ಟ್ ಮುಖವಾಡ:

'ಈ ಅಣುಬಾಂಬನ್ನ ಎಷ್ಟು ಸಾಧ್ಯವೋ ಅಷ್ಟು ಬೇಗ ಬಳಸಬೇಕು. ಮನೆಗಳು ಮತ್ತು ಇತರೆ ಕಟ್ಟಡಗಳಲ್ಲಿ ಹೆಚ್ಚು ಜನ ವಾಸಿಸುವಂಥ ಸೂಕ್ಷ್ಮಸ್ಥಳಗಳಲ್ಲಿ ಹೆಚ್ಚು ಹಾನಿಯುಂಟಾಗುವಂಥಹ ಪ್ರದೇಶಗಳಲ್ಲಿಯೇ ಇದನ್ನು ಬಳಸಿ ಪರೀಕ್ಷಿಸಬೇಕು,ಇದೆಂಥ ದೈತ್ಯ ಬಾಂಬ್ ಎಂದು ಯಾರಿಗೂ ತಿಳಿಯದ ರೀತಿಯಲ್ಲಿ ಹಾಕಬೇಕು'.

ಇಂಥಹ ರಹಸ್ಯ ಸಂದೇಶವನ್ನು ವಿಜ್ಞಾನಿಗಳಿಗೆ ರವಾನಿಸಿದ್ದು ಅಂದಿನ ಅಮೇರಿಕಾದ ಆಡಳಿತ. ಈ ಮಾತುಗಳು ಅಧ್ಯಕ್ಷ ಟ್ರುಮನ್ ಅಧ್ಯಕ್ಷತೆಯಲ್ಲಿ ಜರುಗುತ್ತಿದ್ದ ಮ್ಯಾನಹಟ್ಟನ್ ಸಂಶೋಧನಾ ಯೋಜನೆಯಲ್ಲಿ ತೊಡಗಿದ್ದ ಬಹುಪಾಲು ಬಂಡವಾಳಶಾಹಿಯ ಧೋರಣೆಗೆ ಸಾಕ್ಷಿಯಂತಿವೆ. ಹಲವು ವಿಜ್ಞಾನಿ ಸಮುದಾಯ ಅಂಥದೊಂದು ಭೀಭತ್ಸ ಬಾಂಬನ್ನು ಸಾಮಾನ್ಯ ಜನತೆಯ ಮೇಲೆ ಪ್ರಯೋಗಿಸುವದು ಬೇಡವೆಂದು ಅಂದಿನ ದಿನಗಳಲ್ಲಿ ವಿರೋಧಿಸಿದ್ದರೂ, ಅಣುಬಾಂಬ್ ಹಾಕಲು ಅನುಮತಿ ನೀಡಿದ್ದು ಅಮೇರಿಕಾದ ಅಧ್ಯಕ್ಷ ಟ್ರುಮನ್.

ಜನಾಂಗೀಯ ಶ್ರೇಷ್ಟತೆಯಲ್ಲಿ ನಂಬುಗೆಯಿಟ್ಟಿರುವ ಫ್ಯಾಸಿಸ್ಟರ ಮನೋಭಾವ ಅನ್ಯ ಜನಾಂಗಗಳ ಮಾರಣಹೋಮ ನಡೆಸುವ ಅನಾಗರೀಕತೆಯಿಂದ ತುಂಬಿತುಳುಕುವುದನ್ನು ಇತಿಹಾಸದಿಂದ ನಾವು ಅರಿಯಬಹುದು. ಕೋಮುವಾದಿ ಮೋದಿಯೇ ಇರಲಿ, ಬಂಡವಾಳಶಾಹಿಗಳ ಪ್ರತಿನಿಧಿಯಾಗಿದ್ದ ಅಮೇರಿಕಾದ ಅಧ್ಯಕ್ಷ ಟ್ರುಮನ್ ಅವರೇ ಇರಲಿ, ಫ್ಯಾಸಿಸ್ಟ್ ಹಿಟ್ಲರ್ ಇರಲಿ, ಇವರೆಲ್ಲ ಜನಾಂಗೀಯ ದ್ವೇಷಕ್ಕೆ ಮತ್ತು ಬಂಡವಾಳಶಾಹಿಯು ಅದನ್ನು ದುರ್ಬಳಕೆ ಮಾಡಿಕೊಳ್ಳುವುದಕ್ಕೆ ಇರುವ ಜ್ವಲಂತ ಉದಾಹರಣೆಗಳು.

ಇಂದು ಅಮೇರಿಕಾದ ಸಾಮ್ರಾಜ್ಯಶಾಹಿ ಮತ್ತು ನಮ್ಮ ದೇಶದಲ್ಲಿನ ಕೋಮುವಾದಿ ಶಕ್ತಿಗಳಿಗೆ ಇದೇ ದೇಶದ ಬಲಾಢ್ಯ ಬಂಡವಾಳಶಾಹಿಗಳು ಒತ್ತಾಸೆಯಾಗಿ ನಿಂತಿವೆ. ಅವು ಲಾಭಕ್ಕಾಗಿ ಎಂಥಹ ಬರ್ಭರ ಹಾದಿಯನ್ನೂ ಹಿಡಿಯಲು ಹೇಸುವುದಿಲ್ಲವೆಂಬುದಕ್ಕೆ ಹಿರೋಶಿಮಾ ನಾಗಸಾಕಿಯೇ ಸಾಕ್ಷಿ.



■ ಜೆ.ಕೆ.

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY
OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published
at BANGALORE
No 12 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH

ಸಂಪಾದಕರ